ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 28 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 191 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರಲ್ಲಿ ಉದ್ದೇಶಿತ ಕಿದ್ವಾಯಿ ಆಸ್ಪತ್ರೆಗೆ 50 ಕೋಟಿ ರೂ. ಅನುದಾನ ಕಲ್ಪಿಸಿ

ಆರೋಗ್ಯ ಸಚಿವ ಡಾ. ಕೆ.ಸುಧಾಕರ್‌ಗೆ ಸಂಸದ ಪ್ರತಾಪ್ ಸಿಂಹ ಮನವಿ



ಮೈಸೂರು,ಅ.27(ಆರ್‌ಕೆ)–ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಿದ್ವಾಯಿ ಸ್ಮಾರಕ ಗ್ರಂಥಿ ಆಸ್ಪತ್ರೆ ಕಟ್ಟಡಕ್ಕೆ 50 ಕೋಟಿ ರೂ. ಅನುದಾನ ನೀಡುವಂತೆ ಸಂಸದ ಪ್ರತಾಪ್ ಸಿಂಹ ಅವರು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರಿಗೆ ಮನವಿ ಮಾಡಿದ್ದಾರೆ.

ಮೈಸೂರಿಗೆ ಆಗಮಿಸಿದ್ದ ಸಚಿವರನ್ನು ಗುರುವಾರ ಜಲದರ್ಶಿನಿ ಅತಿಥಿಗೃಹದಲ್ಲಿ ಭೇಟಿ ಮಾಡಿದ ಪ್ರತಾಪ್ ಸಿಂಹ ಅವರು, ಕ್ಯಾನ್ಸರ್ ಪೀಡಿತ ರೋಗಿಗಳ ಚಿಕಿತ್ಸೆಗಾಗಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಿಂದ ಪಿಕೆಟಿಬಿ ಆಸ್ಪತ್ರೆ ಆವರಣದ 7 ಎಕರೆ ಪ್ರದೇಶದಲ್ಲಿ ಕಿದ್ವಾಯಿ ಆಸ್ಪತ್ರೆ ಕಟ್ಟಡ ನಿರ್ಮಿಸಲು ಉದ್ದೇಶಿಸಿದ್ದು, ಬಡ ರೋಗಿಗಳಿಗೆ ಚಿಕಿತ್ಸೆ ನೀಡಲು ಕ್ರಿಯಾ ಯೋಜನೆ ರೂಪಿಸಲಾಗಿದೆ ಎಂದರು.

ಅಂದಾಜು ಪಟ್ಟಿ, ಯೋಜನೆಯ ಡಿಪಿಆರ್‌ನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚಕ್ಕೆ ಅನುದಾನ ಕೋರಲಾಗಿದೆ. ಅಲ್ಲದೆ ಸದರಿ ಉದ್ದೇಶಕ್ಕೆ ಸಿಎಸ್‌ಆರ್ ಅಡಿ 50 ಕೋಟಿ ರೂ. ಆರ್ಥಿಕ ನೆರವು ನೀಡುವಂತೆ ಇನ್ಫೋಸಿಸ್ ಫೌಂಡೇಷನ್‌ಗೂ ಮನವಿ ಮಾಡಿಕೊಳ್ಳಲಾಗಿದೆ ಎಂದು ಪ್ರತಾಪ್ ಸಿಂಹ ಸಚಿವ ಡಾ.ಸುಧಾಕರ್ ಅವರಿಗೆ ವಿವರಿಸಿದರು.

ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಮೈಸೂರು, ಕೊಡಗು, ಹಾಸನ, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಗಳ ಬಡ ರೋಗಿಗಳಿಗೆ ಉಚಿತವಾಗಿ ಉತ್ತಮ ಚಿಕಿತ್ಸೆ ನೀಡುವ ಸಲುವಾಗಿ ಮೈಸೂರಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಕಟ್ಟಡ ನಿರ್ಮಿಸಲು ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ 7 ಎಕರೆ ಜಾಗ ಮತ್ತು 50 ಕೋಟಿ ರೂ. ಅನುದಾನ ಕೋರಿ ಸಲ್ಲಿಸಿರುವ ಕಡತ ಪರಿಶೀಲಿಸಿ ತ್ವರಿತವಾಗಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿ, ಅನುಮೋದನೆ ಕಲ್ಪಿಸಿಕೊಡಲು ಸಹಕರಿಸುವಂತೆಯೂ ಅವರು ಕೋರಿಕೊಂಡಿದ್ದಾರೆ. ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಸಚಿವ ಡಾ.ಸುಧಾಕರ್, ಸಚಿವ ಸಂಪುಟದಲ್ಲಿ ಚರ್ಚಿಸಿ ಯೋಜನೆಗೆ ಅನುಮೋದನೆ ಕಲ್ಪಿಸಿಕೊಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ.

ಮೈಸೂರು ನೂತನ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರ ಸ್ವೀಕಾರ

ಸರ್ಕಾರಿ ಸೌಲಭ್ಯಗಳನ್ನು ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವುದು ನಮ್ಮ ಪ್ರಥಮ ಆದ್ಯತೆ

ಮೈಸೂರು, ಅ.27(ಆರ್‌ಕೆ)– ಮೈಸೂರು ನೂತನ ಜಿಲ್ಲಾಧಿಕಾರಿಯಾಗಿ ಡಾ.ಕೆ.ವಿ.ರಾಜೇಂದ್ರ ಇಂದು ಅಧಿಕಾರ ವಹಿಸಿಕೊಂಡರು. ನಂತರ ಅಧಿಕಾರ ವಹಿಸಿಕೊಟ್ಟ ನಿರ್ಗಮಿತ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪುಷ್ಪಗುಚ್ಛ ನೀಡಿ, ಶುಭ ಕೋರಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಕೆ.ವಿ.ರಾಜೇಂದ್ರ, ರಾಜ್ಯದ ಸಾಂಸ್ಕೃತಿಕ ರಾಜಧಾನಿ ಮೈಸೂರಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿರುವುದು ನನ್ನ ಪುಣ್ಯ ಎಂದರು.

ಮೈಸೂರು ಜಿಲ್ಲಾಧಿಕಾರಿಯಾಗಿ ನಿಯೋಜಿಸಿ, ಜನರ ಸೇವೆಗೆ ಅವಕಾಶ ಕಲ್ಪಿಸಿರುವ ಸರ್ಕಾರಕ್ಕೆ ಧನ್ಯವಾದ ಹೇಳಿದ ನೂತನ ಜಿಲ್ಲಾಧಿಕಾರಿ ಡಾ.ರಾಜೇಂದ್ರ, ವಿಶ್ವ ಪ್ರಸಿದ್ಧ ದಸರಾ ಮಹೋತ್ಸವ ಈಗಷ್ಟೇ ಮುಗಿದಿದೆ. ಇಡೀ ಪ್ರಪಂಚ ತಿರುಗಿ ನೋಡುವಂತೆ ಯಾವುದೇ ಅಡ್ಡಿ ಆತಂಕಗಳಿಲ್ಲದಂತೆ ಅದ್ಧೂರಿಯಾಗಿ ನಾಡಹಬ್ಬ ಆಚರಿಸುವಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಯಶಸ್ವಿಯಾಗಿದ್ದಾರೆ. ಅವರ ಪ್ರೇರಣೆ ಹಾಗೂ ಜನಪ್ರತಿನಿಧಿಗಳು, ಅಧೀನ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಸಾರ್ವಜನಿಕರ



ಗುರುವಾರ ಮೈಸೂರು ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಡಾ.ಕೆ.ವಿ.ರಾಜೇಂದ್ರ ಅವರನ್ನು ನಿರ್ಗಮಿತ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅಧಿಕಾರ ವಹಿಸಿಕೊಟ್ಟ ನಂತರ, ಹೂಗುಚ್ಛ ನೀಡಿ, ಶುಭ ಕೋರಿದರು.

ಸಹಕಾರ ಪಡೆದು ಕಾರ್ಯನಿರ್ವಹಿಸುತ್ತೇನೆ ಎಂದರು.

ಈವರೆಗೆ ಜಿಲ್ಲಾಧಿಕಾರಿ ಕಚೇರಿ ಜನರಿಗೆ ಹೇಗೆ ಹತ್ತಿರವಾಗಿ ಕೆಲಸ ಮಾಡುತ್ತಿದೆಯೋ ಹಾಗೆಯೇ ತಾವೂ ಜನಸ್ನೇಹಿಯಾಗಿ ಸರ್ಕಾರದ ಸೌಲಭ್ಯಗಳನ್ನು ಆದ್ಯತೆ ಮೇಲೆ ಜನರ ಮನೆ ಬಾಗಿಲಿಗೆ ತಲುಪಿಸುವುದೇ ನನ್ನ ಗುರಿ. ನಮ್ಮ ಮುಂದೆ ಎದುರಾಗುವ ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿ ಪರಿಹರಿಸುವತ್ತ ಗಮನಹರಿಸುವುದಾಗಿಯೂ ಡಾ.ರಾಜೇಂದ್ರ ಇದೇ ಸಂದರ್ಭ ನುಡಿದರು.

ವಿಷನ್ ಮೈಸೂರು ಪರಿಕಲ್ಪನೆಯನ್ನು ಸಾಕಾರಗೊಳಿಸಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುತ್ತೇನೆ. ಪರಿಣಾಮಕಾರಿ ಆಡಳಿತ ನಿರ್ವಹಿಸುವುದು ನನ್ನ ಧ್ಯೇಯ ಎಂದು ತಿಳಿಸಿದರು.

ಇದೇ ವೇಳೆ ನಿರ್ಗಮಿತ ಡಿಸಿ ಡಾ.ಬಗಾದಿ ಗೌತಮ್ ಅವರನ್ನು ಜಿಲ್ಲಾಡಳಿತದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು. ಎಡಿಸಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ನಗರಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದು ಡಾ.ಬಗಾದಿ ಗೌತಮ್ ಅವರನ್ನು ಆತ್ಮೀಯವಾಗಿ ಬೀಳ್ಕೊಟ್ಟರು. ಡಾ.ರಾಜೇಂದ್ರ, 2013ನೇ ಸಾಲಿನ ಕರ್ನಾಟಕ ಕೇಡರ್ ಐಎಎಸ್ ಅಧಿಕಾರಿ.

'ಸಂಸಾರದಲ್ಲಿ ಸನಿದಪ' ಹಾಸ್ಯ ನಾಟಕ

ಮೈಸೂರು,ಅ.27–ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗ ಮಂದಿರದಲ್ಲಿ ರಂಗವಲ್ಲಿ ತಂಡದಿಂದ ಅ.29 ಹಾಗೂ 30ರಂದು ಸಂಜೆ 7 ಗಂಟೆಗೆ 'ಸಂಸಾರದಲ್ಲಿ ಸನಿದಪ' ಹಾಸ್ಯ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಕೆ.ವಿ. ಅಕ್ಷರ ರಚಿಸಿರುವ ಈ ನಾಟಕದ ನಿರ್ದೇಶಕರು ರವಿಪ್ರಸಾದ್.



ಇಟ್ಕೊಂಡೋಳು ಇರೋತನಕ ಕಟ್ಕೊಂಡೋಳು ಕೊನೇತನಕ ಎಂಬ ಬುದ್ಧಿವಾದದ ಮಾತೊಂದಿದೆ. ತಪ್ಪು ತಿಳುವಳಿಕೆಯಿಂದ ತಬ್ಬಿಬ್ಬಾದ ಗಂಡಂದಿರ, ಹೆಂಡತಿಯರ ಮೋಜು, ಪೇಚು, ಪರದಾಟ– ನೋಡುಗರಿಗೆ ಹೊಟ್ಟೆ ತುಂಬ ನಗು. ಇದು ಮೇಲ್ನೋಟಕ್ಕೆ ನಗೆ ನಾಟಕದಂತೆ ಕಂಡರೂ ಸಂಭಾವಿತರಂತೆ ಮುಖವಾಡ ತೊಟ್ಟ ದಂಪತಿಗಳ, ದಾಂಪತ್ಯ ಸಂಬಂಧಗಳ ಕೊಂಡಿ ಸಡಿಲಗೊಂಡರೆ ಆಗಬಹುದಾದ ದುರಂತಕ್ಕೆ ಎಚ್ಚರಿಕೆ ನೀಡುವಂತಿದೆ ಈ ನಾಟಕ.

ಗೀತಾ, ರಾಜಲಕ್ಷ್ಮಿ, ಭವ್ಯಶ್ರೀ, ಮಧುರಾಣಿ, ಮಂಜುನಾಥಶಾಸ್ತ್ರಿ, ಹರಿಪ್ರಸಾದ್, ರಾಜೇಶ್, ರವಿಪ್ರಸಾದ್ ಅಭಿನಯಿಸಿರುವ, ಒಂದೂವರೆ ತಾಸು ಅವಧಿಯ ಈ ನಗೆನಾಟಕಕಕ್ಕೆ ಹರಿಪ್ರಸಾದ್ ವಸ್ತ್ರವಿನ್ಯಾಸ, ಮಹೇಶ್–ಬೆಳಕಿನ ವಿನ್ಯಾಸ, ಸರಿತಾ ರಾಜೇಶ್–ಪ್ರಸಾದನ, ಮಂಜುಮಂಗಲ ಸಂಗೀತ ನಿರ್ವಹಣೆ ಮಾಡಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ.ಸಂ. 9590259590/ 9964656482 ಸಂಪರ್ಕಿಸಬಹುದು.

ಹೃದಯಾಘಾತದಿಂದ ಸಿಎಆರ್ ಕಾನ್‌ಸ್ಟೇಬಲ್ ಸಾವು

ಮೈಸೂರು,ಅ.27–(ಆರ್‌ಕೆ)–ತೀವ್ರ ಹೃದಯಾಘಾತದಿಂದ ಕರ್ತವ್ಯನಿರತ ಮೈಸೂರಿನ ಸಿಎಆರ್ ಕಾನ್‌ಸ್ಟೇಬಲ್ ಶ್ಯಾಮ್(37) ಅವರು ಬುಧವಾರ ರಾತ್ರಿ ಸಾವನ್ನಪ್ಪಿದ್ದಾರೆ. ಮಂಡಕಳ್ಳಿಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬುಧವಾರ ರಾತ್ರಿ 7.30 ಗಂಟೆ ವೇಳೆಗೆ ಎದೆ ನೋವು ಕಾಣಿಸಿಕೊಂಡ ಶ್ಯಾಮ್‌ರನ್ನು ಸಹೋದ್ಯೋಗಿಯೊಬ್ಬರು ತಕ್ಷಣ ಕೆಆರ್‌ಎಸ್ ರಸ್ತೆಯ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಗೆ ಕರೆದೊಯ್ದರಾದರೂ, ವೈದ್ಯರು ಚಿಕಿತ್ಸೆ ಆರಂಭಿಸುತ್ತಿದ್ದಂತೆಯೇ ಅವರು ಕೊನೆಯುಸಿರೆಳೆದರು ಎಂದು ಸಿಎಆರ್ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ.



ಮೂಲತಃ ನಂಜನಗೂಡು ತಾಲೂಕು, ತಗಡೂರು ಗ್ರಾಮದವರಾದ ಶ್ಯಾಮ್, ಮೈಸೂರು ತಾಲೂಕು ಮಂಡಕಳ್ಳಿಯಲ್ಲಿ ವಾಸವಾಗಿದ್ದರು. ಅವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ತಂದೆ–ತಾಯಿ ಹಾಗೂ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಗುರುವಾರ ಮಧ್ಯಾಹ್ನ ಸ್ವಗ್ರಾಮ ತಗಡೂರಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈ ಹಿಂದೆ ವಿಧಾನಪರಿಷತ್ ಸದಸ್ಯರಾಗಿದ್ದ ಸಂದೇಶ್ ನಾಗರಾಜ್ ಅವರ ಗನ್‌ಮ್ಯಾನ್ ಆಗಿದ್ದ ಶ್ಯಾಮ್, ನಂತರ ಮಂಡಕಳ್ಳಿ ವಿಮಾನ ನಿಲ್ದಾಣದ ಭದ್ರತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅವರ ನಿಧನಕ್ಕೆ ಸಂದೇಶ್ ನಾಗರಾಜ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಸಿಎಆರ್, ಡಿಸಿಪಿ ಶಿವರಾಜ್ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ತೀವ್ರ ಸಂತಾಪ ಸೂಚಿಸಿದ್ದಾರೆ.

ಚಾಮುಂಡೇಶ್ವರಿ ದರ್ಶನ ಪಡೆದ ನೂತನ ಜಿಲ್ಲಾಧಿಕಾರಿ ದಂಪತಿ

ಮೈಸೂರು,ಅ.27(ಆರ್‌ಕೆ)–ಮೈಸೂರು ನೂತನ ಜಿಲ್ಲಾಧಿಕಾರಿಯಾಗಿ ಇಂದು ಅಧಿಕಾರ ವಹಿಸಿಕೊಂಡಿರುವ ಡಾ. ಕೆ.ವಿ. ರಾಜೇಂದ್ರ, ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿ ಹಾಗೂ ದಕ್ಷಿಣ ಕಾಶಿ ಎಂದೇ ಖ್ಯಾತಿಯಾಗಿರುವ ನಂಜನಗೂಡಿನ ಶ್ರೀಕಂಠೇಶ್ವರನ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಬುಧವಾರ ರಾತ್ರಿಯೇ ಶಿವಮೊಗ್ಗದ ತೀರ್ಥಹಳ್ಳಿಯಿಂದ ಮೈಸೂರಿಗೆ ಆಗಮಿಸಿ ವಾಸ್ತವ್ಯ ಹೂಡಿದ್ದ ಅವರು, ಇಂದು (ಗುರುವಾರ) ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ಪತ್ನಿ ಡಾ. ವರ್ಷಿತಾ ಮತ್ತು ಪುತ್ರಿ ಆದ್ರಿತಿಯೊಂದಿಗೆ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದರು. ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಗೋವಿಂದ ರಾಜು, ಪ್ರಧಾನ ಅರ್ಚಕ ಡಾ.ಶಶಿಶೇಖರ ದೀಕ್ಷಿತ್, ನೂತನ ಜಿಲ್ಲಾಧಿಕಾರಿ ಡಾ. ರಾಜೇಂದ್ರ ದಂಪತಿಯನ್ನು ಪುಷ್ಪಗುಚ್ಛ ನೀಡಿ ಬರಮಾಡಿಕೊಂಡು, ದೇವರ ದರ್ಶನ ಮಾಡಿಸಿದರು. ನಂತರ ಅವರು ನಂಜನಗೂಡಿಗೆ ತೆರಳಿ ಶ್ರೀ ನಂಜುಂಡೇಶ್ವರನ ದರ್ಶನ ಮಾಡಿ, ಅಲ್ಲಿನ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಅರ್ಚಕರೊಂದಿಗೆ ಚರ್ಚಿಸಿ ದೇವಸ್ಥಾನದ ಕಾರ್ಯನಿರ್ವಹಣೆ ಕುರಿತು ಮಾಹಿತಿ ಸಂಗ್ರಹಿಸಿದ ಬಳಿಕ ಮೈಸೂರಿಗೆ ಬಂದು ಮಧ್ಯಾಹ್ನ 12.40 ಗಂಟೆ ವೇಳೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಾ. ಬಗಾದಿ ಗೌತಮ್ ಅವರಿಂದ ಅಧಿಕಾರ ವಹಿಸಿಕೊಂಡರು.



ಅ.30ರಂದು ರಾಜ್ಯೋತ್ಸವ
ಕನ್ನಡ ಚಿತ್ರಗೀತೆ ಗಾಯನ



ಮೈಸೂರು,ಅ.27(ಪಿಎಂ)– ಇಂಚರ ಮೆಲೋಡೀಸ್ ಸಂಗೀತ ಪ್ರಿಯರ ತಂಡದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಅ.30ರಂದು ಕನ್ನಡ ಚಲನಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಂಡದ ಮೀರಾ ಶ್ರೀಕಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಸಂಜೆ 5.30ಕ್ಕೆ ಗಾಯನ ಕಾರ್ಯಕ್ರಮ ನಡೆಯಲಿದೆ. ಯಾವುದೇ ಸಭಾ ಕಾರ್ಯಕ್ರಮಗಳು ಇಲ್ಲದೇ ಸಂಗೀತ ಕಾರ್ಯಕ್ರಮ ಮಾತ್ರ ನಡೆಯಲಿದೆ. ಪ್ರವೇಶ ಉಚಿತವಿದೆ ಎಂದು ಹೇಳಿದರು. ತಂಡದ ಸದಸ್ಯರಾದ ಭಾನು ಪ್ರಕಾಶ್, ರೂಪಶ್ರೀ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಡಾ.ಪುನೀತ್ ರಾಜ್‌ಕುಮಾರ್ ವೃತ್ತದ ಸ್ಥಿತಿ ಶೋಚನೀಯ



ಮೈಸೂರು,ಅ.27(ಆರ್‌ಕೆ)–ಕನ್ನಡ ಸಿನಿಮಾ ರಂಗದ ದಿಗ್ಗಜ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರು ನಿಧನರಾಗಿ ನಾಳೆ (ಅ.29)ಗೆ ಒಂದು ವರ್ಷ.

ನಾಡಿನ ಜನತೆ ಅವರ ನಿಧನದಿಂದಾಗಿ ದುಃಖಿತರಾಗಿದ್ದು, ಶನಿವಾರ ಪ್ರಥಮ ವರ್ಷದ ಪುಣ್ಯ ಸ್ಮರಣೆಗೆ ಸಿದ್ಧತೆ ನಡೆಸುತ್ತಿರುವಾಗ ಮೈಸೂರಿನ ಗೋಕುಲಂ 2ನೇ ಹಂತದ ಮುಖ್ಯ ರಸ್ತೆಯ ನಿರ್ಮಲಾ ಕಾನ್ವೆಂಟ್ ಬಳಿಯ ಡಾ.ಪುನೀತ್ ರಾಜ್‌ಕುಮಾರ್ ಸರ್ಕಲ್ ನಾಮಫಲಕದ ಬಳಿ ಎಳನೀರು ಬುರುಡೆಗಳನ್ನು ಸುರಿದು ಅಶುಚಿತ್ವ ನೆಲೆಸುವಂತೆ ಮಾಡಲಾಗಿದೆ ಎಂದು ಅಭಿಮಾನಿಗಳು ಆರೋಪಿಸಿದ್ದಾರೆ.


ನಿರ್ಮಲಾ ಕಾನ್ವೆಂಟ್ ಕಟ್ಟಡದ ಕಾಂಪೌಂಡ್‌ಗೆ ಹೊಂದಿಕೊಂಡಂತೆ ಹಾಪ್‌ಕಾಮ್ಸ್ ಪಕ್ಕದಲ್ಲಿ ಮೈಸೂರು ಮಹಾನಗರ ಪಾಲಿಕೆ ಅಳವಡಿಸಿರುವ ಡಾ. ಪುನೀತ್ ರಾಜ್‌ಕುಮಾರ್ ನಾಮಫಲಕದ ಸುತ್ತ ಎಳನೀರು ಕುಡಿದು ಬಿಸಾಡಿರುವ ಬುರುಡೆಗಳನ್ನು ಸುರಿದಿದ್ದಾರೆ. ಅಲ್ಲದೆ, ಚೀಲದಲ್ಲಿಯೂ ತುಂಬಿ ಇಡಲಾಗಿದೆ.

ಒಂಟಿಕೊಪ್ಪಲು ಸರ್ಕಲ್‌ನಿಂದ ಗೋಕುಲಂ 3ನೇ ಹಂತಕ್ಕೆ ಹೋಗುವ ಹಾಗೂ ಕೆಆರ್‌ಎಸ್ ರಸ್ತೆ ಹಸು–ಕರು ಪಾರ್ಕ್‌ನಿಂದ ಪಂಚವಟಿ ಸರ್ಕಲ್ ಕಡೆಗೆ ಹೋಗುವ ಮಾರ್ಗಮಧ್ಯೆ ಮುಖ್ಯ ರಸ್ತೆಯ ಸರ್ಕಲ್‌ಗೆ ಡಾ. ಪುನೀತ್ ರಾಜ್‌ಕುಮಾರ್ ಸರ್ಕಲ್ ಎಂದು ನಾಮಕರಣ ಮಾಡಿ, ಸಿಮೆಂಟ್ ಕಾಂಕ್ರಿಟ್ ಫಲಕವನ್ನು ಅಳವಡಿಸಲಾಗಿದೆ.

6ನೇ ವಾರ್ಡ್‌ಗೆ ಸೇರಿದ ಈ ವೃತ್ತವು ಪಾಲಿಕೆ ವಲಯ ಕಚೇರಿ–4ರ ವ್ಯಾಪ್ತಿಗೆ ಬರುತ್ತದೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ಸಾಮಾನ್ಯವಾಗಿ ಬಹುತೇಕ ಅಧಿಕಾರಿಗಳು ಸಂಚರಿಸುತ್ತಾರೆ. ಡಾ.ಪುನೀತ್‌ರಾಜ್‌ಕುಮಾರ್ ಹೆಸರಿಗೆ ಅಗೌರವ ತೋರುವಂತೆ ಅದ್ವಾನ ಮಾಡಿದ್ದರೂ, ಯಾವುದೇ ಕ್ರಮ ಕೈಗೊಳ್ಳದಿರುವುದು ದುರಾದೃಷ್ಟಕರ ಎಂದು ಪುನೀತ್ ಅಭಿಮಾನಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಶ್ರೀ ಸತ್ಯ ಪ್ರಮೋದ ತೀರ್ಥ ಶ್ರೀಪಾದಂಗಳ 25ನೇ ಆರಾಧನಾ ಮಹೋತ್ಸವ

ಮೈಸೂರು,ಅ.27–ಮೈಸೂರಿನ ಅಗ್ರಹಾರದಲ್ಲಿರುವ ಉತ್ತರಾದಿ ಮಠದಲ್ಲಿ ಶ್ರೀ ಶ್ರೀ 1008 ಶ್ರೀ ಸತ್ಯ ಪ್ರಮೋದ ತೀರ್ಥ ಶ್ರೀಪಾದಂಗಳವರ 25ನೇ ಆರಾಧನಾ ಮಹೋತ್ಸವ ಹಾಗೂ ಧನ್ವಂತರಿ ಜಯಂತಿ ಅಂಗವಾಗಿ ಧನ್ವಂತರೀ ಪೂಜೆಯನ್ನು ಮಠದ ಧರ್ಮಾಧಿಕಾರಿ ಪಂಡಿತ್ ಅನಿರುದ್ಧ್ ಆಚಾರ್ ನೇತೃತ್ವದಲ್ಲಿ ನಾಳೆ (ಶುಕ್ರವಾರ)–(ಅ.28ರಂದು) ಬೆಳಿಗ್ಗೆ 11.30 ಗಂಟೆಗೆ ಅಗ್ರಹಾರದ ಉತ್ತರಾದಿ ಮಠದ ಆವರಣದಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗೆ 96869 78861 ಸಂಪರ್ಕಿಸಬಹುದು.



ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕದ ವಾರ್ಷಿಕ ಮಹಾಸಭೆ

ಮೈಸೂರು,ಅ.27–ಮೈಸೂರು ಯೂತ್ ಹಾಸ್ಟೆಲ್ ಗಂಗೋತ್ರಿ ಘಟಕದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಭಾನುವಾರ(ಅ.30) ಸಂಜೆ 4.30ಕ್ಕೆ ಮೈಸೂರು ಸರಸ್ವತಿಪುರಂ ತೆಂಗಿನ ತೋಪಿನಲ್ಲಿರುವ ಸಮುದಾಯ ಭವನದಲ್ಲಿ ನಡೆಯಲಿದೆ. ಇದೇವೇಳೆ ಸರಸ್ವತಿಪುರಂ ತೆಂಗಿನ ತೋಪಿನ ಆವರಣ ಸ್ವಚ್ಛತಾ ಕಾರ್ಯಕ್ರಮವನ್ನು ಸಂಜೆ 4 ಗಂಟೆಗೆ ಹಮ್ಮಿಕೊಂಡಿದ್ದು, ಎಲ್ಲ ಸದಸ್ಯರು ಭಾಗವಹಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಕೆ.ಪ್ರೀತಮ್‌ಗೆ ಪಿಹೆಚ್.ಡಿ

ಮೈಸೂರು,ಅ.27– ಡಾ.ಎನ್.ಸರಸ್ವತಿ ಅವರ ಮಾರ್ಗದರ್ಶನದಲ್ಲಿ ಕೆ.ಪ್ರೀತಮ್ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ನಿಧನ

ಪುದಿಯಾತಂಡ ಪೊನ್ನು ಪೊನ್ನಮ್ಮ



ಮೈಸೂರು, ಅ. 27– ದಿವಂಗತ ಪುದಿಯಾತಂಡ ಬೆಳ್ಳಿಯಪ್ಪ ಅವರ ಪತ್ನಿ ಪುದಿಯಾತಂಡ ಪೊನ್ನು ಪೊನ್ನಮ್ಮ (ಐಚಂಡ) ಅವರು ಕಲ್ಯಾಣಗಿರಿಯ ಮೂರನೇ ಮುಖ್ಯ ರಸ್ತೆ, 3ನೇ ಕ್ರಾಸ್‌ನಲ್ಲಿರುವ ಪುತ್ರಿ ಮೊಳ್ಳೇರಾ ಕವಿತಾ ಅಪ್ಪಣ್ಣ ಅವರ ನಿವಾಸದಲ್ಲಿ ಬುಧವಾರ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.

ಮೂಲತಃ ಉತ್ತರ ಕೊಡಗಿನ ಸೂರ್ಲಬ್ಬಿ ಸಮೀಪದ ಮುಟ್ಲು ಗ್ರಾಮದವರಾದ ಇವರು ಇಬ್ಬರು ಪುತ್ರಿಯರು, ಓರ್ವ ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಪಾಂಡುರಂಗನ್



ಮೈಸೂರಿನ ಗಾಂಧಿನಗರ ನಿವಾಸಿ, ನಿವೃತ್ತ ಪೋಸ್ಟ್‌ಮ್ಯಾನ್ ಹೆಚ್.ಪಾಂಡುರಂಗನ್ (84) ಬುಧವಾರ ನಿಧನರಾದರು. ಮೃತರು ಕಾಂಗ್ರೆಸ್ ಮುಖಂಡ ಪಿ.ಮೋಹನ್‌ಕುಮಾರ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ವರ್ಗ ಅಗಲಿದ್ದು, ಇಂದು ಮಧ್ಯಾಹ್ನ ಗಾಂಧಿನಗರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರ ನಿಧನಕ್ಕೆ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಶಾಸಕ ತನ್ವೀರ್ ಸೇಠ್, ಅಜೀಜ್ ಸೇಠ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸೈಯದ್ ಎಕ್ಬಾಲ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಮುಖಂಡರಾದ ಸಾಲುದ್ದೀನ್, ಸೈಯದ್ ಫಾರೂಕ್, ರಾಜೇಶ್, ರೆಹಮಾನ್ ಖಾನ್ ಇನ್ನಿತರರು ಸಂತಾಪ ಸೂಚಿಸಿದ್ದಾರೆ.

ಎಂ.ಶ್ರೀಕಂಠಮೂರ್ತಿ



ಮೈಸೂರಿನ ಗಾಂಧಿನಗರದ 3ನೇ ಮುಖ್ಯ ರಸ್ತೆಯ ನಿವಾಸಿ ಎಂ.ಶ್ರೀಕಂಠಮೂರ್ತಿ (62) ಅವರು ಅನಾರೋಗ್ಯದಿಂದ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಂಗಳವಾರ (ಅ.25) ನಿಧನರಾದರು.

ಮೃತರು ಪತ್ನಿ ಶ್ರೀಮತಿ ರುಕ್ಮಿಣಿ, ಮಕ್ಕಳಾದ ಕೆನರಾ ಬ್ಯಾಂಕ್ ಉದ್ಯೋಗಿ ಎಸ್.ಪವನ್‌ಕುಮಾರ್, ಎಸ್.ಶಾಲಿನಿ, ಎಸ್.ಕಾವ್ಯ, ಸಹೋದರರಾದ ಎಂ.ಜಗದೀಶ್, ಎಂ.ಮಹೇಶ್, ಸಹೋದರಿ ಎಂ.ಶೈಲಜಾ ಮುರುಳೀಧರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.


ಮೃತರ ಅಂತ್ಯಕ್ರಿಯೆಯು ಮಂಗಳವಾರ (ಅ.25) ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೆಚ್.ಎಸ್.ಮಂಜುನಾಥ್



ಮೈಸೂರಿನ ನಂಜುಮಳಿಗೆಯ ಹೊಸಕೇರಿ ನಿವಾಸಿ ದಿವಂಗತ ಸ್ವಾಮಿ (ನ್ಯಾಷನಲ್ ಸೌಂಡ್ ಸಿಸ್ಟಮ್) ಅವರ ಪುತ್ರ ಹೆಚ್.ಎಸ್. ಮಂಜುನಾಥ್ ಬುಧವಾರ ನಿಧನರಾದರು. ಮೃತರು ತಾಯಿ, ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.10.2022 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 24.10.2022 ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ತೃತೀಯ, ನಕ್ಷತ್ರ : ಅನೂರಾಧ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ

■ **ವೀನಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ :** ಉದ್ಘಾಟನಾ ಸಮಾರಂಭ, ಲೋಕಾರ್ಪಣೆ : ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಮಾಜಿ ಸಚಿವರಾದ ಎನ್. ಚೆಲುವರಾಯಸ್ವಾಮಿ, ಡಾ.ಹೆಚ್.ಸಿ. ಮಹದೇವಪ್ಪ, ಮಾಜಿ ಸಂಸದ ಆರ್. ಧ್ರುವನಾರಾಯಣ್, ಶಾಸಕರಾದ ಎಸ್.ಎ. ರಾಮದಾಸ್, ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಎಂ.ಜಿ. ರಸ್ತೆ, ಸಿದ್ದಪ್ಪ ಸರ್ಕಲ್ ಹತ್ತಿರ, ಲಕ್ಷ್ಮೀಪುರಂ, ಬೆಳಗ್ಗೆ 10ಕ್ಕೆ.

■ **ಜೆ.ಪಿ. ಅಭಿಮಾನಿಗಳ ಬಳಗ :** ಬಿಜೆಪಿ ಮುಖಂಡ, ಸಿಂಡಿಕೇಟ್ ಮಾಜಿ ಸದಸ್ಯ ಎಸ್. ಜಯಪ್ರಕಾಶ್ ಅವರ ಹುಟ್ಟುಹಬ್ಬದ ಅಂಗವಾಗಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ನಂಜರಾಜ ಬಹದ್ದೂರ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.15 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಯುವರಾಜ ಕಾಲೇಜು :** ನೂತನ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಮತ್ತು ಅಭಿವಿನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ. ಕೆ.ಎಸ್. ಸುರೇಶ್, ಅಧ್ಯಕ್ಷತೆ : ಯುವರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಬಿ.ಎನ್. ಯಶೋಧ, ಉಪಸ್ಥಿತರು : ಆಡಳಿತಾಧಿಕಾರಿ ಪ್ರೊ. ಹೆಚ್. ಸೋಮಶೇಖರಪ್ಪ, ಪ್ರೊ. ಕೆ.ಬಿ. ಉಮೇಶ್, ಪ್ರೊ. ಎನ್.ಎಸ್. ದೇವಕಿ, ಡಾ. ಕೆ.ಎ. ಶರ್ವಾಣಿ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಕರಾಮುವಿ ಸುದ್ದಿ ಪತ್ರಿಕೆ ಬಿಡುಗಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಪ್ರಜಾವಾಣಿ ಬ್ಯೂರೋ ಮುಖ್ಯಸ್ಥ ಕೆ. ನರಸಿಂಹಮೂರ್ತಿ, ಅಧ್ಯಕ್ಷತೆ : ಕರಾಮುವಿವಿ ಪ್ರಭಾರ ಕುಲಪತಿ ಡಾ. ಎ. ಖಾದರ್ ಪಾಷಾ, ಉಪಸ್ಥಿತರು : ಕರಾಮುವಿವಿ ಡೀನ್ ಡಾ. ಕಾಂಬ್ಳೆ ಅಶೋಕ್, ಸ್ಥಳ: ಘಟಿಕೋತ್ಸವ ಭವನ, ಕರಾಮುವಿವಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ:** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ.ನಂಜಯ್ಯ ಎಂ.ಹೊಂಗನೂರು, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ವಿಜಯಕುಮಾರಿ, ಸಂಸ್ಕೃತಿ ಚಿಂತಕ ಡಾ.ಬಸವರಾಜ ಸಬರದ ಅವರಿಂದ ನಾಥರು–ಶರಣರು–ಸೂಫಿಗಳು ಕುರಿತು ಉಪನ್ಯಾಸ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಗಂಧದಗುಡಿ ಫೌಂಡೇಷನ್ ಅಸೋಸಿಯೇಷನ್, ಜೀವನ ಧರಣ ಟ್ರಸ್ಟ್ :** ನಮ್ಮ ನಡಿಗೆ ಗಂಧದಗುಡಿ ಕಡೆಗೆ ಜಾಥಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಎಸಿಪಿ ಗಂಗಾಧರಯ್ಯ, ಕಾರ್ಮಿಕ ಅಧಿಕಾರಿ ರಾಜೇಶ್ ಕೆ. ಜಾಧವ್, ಕೆ.ಆರ್. ಟ್ರಾಫಿಕ್ ಇನ್‌ಸ್ಪೆಕ್ಟರ್ ಮಂಜುನಾಥ್, ಆರ್.ಜೆ. ಅವಿನಾಶ್, ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್, ಜೀವನಧಾರಣ ಟ್ರಸ್ಟ್ ಅಧ್ಯಕ್ಷ ಮಂಜುನಾಥ್, ಮನೋಹರ್‌ಗೌಡ, ಮಹದೇವ್ ಶೆಟ್ಟಿ, ಸ್ಥಳ: ಜೀವನ್‌ಧರಣ ಟ್ರಸ್ಟ್, ಕುವೆಂಪುನಗರ, ಬೆಳಗ್ಗೆ 11ರಿಂದ.

■ **ಉತ್ತರಾದಿ ಮಠ:** ಶ್ರೀ 1008 ಶ್ರೀ ಸತ್ಯ ಪ್ರಮೋದ ತೀರ್ಥ ಶ್ರೀಪಾದಂಗಳವರ 25ನೇ ಆರಾಧನಾ ಮಹೋತ್ಸವ, ಧನ್ವಂತರಿ ಜಯಂತಿ ಅಂಗವಾಗಿ ಧನ್ವಂತರಿ ಪೂಜೆ, ಸ್ಥಳ: ಶ್ರೀ ಉತ್ತರಾದಿ ಮಠ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು – ಒಂದು ಸಂವಾದ, ಸಾಮಾಜಿಕ, ಶೈಕ್ಷಣಿಕ, ನ್ಯಾಯಾಂಗ–ಆರಕ್ಷಕ ಜವಾಬ್ದಾರಿಗಳು, ಉದ್ಘಾಟನೆ : ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಾಸ್ತಾವಿಕ ನುಡಿ : ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಬಸವರಾಜೇಂದ್ರಸ್ವಾಮಿ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ 1ನೇ ಹಂತ, ಸಂಜೆ 4.30ಕ್ಕೆ

■ **ತುಳುಶಿವಳ್ಳಿ ಮಾಧ್ವ ಬ್ರಾಹ್ಮಣ ಮಹಾಮಂಡಳ :** ದೀಪಾವಳಿ ಹಬ್ಬದ ಪ್ರಯುಕ್ತ ಪರ್ಬಂತೊ ಪೋರ್ಲು ವಿಶಿಷ್ಟ ಕಾರ್ಯಕ್ರಮ, ಮೈಸೂರು ಚಂಡೇ ಮೇಳ ಅವರಿಂದ ಚಂಡೇ ವಾದನ, ಬೆಂಗಳೂರಿನ ಕರ್ನಾಟಕ ಕಲಾದರ್ಶಿನಿ ಅವರಿಂದ ಭಸ್ಮಾಸುರ ಮೋಹಿನಿ ಯಕ್ಷಗಾನ ಪ್ರದರ್ಶನ, ತುಳಸಿ ಮಾಧ್ವ ಮಹಿಳಾ ಮಂಡಳಿ ಮತ್ತು ವಿಶ್ವೇಶ ಕೃಷ್ಣ ಭಜನಾ ಮಂಡಳಿಯವರಿಂದ ತುಳಸಿ ನೃತ್ಯ ಸಂಕೀರ್ತನೆ, ಪಟಾಕಿ ಬಾಣ ಬಿರುಸುಗಳ ಹರಿಸುವಿಕೆ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 4.30ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ ಶ್ರೀ ವೀರಭದ್ರೇಶ್ವರ–ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ಪೂಜಾ ಕಾರ್ಯಕ್ರಮಗಳು.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ–ಗಾಯನ–ಅಂಬಯ್ಯನುಲಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 7.15 ಪ್ರಾಯೋಜಿತ ಕಾರ್ಯಕ್ರಮ 'ಸಮಗ್ರ ಶಿಕ್ಷಣ ಸಂಚಲನ', 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಟಿ.ಎನ್.ಶೇಷಗೋಪಾಲನ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ರತ್ನಮಾಲಾ ಪ್ರಕಾಶ್, ಮೈಸೂರು ಅನಂತಸ್ವಾಮಿ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ–ವಾಣಿ ಸತೀಶ್, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ– ಪ್ರೊ. ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ– ಕೆ.ಬಿ.ಮೀನಾ, 4.30 ವೃತ್ತಿ ಮಾಗದರ್ಶನ– ಇತಿಹಾಸ ಅಂದರೆ ಹಿಸ್ಟರಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಆರ್.ಡಿ. ಪವಮಾನ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, ಕೃಷಿಯಲ್ಲಿನ ಅನುಭವ ಕುರಿತು ಕೃಷಿಕ ಜೆ.ಬಿ. ಜಯರಾಮು ಅವರೊಂದಿಗೆ ಮಾತುಕತೆ, 7.45 ಮತದಾತಾ ಜಂಕ್ಷನ್ –ಭಾರತ ಚುನಾವಣಾ ಆಯೋಗದ ಪ್ರಾಯೋಜಿತ ಕಾರ್ಯಕ್ರಮ, 10.00 ರಂಗಗೀತೆಗಳು–ದಾನಸೂರ ಕರ್ಣ ನಾಟಕದ ಹಾಡು, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 28 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 191 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಬಾಗಿಲು ಹಾಕಿದ ಹಾಸನಾಂಬೆ ದೇಗುಲ



ಹಾಸನ, ಅ.27– ಹಾಸನಾಂಬೆ ಹಾಗೂ ಸಿದ್ದೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ದೇವಾಲಯದ ಆವರಣದಲ್ಲಿ ಕೆಂಡೋತ್ಸವ ನಡೆದಿದೆ. ಕೆಂಡೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಇಂದು (ಗುರುವಾರ) ಮಧ್ಯಾಹ್ನ 12 ಗಂಟೆ ಸುಮಾರಿಗೆ ಹಾಸನಾಂಬೆ ದೇಗುಲದ ಗರ್ಭಗುಡಿ ಬಂದ್ ಆಗಿದೆ. ಪುರೋಹಿತರು ಶಾಸ್ತ್ರೋಕ್ತವಾಗಿ ಗರ್ಭಗುಡಿಯ ಬಾಗಿಲು ಮುಚ್ಚಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ, ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಅಧಿಕಾರಿಗಳ ಹಾಗೂ ಜನಪ್ರತಿನಿಧಿಗಳ ಸಮ್ಮುಖದಲ್ಲಿ ಗರ್ಭಗುಡಿ ಬಾಗಿಲು ಬಂದ್ ಮಾಡಲಾಯಿತು.

ಮೈಸೂರು–ಚೆನ್ನೈ 'ವಂದೇ ಭಾರತ' ಎಕ್ಸ್‌ಪ್ರೆಸ್‌ಗೆ ನ.11ಕ್ಕೆ ಪ್ರಧಾನಿ ಮೋದಿ ಚಾಲನೆ

●ಅಂದೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆ ●ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಅನಾವರಣ ●ಪ್ರಧಾನಿಗಳಿಗೆ ಅಂದಿನ ಕಾರ್ಯಕ್ರಮದ ವಿವರ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ಬೆಂಗಳೂರು, ಅ.27(ಕೆಎಂಶಿ)–ನವೆಂಬರ್ 11ರಂದು ಪ್ರಧಾನಿ ನರೇಂದ್ರ ಮೋದಿಯವರು, ಮೈಸೂರು– ಚೆನ್ನೈ ನಡುವಿನ ವಂದೇ ಭಾರತ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಲಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರಿ ಸ್ವಾಮ್ಯದ ಯೋಜನೆಗಳನ್ನು ನಿರಂತರವಾಗಿ ರಾಜ್ಯಕ್ಕೆ ನೀಡುತ್ತಿರುವ ಪ್ರಧಾನಿ ಅವರು, ಅವುಗಳ ಉದ್ಘಾಟನೆ ಮತ್ತು ರಾಷ್ಟ್ರಕ್ಕೆ ಸಮರ್ಪಣೆ ಮಾಡಲು ನ.11ರಂದು ಒಂದು ದಿನದ ರಾಜ್ಯ ಪ್ರವಾಸ ಕೈಗೊಂಡಿದ್ದಾರೆ.


ನಗರದ ಹೃದಯ ಭಾಗದಲ್ಲಿರುವ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ದಕ್ಷಿಣ ಭಾರತದಲ್ಲಿ ಮೊದಲ ಹಾಗೂ ಭಾರತದ ಐದನೇ ವಂದೇ ಭಾರತ ಎಕ್ಸ್‌ಪ್ರೆಸ್‌ಗೆ ಚಾಲನೆ ನೀಡಲಿದ್ದಾರೆ. ಅಂದೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೊರ ಭಾಗದಲ್ಲಿ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಹಾಗೂ ಥೀಮ್ ಪಾರ್ಕ್ ಅನ್ನು ಅನಾವರಣಗೊಳಿಸಲಿದ್ದಾರೆ. ಇದೇ ವೇದಿಕೆಯಲ್ಲೇ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಉದ್ಘಾಟನೆ ಮಾಡಲಿದ್ದಾರೆ. ತಮ್ಮ ರಾಜ್ಯ ಪ್ರವಾಸಕ್ಕೆ ಸಂಬಂಧಿಸಿದಂತೆ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದದ ಮೂಲಕ ಚರ್ಚಿಸಿದರು.



ತಮ್ಮ ಭೇಟಿ ಸಂದರ್ಭದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅಡಚಣೆ ಆಗದಂತೆ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ ಎಂದು ಸಂವಾದದ ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು. ಅಂದು ಬೆಳಗ್ಗೆ 10 ಗಂಟೆಗೆ ಆಗಮಿಸುವ ಪ್ರಧಾನಿ ಅವರು ನೇರವಾಗಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಿ ಐದು ಸಾವಿರ ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಿರುವ ಎರಡನೇ ಟರ್ಮಿನಲ್ ಉದ್ಘಾಟಿಸಲಿದ್ದಾರೆ. ಈ ಟರ್ಮಿನಲ್, ವಾರ್ಷಿಕ 2.5 ಕೋಟಿ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯ ಹೊಂದಿದೆ. ಉದ್ಯಾನವನದ ವಿನ್ಯಾಸ, ಸುಸ್ಥಿರತೆ, ನೀರಿನ ಮರು ಬಳಕೆ, ವಿದ್ಯುತ್ ಬಳಕೆಯಲ್ಲಿ ಸುಸ್ಥಿರತೆ ಹೊಂದಿರುವ ಟರ್ಮಿನಲ್ ಇದಾಗಿದೆ. ನಂತರ ಸಾರ್ವಜನಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ದಕ್ಷಿಣ ಭಾರತದ ಮೊದಲ ಅತೀ ವೇಗದ ರೈಲಿಗೆ ಚಾಲನೆ ನೀಡಲಿದ್ದಾರೆ ಎಂದು ವಿವರಿಸಿದರು.

ಜೆಡಿಎಸ್ ಸರ್ಕಾರ ಬಂದರೆ ಮಾಗಡಿಯಲ್ಲಿ ಕೆಂಪೇಗೌಡ ಕೌಶಲ್ಯ ವಿಶ್ವವಿದ್ಯಾಲಯ ಸ್ಥಾಪನೆ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಭರವಸೆ



ಬೆಂಗಳೂರು, ಅ.27– ರಾಜಧಾನಿ ಬೆಂಗಳೂರಿನಲ್ಲಿ ಜೆಡಿಎಸ್ 10 ರಿಂದ 12 ಸ್ಥಾನ ಗಳಿಸಲೇಬೇಕಿದ್ದು, ಈ ನಿಟ್ಟಿನಲ್ಲಿ ಕಾರ್ಯಕರ್ತರು ಕೆಲಸ ಮಾಡಬೇಕು. ಈ ಬಾರಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬರುವ ವಿಶ್ವಾಸವಿದೆ. ಅಧಿಕಾರಕ್ಕೆ ಬಂದರೆ ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಕೌಶಲ್ಯ ಶಿಕ್ಷಣ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು.


ಬೆಂಗಳೂರಿನ ಬಸವನಗುಡಿಯಲ್ಲಿ ಗುರುವಾರ ಜೆಡಿಎಸ್ 'ಪಂಚರತ್ನ ರಥಯಾತ್ರೆ'ಗೆ ಚಾಲನೆ ನೀಡಿದ ಬಳಿಕ ಬಹಿರಂಗ ಸಭೆಯಲ್ಲಿ ಕುಮಾರಸ್ವಾಮಿ ಮಾತನಾಡಿದರು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಪಾಪದ ಕೊಡ ತುಂಬಿದೆ. ಕಾಂಗ್ರೆಸ್‌ನವರು ಯಾವ ಜೋಡೋ ಆದರೂ ಮಾಡಿಕೊಳ್ಳಲಿ. ಬಿಜೆಪಿಯವರು ಯಾವ ಸಂಕಲ್ಪ ಯಾತ್ರೆ ಆದರೂ ಮಾಡಿಕೊಳ್ಳಲಿ. 2023ಕ್ಕೆ ನಮ್ಮ ಪಕ್ಷ ಜೆಡಿಎಸ್ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಅವರು ಭವಿಷ್ಯ ನುಡಿದರು. ಜನರಿಂದ ಲೂಟಿ ಮಾಡಿದ ಹಣವನ್ನು ಹಂಚಲು ಬರುತ್ತಾರೆ. ಒಂದು ಮತಕ್ಕೆ 2000 ರೂ. ಜೊತೆಗೆ ಕುಕ್ಕರ್ ಎಂದು ಬರುತ್ತಾರೆ. ಇದೆಲ್ಲ ಹಣ ರಾಜ್ಯದ ಜನರಿಂದ ಲೂಟಿ ಮಾಡಿರುವ ಹಣವಾಗಿದೆ. ಆದರೆ ನಾವು ಯಾರು ದುಡ್ಡು ಲೂಟಿ



▶ 9ನೇ ಪುಟಕ್ಕೆ

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಹೆಚ್.ಡಿ.ದೇವೇಗೌಡರು ಪುನರಾಯ್ಕೆ

ಕಾರ್ಯಕಾರಿಣಿ ಸಭೆಯಲ್ಲಿ ಒಮ್ಮತದ ನಿರ್ಧಾರ



ಬೆಂಗಳೂರು, ಅ.27– ಮತ್ತೊಂದು ಅವಧಿಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೆಗೌಡರು ಪುನರಾಯ್ಕೆಯಾಗಿದ್ದಾರೆ. ಇಂದು(ಅಕ್ಟೋಬರ್ 27) ಬೆಂಗಳೂರಿನಲ್ಲಿ ನಡೆದ ಜೆಡಿಎಸ್ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಒಮ್ಮತದ ತೀರ್ಮಾನವಾಗಿ, ಅಧಿಕೃತ ಘೋಷಣೆಯೂ ಆಯಿತು.

ಕೇರಳದ ಮಾಜಿ ಸಚಿವರು, ಹಾಲಿ ಶಾಸಕರು ಸೇರಿ ವಿವಿಧ 13 ರಾಜ್ಯಗಳ ಪ್ರತಿನಿಧಿಗಳು ಕಾರ್ಯಕಾರಿಣಿ ಸಭೆಯಲ್ಲಿ ಭಾಗಿಯಾಗಿದ್ದು, ದೇವೇಗೌಡರೇ ಆಗಬೇಕು ಎಂದು ಎಲ್ಲ ರಾಜ್ಯ ಪ್ರತಿನಿಧಿಗಳ ಒಮ್ಮತ ಅಭಿಪ್ರಾಯ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್.ಡಿ.ದೇವೇಗೌಡರನ್ನು ಮತ್ತೊಂದು ಅವಧಿಗೆ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲು ಕಾರ್ಯಕಾರಿಣಿಯಲ್ಲಿ ತೀರ್ಮಾನಿಸಲಾಗಿದೆ. ದೇವೇಗೌಡರಿಗೆ ಅನಾರೋಗ್ಯದ ಹಿನ್ನೆಲೆಯಲ್ಲಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಬೇರೆಯವರನ್ನು ಆಯ್ಕೆ ಮಾಡುವ ಸಾಧ್ಯತೆಗಳಿವೆ ಎನ್ನಲಾಗಿತ್ತು ಆದರೆ, ಮತ್ತೊಂದು ಅವಧಿಗೆ ಹೆಚ್.ಡಿ. ದೇವೆಗೌಡ ಅವರನ್ನೇ ಮುಂದುವರಿಸಲು ಜೆಡಿಎಸ್ ಕಾರ್ಯಕಾರಿಣಿ ಸಭೆ ನಿರ್ಧರಿಸಿದೆ.

ವಿಪಕ್ಷ ನಾಯಕ ಸಿದ್ದರಾಮಯ್ಯ ಬಹುತೇಕ ಕೋಲಾರದಿಂದ ಸ್ಪರ್ಧೆ



ಬೆಂಗಳೂರು, ಅ.27(ಕೆಎಂಶಿ)– ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ಧರಾಮಯ್ಯ, ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಮುಂದಾಗಿದ್ದಾರೆ. ವಿಧಾನಸಭೆಯ ಮಾಜಿ ಅಧ್ಯಕ್ಷ ರಮೇಶ್‌ಕುಮಾರ್ ನೇತೃತ್ವದ ನಿಯೋಗ ಸಿದ್ದ ರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಸಂದರ್ಭದಲ್ಲಿ ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ತಿಳಿಸಿದ್ದಾರೆ.

ವರುಣಾ, ಚಾಮರಾಜಪೇಟೆ, ಕೋಲಾರ, ಚಿಕ್ಕನಾಯಕನಹಳ್ಳಿ ಸೇರಿದಂತೆ ಆರು ಕ್ಷೇತ್ರಗಳ ಪೈಕಿ ಯಾವುದರಲ್ಲಿ ಸ್ಪರ್ಧಿಸಬೇಕು ಎಂಬ ಬಗ್ಗೆ ಜಿಜ್ಞಾಸೆಯಲ್ಲಿದ್ದರು. ವರುಣಾದಲ್ಲೇ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದರು. ಆದರೆ, ಇಂದು ಏಕಾಏಕಿ ತಮ್ಮ ನಿರ್ಧಾರ ಬದಲಿಸಿದ್ದಾರೆ. ಕೋಲಾರ ಕ್ಷೇತ್ರದಲ್ಲಿ ತಮ್ಮ ಸಮುದಾಯದ ಮತಗಳು ನಿರ್ಣಾಯಕ ವಾಗಿದ್ದು, ಜತೆಗೆ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗದ ಮತಗಳು ಹೆಚ್ಚಿರುವುದರಿಂದ ತಮಗೆ ಇದೇ ಸುರಕ್ಷಿತ ಕ್ಷೇತ್ರವೆಂದು ಅಂತಿಮ ನಿರ್ಧಾರಕ್ಕೆ ಬಂದಿದ್ದಾರೆ. ಮಾಜಿ ಸಚಿವ ಜಿ.ಟಿ. ದೇವೇಗೌಡರ ಬದಲಾದ ರಾಜಕೀಯ ನಿಲುವಿನ ನಂತರ ಸಿದ್ದರಾಮಯ್ಯ ಏಕಾಏಕಿ ಈ ನಿರ್ಧಾರ ಕೈಗೊಂಡಿರುವುದು ರಾಜಕೀಯ ವಲಯದಲ್ಲಿ ಭಾರೀ ಕುತೂಹಲ ಕೆರಳಿಸಿದೆ. ಕೋಲಾರದಿಂದ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆದ ಸಂದರ್ಭ ದಲ್ಲಿ ಜೆಡಿಎಸ್ ಶಾಸಕ ಶ್ರೀನಿವಾಸಗೌಡ ಅವರನ್ನು ತಮ್ಮ ತೆಕ್ಕೆಗೆ ಸೆಳೆದುಕೊಂಡಿದ್ದರು. ಆದರೂ 2023ರ ವಿಧಾನಸಭಾ ಚುನಾವಣೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕು ಎಂಬ ವಿಷಯದಲ್ಲಿ ಸಿದ್ಧರಾಮಯ್ಯ ಖಚಿತ ನಿರ್ಧಾರಕ್ಕೆ ಬಂದಿರಲಿಲ್ಲ. ಬಾದಾಮಿ ಕ್ಷೇತ್ರದಿಂದ ಕಳೆದ ಬಾರಿ ಗೆದ್ದರೂ ಈ ಬಾರಿ ಸಿದ್ಧರಾಮಯ್ಯ ಸ್ಪರ್ಧೆಗೆ ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ವಿರೋಧ ವ್ಯಕ್ತಪಡಿಸಿದ್ದರು. ಈ ನಡುವೆ ಮುಂದಿನ

▶ 9ನೇ ಪುಟಕ್ಕೆ

ಜನಪರ ಯೋಜನೆ 'ನಮ್ಮ ಕ್ಲಿನಿಕ್' ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಆರೋಗ್ಯ ಸಚಿವ ಡಾ.ಸುಧಾಕರ್ ಸೂಚನೆ

ಸಚಿವರಿಂದ ಆರೋಗ್ಯ ಇಲಾಖೆ ಪ್ರಗತಿ ಪರಿಶೀಲನೆ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ.ಸುಧಾಕರ್ ಗುರುವಾರ ಮೈಸೂರು ವಿಭಾಗದ ಪ್ರಗತಿ ಪರಿಶೀಲನೆ ನಡೆಸಿದರು.

ಮೈಸೂರು, ಅ.27(ಎಸ್‌ಬಿಡಿ)– ಜನೋಪಯೋಗಿ 'ನಮ್ಮ ಕ್ಲಿನಿಕ್' ಯೋಜನೆ ಅನುಷ್ಠಾನಕ್ಕೆ ಕ್ಷಿಪ್ರಗತಿಯಲ್ಲಿ ಸಿದ್ಧತೆ ಮಾಡಿಕೊಳ್ಳುವಂತೆ ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸೂಚನೆ ನೀಡಿದ್ದಾರೆ. ಮೈಸೂರಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ವಿಭಾಗೀಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಮಾಹಿತಿ ಪಡೆದು ಪ್ರತಿಕ್ರಿಯಿಸಿದ ಅವರು, 'ನಮ್ಮ ಕ್ಲಿನಿಕ್' ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದರ ಅನುಷ್ಠಾನದ ಬಳಿಕ ಸಾರ್ವಜನಿಕರಿಗೆ ಮತ್ತಷ್ಟು ಉತ್ತಮ ಆರೋಗ್ಯ ಸೇವೆ ಕಲ್ಪಿಸಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕ್ಷಿಪ್ರಗತಿಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ತಿಳಿಸಿದರು.

ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ತಲಾ ಒಂದು 'ನಮ್ಮ ಕ್ಲಿನಿಕ್' ಕೇಂದ್ರ ಕಾರ್ಯಾರಂಭಕ್ಕೆ ಸಿದ್ಧವಿದ್ದು, ವಿಭಾಗದ 8 ಜಿಲ್ಲೆಗಳಲ್ಲಿ ಇನ್ನೂ 40ಕ್ಕೂ ಹೆಚ್ಚು ಕ್ಲಿನಿಕ್‌ಗಳ ಸಿದ್ಧತಾ ಕಾರ್ಯ ಪ್ರಗತಿಯಲ್ಲಿದೆ. ನವೆಂಬರ್ ಅಂತ್ಯದೊಳಗೆ ಎಲ್ಲಾ ಕೇಂದ್ರಗಳೂ ಸೇವೆಗೆ ಸಜ್ಜಾಗಿರಬೇಕು. ರೋಗಿಗಳ ಹಿತದೃಷ್ಟಿಯಿಂದ ಕಟ್ಟಡದ ನೆಲ ಅಂತಸ್ತಿನಲ್ಲೇ ಕ್ಲಿನಿಕ್ ತೆರೆದರೆ ಒಳ್ಳೆಯದು. ಎಲ್ಲಾ ಸೌಲಭ್ಯಗಳಿದ್ದು ವೈದ್ಯರನ್ನೇ ನಿಯೋಜಿಸದಿದ್ದರೆ ಎಲ್ಲವೂ ವ್ಯರ್ಥವಾಗುತ್ತದೆ. ಈ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳು ಗಮನಹರಿಸಬೇಕು ಎಂದು ಸೂಚನೆ ನೀಡಿದರು.

ಪ್ರಚಾರ ಮಾಡಿ: ಸರ್ಕಾರಿ ಸೇವೆ ಹಾಗೂ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡುವುದು ಬಹಳ ಮುಖ್ಯ. ಈ ಕಾರ್ಯಕ್ಕೆ ಇಲಾಖೆ ಅಧಿಕಾರಿಗಳನ್ನು ನೆಚ್ಚಿಕೊಳ್ಳುವುದು ಕಷ್ಟ, ಹಾಗಾಗಿ ಖಾಸಗಿ ಏಜೆನ್ಸಿಗಳ ಮೂಲಕ ವ್ಯಾಪಕ ಪ್ರಚಾರ ಕಾರ್ಯ ಕೈಗೊಳ್ಳಬೇಕು. 'ನಮ್ಮ ಕ್ಲಿನಿಕ್', ಆಯುಷ್ಮಾನ್ ಸೇರಿದಂತೆ ಎಲ್ಲಾ ಆರೋಗ್ಯ ಯೋಜನೆಗಳು ಹಾಗೂ ಸೌಕರ್ಯಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು. ಸರ್ಕಾರದ

▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾಸ್ಟರ್ : ನೋಡಪ್ಪ ಯಾವಾಗಲೂ ಜೀವನದಲ್ಲಿ ಇನ್ನೊಬ್ಬರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು.

ವಿದ್ಯಾರ್ಥಿ: ಬಿಡಿ ಸಾರ್, ಪರೀಕ್ಷೆಯಲ್ಲಿ ನೀವು ಒಂದು ದಿನ ಆದರೂ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದೀರಾ?

ಮೈಸೂರು ಮಿತ್ರ

ಶುಕ್ರವಾರ, 28 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮ್ಮ ನಿಜವಾದ ಮಿತ್ರನೆಂದರೆ ಉಳಿತಾಯದಲ್ಲಿರುವ ಹಣದಂತೆ ಅಪತ್ಕಾಲದಲ್ಲಿ ನಮಗೆ ಕೂಡಲೇ ಸಹಾಯಕವಾಗುವಂತಹವನು –ಬೆಂಜಮಿನ್ ಫ್ರಾಂಕ್ಲಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು — { ಕೃತಿಯಿಲ್ಲದ ಮಾತು ಕಸ ಬೆಳೆದ ತೋಟದಂತೆ

ನಿಮ್ಮ ಪತ್ರಗಳು

ಒಳ ಚರಂಡಿ ನಿರ್ಮಾಣ ಮಾಡಿ ಅನಾಹುತ ತಪ್ಪಿಸಿ



ಮಾನ್ಯರೆ,

ಮೈಸೂರು ನಗರ ಹೃದಯ ಭಾಗವಾದ ನಜರ್‌ಬಾದ್ ಬಡಾವಣೆಯ ಸರ್ಕಾರಿ ಅತಿಥಿ ಗೃಹದ ರಸ್ತೆಯ ಆದಾಯ ತೆರಿಗೆ ಆಯುಕ್ತರ ಕಚೇರಿಯ ನೆಲಮಹಡಿ ಹಾಗೂ ಸುತ್ತ ಮುತ್ತಲ ಭೂಮಿಯಿಂದ ಅಂತರ್ಜಲ ದಿಂದ ನೀರು ಉಕ್ಕುತ್ತಿದೆ. ಇದು ನೇರವಾಗಿ ರಸ್ತೆಗೆ ಹರಿದುಬರುತ್ತಿದೆ. ಇದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದೆ. ಇದೇ ರಸ್ತೆಯಲ್ಲಿ ಸರ್ಕಾರಿ ಅತಿಥಿಗೃಹವಿದ್ದು, ಅತಿಥಿಗೃಹಕ್ಕೆ ಪ್ರತಿ ದಿನ ಗಣ್ಯಾತಿ ಗಣ್ಯರು ಸದರಿ ರಸ್ತೆ ಮೂಲಕ ಆಗಮಿಸುತ್ತಿದ್ದು, ಕೇಂದ್ರ ಬಸ್ ನಿಲ್ದಾಣದಿಂದ ರಾಜ್ಯ ಹಾಗೂ ಅಂತರ ರಾಜ್ಯದ ಕಡೆಗೆ ನೂರಾರು ಬಸ್ಸುಗಳು ಇದೇ ರಸ್ತೆಯಲ್ಲಿ ಸಂಚರಿಸುತ್ತಿರುವುದಲ್ಲದೇ ನೂರಾರು ಮಂದಿ ಸಾರ್ವಜನಿಕರು ಪ್ರತಿದಿನ ಇದೇ ರಸ್ತೆಯಲ್ಲಿರುವ ತಾಲೂಕು ಕಚೇರಿಗೆ ಪಾಚಿನೀರನ್ನು ದಾಟಿಯೇ ಓಡಾಡುತ್ತಾರೆ. ಎಷ್ಟೋ ಜನ ಸಾರ್ವಜನಿಕರು ಈ ಪಾಚಿ ನೀರಿನಲ್ಲಿ ಬಿದ್ದು ಗಾಯಗೊಂಡಿದ್ದಾರೆ. ಆದ್ದರಿಂದ ಸರ್ಕಾರಿ ಪ್ರಧಾನ ಆದಾಯ ತೆರಿಗೆ ಆಯುಕ್ತರ ಕಚೇರಿಯ ಎದುರು ಒಳ ಚರಂಡಿ(ಯು.ಜಿ.ಡಿ) ನಿರ್ಮಿಸಿ, ರಸ್ತೆಗೆ ಹರಿದು ಬರುತ್ತಿರುವ ನೀರನ್ನು ನಿಲ್ಲಿಸಿ, ಸಾರ್ವಜನಿಕರಿಗೆ ಆಗುತ್ತಿರುವ ಅನಾಹುತವನ್ನು ತಪ್ಪಿಸಬೇಕೆಂದು ಈ ಮೂಲಕ ಮನವಿ.

–ವೆಂಟೇಶ್ ಮತ್ತು ನಿವಾಸಿಗಳು, ನಜರ್‌ಬಾದ್, ಮೈಸೂರು.

ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳಿ



ಮಾನ್ಯರೇ,

ಕಳೆದ ವರ್ಷ ಅಂದರೆ ದಿನಾಂಕ 26.10.2021 ರಂದು ನಮ್ಮ ನೆಚ್ಚಿನ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ತ್ಯಾಗರಾಜ ರಸ್ತೆಯಲ್ಲಿರುವ ಈ ಕಟ್ಟಡದ ಬಗ್ಗೆ ಅನಾಹುತ ಆಗುವ ಮೊದಲು ಸಂಬಂಧಿಸಿದವರು ಕ್ರಮ ಕೈಗೊಳ್ಳಬೇಕು ಎಂದು ಬರೆದಿದ್ದೆ. ಆದರೆ ಇದುವರೆಗೂ ಯಾರೂ ಎಚ್ಚೆತ್ತುಕೊಂಡಿಲ್ಲ. ಈಗ ನಿರ್ವಹಣೆಯಲ್ಲಿದ್ದ ಮಹಾರಾಣಿ ವಿಜ್ಞಾನ ಕಾಲೇಜಿನ ಭಾಗವೊಂದು ಕುಸಿದಿದೆ. ಇನ್ನು ಹಲವು ವರ್ಷಗಳಿಂದ ಬಾಗಿಲು ತೆಗೆಯದ ಈ ಕಟ್ಟಡದ ಸ್ಥಿತಿಯ ಬಗ್ಗೆ ಯೋಚಿಸಬೇಕಾಗಿದೆ. ಏಕೆಂದರೆ ಈ ರಸ್ತೆಯಲ್ಲಿ ಜನರು ಮತ್ತು ವಾಹನಗಳ ಓಡಾಟ ಇದ್ದೇ ಇರುತ್ತದೆ. ದಯವಿಟ್ಟು ಅನಾಹುತ ಸಂಭವಿಸುವ ಮೊದಲು ಎಚ್ಚೆತ್ತುಕೊಂಡು ಕ್ರಮ ವಹಿಸಲು ಮನವಿ.

– ಜಗದೀಶ ಬಿ ಹೊಸೂರು, ಜೆಎಸ್‌ಎಸ್ ನಗರ, ಮೈಸೂರು.

ಒಣಗಿರುವ ಮರ ತೆರವಿಗೆ ಮನವಿ



ಮಾನ್ಯರೆ,

ಮೈಸೂರು ನಗರದ ಸರಸ್ವತಿಪುರಂನ ಜಲಭವನದ ಸಮೀಪವಿರುವ ಒಣಗಿನಿಂತ ಬೋಳು ಮರವೊಂದು ಗೆದ್ದಿಲು ಹಿಡಿದು ಇಂದೋ, ನಾಳೆಯೋ ಬೀಳುವ ಸ್ಥಿತಿಯಲ್ಲಿದೆ. ಮರದ ಪಕ್ಕದಲ್ಲಿಯೇ ಬಸ್ ನಿಲ್ದಾಣ ಹಾಗೂ ಆಟೋ ನಿಲ್ದಾಣಗಳಿವೆ. ಹಾಗೆಯೇ ಇದು ಮುಖ್ಯ ರಸ್ತೆಯ ಪಾದಚಾರಿ ಮಾರ್ಗದಲ್ಲಿರುವುದರಿಂದ ಇಲ್ಲಿ ನೂರಾರು ಮಂದಿ ಓಡಾಡುತ್ತಿರುತ್ತಾರೆ. ಆದ್ದರಿಂದ ಮರ ತಾನಾಗಿಯೇ ಬಿದ್ದು ಸಾವು–ನೋವುಗಳಾಗುವ ಮೊದಲು ಸಂಬಂಧಪಟ್ಟವರು ಮರವನ್ನು ಬುಡಸಮೇತ ತುರ್ತಾಗಿ ತೆರವು ಗೊಳಿಸಬೇಕಿದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಪ್ರತಿ ಮನೆ ಮೇಲೆ ಕನ್ನಡ ಧ್ವಜ ಹಾರಿಸುವಂತೆ ಸರ್ಕಾರ ಘೋಷಣೆ ಮಾಡಲಿ

ಮಾನ್ಯರೆ,

ನವೆಂಬರ್ 1, ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಕೋಟಿ ಗಾಯನದ ಕಂಠದಲ್ಲಿ ಸರ್ಕಾರವು ನಾಡ ಕವಿಗಳಾದ ಕುವೆಂಪು, ಹುಯಿಲಗೋಳ ನಾರಾಯಣರಾಯರ, ಡಾ. ಡಿ. ವಿ ಎಸ್. ಕರ್ಕಿಯವರ, ಡಾ. ಚನ್ನವೀರ ಕಣವಿಯವರ, ಹಂಸಲೇಖ ಅವರ ಸಾಹಿತ್ಯದಲ್ಲಿ ಮೂಡಿಬಂದಿರುವ ಕನ್ನಡ ನಾಡಿನ ನೆಲ, ಜಲ ಶ್ರೇಷ್ಠತೆಯನ್ನು ಸಾರುವ ಗೀತೆಗಳನ್ನು ಕೋಟಿ ಕಂಠದಲ್ಲಿ ಹಾಡಿಸುತ್ತಿರುವುದು ಸ್ವಾಗತಾರ್ಹ ಹಾಗೂ ಗಮನಾರ್ಹ ಈ ಕಾರ್ಯಕ್ರಮ ಅಭೂತಪೂರ್ವ. ಇದರ ಜೊತೆಯಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ 1ರಂದು ಎಲ್ಲರ ಮನೆಗಳ ಮೇಲೆ ಕನ್ನಡ ಧ್ವಜ ಹಾರಿಸಿ ಎಂದು ಸರ್ಕಾರ ಘೋಷಣೆ ಮಾಡಲಿ.

–ಕಂಗಾಣಿಸೋಮು ಪಿ ಸಿ, ಕ್ಯಾತಮಾರನಹಳ್ಳಿ, ಮೈಸೂರು

ಬ್ರಿಟನ್ ಪ್ರಧಾನಿಯಾಗಿ ರಿಷಿ ಸುನಾಕ್; ಭಾರತೀಯರಲ್ಲಿ ಸಂತಸ



ಮಾನ್ಯರೆ,

ಬ್ರಿಟನ್ ಪ್ರಧಾನಿಯಾಗಿ ಕರ್ನಾಟಕದ ಅಳಿಯ ರಿಷಿ ಸುನಾಕ್ ಆಯ್ಕೆಯಾಗಿರುವುದು ಭಾರತೀಯರೆಲ್ಲರೂ ಸಂತಸ ಪಡುವಂತೆ ಮಾಡಿದೆ. ಇದಕ್ಕಿಂತ ದೊಡ್ಡ ದೀಪಾವಳಿ ಕೊಡುಗೆ ಬೇರೆನಿರಲು ಸಾಧ್ಯ? ಭಾರತೀಯ ಮೂಲದವರು ಇಂಗ್ಲೆಂಡ್‌ನ ಪ್ರಧಾನಿಯಾಗುವುದು ನಮಗೆಲ್ಲ ಸಂಭ್ರಮ ತರುವ ವಿಚಾರ ಮಾತ್ರವಲ್ಲ, ನ್ಯಾಯ ಸಮ್ಮತವೂ ಹೌದು. ಆದರೆ ಇಟಲಿ ಮೂಲದ ಸೋನಿಯಾಗಾಂಧಿ ಭಾರತದ ಪ್ರಧಾನಿಯಾಗುವುದು ಭಾರತೀಯರಿಗೆ ನ್ಯಾಯಸಮ್ಮತ ಎನಿಸಿರಲಿಲ್ಲ! ದೇಶಾದ್ಯಂತ ಬೊಬ್ಬೆ ಎದ್ದಿತ್ತು. ಇದು ನಮ್ಮೊಳಗಿನ ದ್ವಂದ್ವ ವಿಪರ್ಯಾಸವೇ?

–ದೊಡ್ಡ ಕಮರವಳ್ಳಿ ಸಿದ್ದಲಿಂಗಪ್ಪ, ಜೆ.ಪಿ.ನಗರ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮೈಸೂರು ವಿವಿಯಲ್ಲಿ ಶತಮಾನ ಕಂಡ ಸಮಾಜಶಾಸ್ತ್ರ

ಸಮಾಜಶಾಸ್ತ್ರದ ಹೆಜ್ಜೆ ಗುರುತುಗಳು ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಮೂಡಿ ಬಂದು ನೂರು ವರ್ಷಗಳೇ ಕಳೆದಿವೆ. ದೇಶದ ಪ್ರಥಮ ಸಮಾಜಶಾಸ್ತ್ರ ವಿಭಾಗವೆಂದು ಗುರುತಿಸಲ್ಪಟ್ಟಿರುವ ಮುಂಬಯಿ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗ ಸ್ಥಾಪನೆಯಾದದ್ದು 1919ನೇ ಇಸವಿಯಲ್ಲಿ. ಇದಕ್ಕೆ 2 ವರ್ಷ ಮುನ್ನವೇ, ಅಂದರೆ, 1917ರಲ್ಲಿ ಮಹಾರಾಜ ಕಾಲೇಜಿನ ತತ್ವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಮುಂಬಯಿಯ ಎಲ್ಫಿನ್‌ಸ್ಟೋನ್ ಕಾಲೇಜಿನಿಂದ ಪ್ರೊ.ಎ.ಅರ್.ವಾಡಿಯಾ ಅವರನ್ನು ಆಗಿನ ಕುಲಪತಿಗಳಾಗಿದ್ದ ಪ್ರೊ. ಬಜೇಂದ್ರನಾಥ್ ಸೀಲ್ ಅವರು ಮೈಸೂರಿಗೆ ಕರೆ ತಂದರು. 1917ರಲ್ಲಿ ಪ್ರೊ ವಾಡಿಯಾ ಅವರ ಆಗಮನವೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರದ ಬೋಧನೆಯ ಉಗಮಕ್ಕೆ ಕಾರಣವಾದ್ದರಿಂದ ನಮ್ಮ ಅಧ್ಯಯನ ವಿಷಯಕ್ಕೆ ನೂರು ವರ್ಷಗಳಿಗೂ ಮೇಲ್ಪಟ್ಟ ಐತಿಹಾಸಿಕ ಹಿನ್ನೆಲೆ ಇದೆ ಎಂಬುದು ನನ್ನ ಅಭಿಮತ.

ಪ್ರೊ. ವಾಡಿಯಾ ಅವರು ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದರೂ ಅವರ ಸಮಾಜಶಾಸ್ತ್ರ ಪ್ರೀತಿ ನಮ್ಮ ಅಧ್ಯಯನ ವಿಷಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತನ್ನ ನೆಲೆಯನ್ನು ಕಂಡುಕೊಳ್ಳಲು ಮೂಲ ಕಾರಣವಾಯಿತು. ಅವರು ತಮ್ಮ ವಿಭಾಗದಲ್ಲಿ 1917–18ರಿಂದಲೇ ಸಮಾಜಶಾಸ್ತ್ರ ಬೋಧನೆಗೆ ಅಡಿಪಾಯ ಹಾಕಿದರು. ಸಮಾಜಶಾಸ್ತ್ರಕ್ಕೆ ಆಧ್ಯಾತ್ಮಿಕ ಸಿದ್ಧಾಂತ ಮತ್ತು ನೀತಿ ಶಾಸ್ತ್ರಗಳೆರಡರ ದೃಷ್ಟಿಕೋನಗಳು ಇರುವುದು ಎಷ್ಟು ಮುಖ್ಯವೋ ತತ್ವಶಾಸ್ತ್ರ ಬೋಧನೆಗೆ ಸಮಾಜಶಾಸ್ತ್ರ ಲೇಪನವಿರಬೇಕು ಎಂಬುದು ಕೂಡ ಅವರ ನಂಬಿಕೆಯಾಗಿತ್ತು. ತತ್ವಶಾಸ್ತ್ರ ಅನ್ವಯಿಕ ತತ್ವಶಾಸ್ತ್ರವಾಗಿ ರೂಪಿತವಾಗಬೇಕು ಹಾಗೂ ಅದು ವಾಸ್ತವ ಜಗತ್ತಿನೊಂದಿಗೆ ತನ್ನನ್ನು ಗುರುತಿಸಿಕೊಳ್ಳಬೇಕು ಎಂಬುದು ಅವರ ನಿಲುವು. ಆಧ್ಯಾತ್ಮಿಕ ಸಿದ್ಧಾಂತದತ್ತ ಅವರ ಒಲವು ಇದ್ದರೂ ಅದನ್ನು ಸಾಮಾಜಿಕ ದೃಷ್ಟಿಕೋನದಿಂದ ಅರ್ಥೈಸುವುದು ಅತಿ ಮುಖ್ಯ, ಏಕೆಂದರೆ ತತ್ವಶಾಸ್ತ್ರೀಯ ವ್ಯಾಖ್ಯಾನವಾಗಲಿ, ಸಮಾಜಶಾಸ್ತ್ರೀಯ ಚಿಂತನೆಯಾಗಲೀ ಅದು ಸಮಾಜದ ತಳ ವರ್ಗಗಳನ್ನು ಒಳಗೊಂಡಾಗ ಮಾತ್ರ ಅದಕ್ಕೆ ಅರ್ಥ ಬರುವುದು ಎಂಬುದು ಅವರ ನಂಬಿಕೆಯಾಗಿತ್ತು.

ಪ್ರೊ.ವಾಡಿಯಾ ಅವರ ಸಾಮಾಜಿಕ ಕಳಕಳಿ, ಸಮಾಜ ಕಾರ್ಯವನ್ನು ಕುರಿತು ಅವರಿಗಿದ್ದ ಆಸಕ್ತಿ ಹಾಗೂ ಅದನ್ನು ಅವರು ಸಮಾಜಶಾಸ್ತ್ರ ಮತ್ತು ತತ್ವಶಾಸ್ತ್ರದೊಡನೆ ಬೆಸೆಯಲು ಮಾಡಿದ ಪ್ರಯತ್ನಗಳಲ್ಲೂ ವ್ಯಕ್ತವಾಗುತ್ತದೆ. ಅವರು ಅಡಿಪಾಯ ಹಾಕಿದ ಸಮಾಜಶಾಸ್ತ್ರ ವಿಭಾಗದಲ್ಲೇ ಸುಮಾರು 60 ವರ್ಷಗಳ ನಂತರ ಪ್ರೊ.ಸಿ.ಪಾರ್ವತಮ್ಮ ಅವರ ಅಧ್ಯಕ್ಷತೆಯಲ್ಲಿ ಸ್ನಾತಕೋತರ ಸಮಾಜಕಾರ್ಯ ಕೋರ್ಸು ಆರಂಭವಾಯಿತು ಎನ್ನುವುದು ಗಮನಾರ್ಹ. ತತ್ವಶಾಸ್ತ್ರಕ್ಕೆ ಹೇಗೆ ಸಮಾಜಶಾಸ್ತ್ರೀಯ ದೃಷ್ಟಿಕೋನ ಮುಖ್ಯವೋ ಹಾಗೆಯೇ ಸಮಾಜಶಾಸ್ತ್ರಕ್ಕೂ ತತ್ವಶಾಸ್ತ್ರೀಯ ಜ್ಞಾನಕ್ಕೂ ನಿಕಟವಾದ ಸಂಬಂಧವಿದೆ ಎಂದು ಅವರು ಹೇಳುತ್ತಿದ್ದರು. ಈ ಎರಡು ವಿಷಯಗಳ ನಡುವೆ ಇದ್ದ ಸಹ–ಸಂಬಂಧವನ್ನು ಮನಗಂಡಿದ್ದರಿಂದಲೇ ಅವರು ಸಾಮಾಜಿಕ ತತ್ವಶಾಸ್ತ್ರದಲ್ಲಿ ಕೋರ್ಸುಗಳನ್ನು ಆರಂಭ ಮಾಡಿ ಅದುವರೆಗೂ ಮಹಾರಾಜಾ ಕಾಲೇಜಿನ ತತ್ವಶಾಸ್ತ್ರ ವಿಭಾಗದಲ್ಲಿ ಬೋಧಿಸಲ್ಪಡುತ್ತಿದ್ದ ಆಧ್ಯಾತ್ಮಶಾಸ್ತ್ರ, ಭಾರತೀಯ ತತ್ವಶಾಸ್ತ್ರ ಮತ್ತು ಮನಃಶಾಸ್ತ್ರ ವಿಷಯಗಳೊಡನೆ ಸಮಾಜಶಾಸ್ತ್ರ ಬೋಧನೆಗೂ ಅವಕಾಶವನ್ನು ಕಲ್ಪಿಸಿದರು. ಅವರು ತೆಗೆದುಕೊಂಡ ಈ ನಿರ್ಧಾರವೇ ಭಾರತದ ಪ್ರಥಮ ಸಮಾಜಶಾಸ್ತ್ರದ ಪದವಿ ಕೋರ್ಸು 1927–28ರಲ್ಲಿ ಮಹಾರಾಜಾ ಕಾಲೇಜಿನಲ್ಲಿ ಆರಂಭವಾಗಲು ಕಾರಣವಾದದ್ದು. ದೇಶದ ಪ್ರಥಮ ಸ್ನಾತಕೋತ್ತರ ಕೋರ್ಸು ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ 1919ರಲ್ಲಿ ಆರಂಭವಾದರೆ ದೇಶದ ಪ್ರಥಮ ಪದವಿ ಕೋರ್ಸು ಆರಂಭವಾದದ್ದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಎಂದರೆ, ಇಂದಿಗೆ 95 ವರ್ಷಗಳ ಹಿಂದೆ.



ಕಳೆದ ನೂರು ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಬಹುದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಇಂದು ಮಾನಸಗಂಗೋತ್ರಿಯ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ, ಮೈಸೂರಿನ ಒಂದು ಸರ್ಕಾರಿ ಕಾಲೇಜಿನಲ್ಲಿ, ಮಂಡ್ಯದ ಎರಡು ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಹಾಸನದ ಒಂದು ಸರ್ಕಾರಿ ಕಾಲೇಜಿನಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಹಾಗೂ ಅನೇಕ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ಮತ್ತು ಕೆಲ ಖಾಸಗಿ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ಸಮಾಜಶಾಸ್ತ್ರ ಬೋಧಿಸ ಲ್ಪಡುತ್ತಿದೆ. ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಗಮನಾರ್ಹ ಹೆಚ್ಚಳ ಕಂಡುಬಂದಿದೆ.

ಸಮಾಜಶಾಸ್ತ್ರದ ಎರಡು ಪ್ರಖರ ಮೈಲಿಗಲ್ಲುಗಳ ನಡುವೆ ಇದ್ದದ್ದು ಕೇವಲ 9 ವರ್ಷಗಳ ಅಂತರ. ಆದರೆ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರದ ನೂರು ವರ್ಷದ ಪಯಣವನ್ನು ಒಂದು ವಿಶಿಷ್ಟ ವಿಚಾರ ಸಂಕಿರಣವನ್ನು ಏರ್ಪಡಿಸಿ, ಭಾರತೀಯ ಸಮಾಜಶಾಸ್ತ್ರ ಸಂಘದ ಪ್ರತಿಷ್ಠಿತ ನಿಯತಕಾಲಿಕೆ 'ದಿ ಸೋಷಿಯೋಲೋಜಿಕಲ್ ಬುಲೆಟಿನ್'ನ ವಿಶೇಷ ಸ್ಮರಣ ಸಂಚಿಕೆಯನ್ನು ಹೊರತರುವ ಮೂಲಕ ಸಂಭ್ರಮಿಸಲಾಯಿತು. 1921ರಲ್ಲಿ ಆರಂಭವಾದ ಲಕ್ನೋ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ವಿಭಾಗ ಕೂಡ ಸದ್ಯದಲ್ಲಿಯೇ ಶತಮಾನೋತ್ಸವವನ್ನು ಆಚರಿಸಲು ಸಿದ್ಧತೆಗಳನ್ನು ನಡೆಸುತ್ತಿದೆ. ಆದರೆ ಹೆಚ್ಚು–ಕಡಿಮೆ ಇದೇ ಕಾಲಘಟ್ಟದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆರಂಭವಾದ ಸಮಾಜಶಾಸ್ತ್ರದ ಪಯಣವನ್ನು ದಾಖಲಿಸಿ, ಅದು ಇಲ್ಲಿ ನೆಲೆ ನಿಲ್ಲಲು ಕಾರಣರಾದ ಅಧ್ಯಾಪಕರ ಚಿಂತನೆಗಳನ್ನು ಇಂದಿಗೂ ಸಮಾಜಶಾಸ್ತ್ರೀಯ ವ್ಯಾಖ್ಯಾನಕ್ಕೆ ನಾವು ಒಳಪಡಿಸಲಾಗಿಲ್ಲವೆನ್ನುವುದು ದುಃಖಕರ ಸಂಗತಿಯೇ ಸರಿ.

ಈ ಹೊತ್ತು ನಾವು ಸಮಾಜಶಾಸ್ತ್ರದಲ್ಲಿ ಅಂತಶಿಸ್ತೀಯ ಅಧ್ಯಯನಗಳಿಗೆ ಅತ್ಯಂತ ಮಹತ್ವವನ್ನು ನೀಡುತ್ತಿದ್ದೇವೆ. ಎರಡು ಅಥವಾ ಹೆಚ್ಚಿನ ಸಂಖ್ಯೆಯ ವಿಷಯಗಳು ಪರಸ್ಪರ ಸಂಬಂಧವನ್ನು ಬೆಸೆಯುವ ಮೂಲಕ ಹೇಗೆ ಇತರ ಅಧ್ಯಯನ ವಿಷಯಗಳ ಮೇಲೆ ಪ್ರಭಾವ ಬೀರಬಹುದು, ಸಂಶೋಧನೆಗಳಿಗೆ ಹೊಸ ಆಯಾಮವನ್ನು ನೀಡಬಹುದು ಮತ್ತು ಬಹುಮುಖಿ ದೃಷ್ಟಿಕೋನವನ್ನು ಅಳವಡಿಸಿಕೊಂಡು ತಮ್ಮ ಸಮಕಾಲೀನ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳಬಹುದು ಎಂಬ ವಿಚಾರಗಳಿಗೆ ಒತ್ತನ್ನು ನೀಡುವುದೇ ಅಂತಶಿಸ್ತೀಯ ಅಧ್ಯಯನ. ಸಮಾಜಶಾಸ್ತ್ರಕ್ಕಂತೂ ಇದು ಬಹುಮುಖ್ಯವಾದ ವಿಚಾರ. ಇಂಥ ಅಂತಶಿಸ್ತೀಯ ಅಧ್ಯಯನ ಸಂಸ್ಕೃತಿಗೂ ಮೈಸೂರು ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಪರಂಪರೆ ಸುಮಾರು ನೂರು ವರ್ಷಗಳ ಹಿಂದೆಯೇ ಮುನ್ನುಡಿಯನ್ನು ಬರೆದಿತ್ತು. ವಾಡಿಯಾ ಅವರು ವಹಿಸಿದ ಆಸ್ಥೆಯಿಂದ ರೂಪುಗೊಂಡ ಸಾಮಾಜಿಕ ತತ್ವಶಾಸ್ತ್ರ ಕೋರ್ಸುಗಳಲ್ಲಿ ಸಮಾಜಶಾಸ್ತ್ರದ ಛಾಯೆ ಬಹು ಪ್ರಬಲವಾಗಿತ್ತು. 1949ನೇ ಇಸವಿಯಲ್ಲಿ ಸಮಾಜಶಾಸ್ತ್ರದಲ್ಲಿ ಸ್ನಾತಕೋತರ ಕೋರ್ಸು ಆರಂಭವಾಗುವವರೆಗೂ ಸಾಮಾಜಿಕ ತತ್ವಶಾಸ್ತ್ರದಲ್ಲಿಯೇ ಸ್ನಾತಕ ಪೂರ್ವ ಮತ್ತು ಸ್ನಾತಕೋತ್ತರ ಪದವಿಗಳನ್ನು ನೀಡಲಾಗುತ್ತಿದ್ದರೂ ವಿದ್ಯಾರ್ಥಿಗಳಿಗೆ ಸಾಮಾಜಿಕ ಮಾನವಶಾಸ್ತ್ರ, ಸಾಮಾಜಿಕ ಮನೋವಿಜ್ಞಾನ, ನೀತಿ ಶಾಸ್ತ್ರ, ಭಾರತೀಯ ಸಾಮಾಜಿಕ ಸಂಸ್ಥೆಗಳು ಮುಂತಾದ ವಿಷಯಗಳಲ್ಲಿ ಬೋಧನೆ ನಡೆಯುತ್ತಿದ್ದು ಸಮಾಜಶಾಸ್ತ್ರ ಆರಂಭಿಕ ದಿನಗಳಿಂದಲೂ ವಿದ್ಯಾರ್ಥಿಗಳಲ್ಲಿ ಅತ್ಯಂತ ಜನಪ್ರಿಯವಾದ ಅಧ್ಯಯನ ವಿಷಯವಾಗಿತ್ತು ಎಂದು ಹೇಳಲಾಗಿದೆ.

ಕಳೆದ ನೂರು ವರ್ಷಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಮಾಜಶಾಸ್ತ್ರ ಬಹು ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಇಂದು ಮಾನಸ ಗಂಗೋತ್ರಿಯ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ, ಮೈಸೂರಿನ ಒಂದು ಸರ್ಕಾರಿ ಕಾಲೇಜಿನಲ್ಲಿ, ಮಂಡ್ಯದ ಎರಡು ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಹಾಸನದ ಒಂದು ಸರ್ಕಾರಿ ಕಾಲೇಜಿನಲ್ಲಿ ಸ್ನಾತಕೋತ್ತರ ಮಟ್ಟದಲ್ಲಿ ಹಾಗೂ ಅನೇಕ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿ ಮತ್ತು ಕೆಲ ಖಾಸಗಿ ಕಾಲೇಜುಗಳಲ್ಲಿ ಪದವಿ ಮಟ್ಟದಲ್ಲಿ ಸಮಾಜಶಾಸ್ತ್ರ ಬೋಧಿಸಲ್ಪಡುತಿದೆ. ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆಯಲ್ಲೂ ಗಮನಾರ್ಹ ಹೆಚ್ಚಳ ಕಂಡು ಬಂದಿದೆ. ಆದರೆ ಒಂದು ಶತಮಾನದ ಪಯಣದಲ್ಲಿ ಅದರ ಉಗಮ ಹಾಗೂ ಬೆಳವಣಿಗೆಗೆ ಮುನ್ನುಡಿ ಬರೆದ ಪ್ರವರ್ತಕರ ಕೊಡುಗೆಗಳು, ಈ ಹಾದಿಯಲ್ಲಿ ಮೂಡಿ ಬಂದ ಹೆಜ್ಜೆ ಗುರುತುಗಳು,ಹಾಗೂ ಅವರು ಕಟ್ಟಿ ಕೊಟ್ಟ ಸೈದ್ಧಾಂತಿಕ ಚಿಂತನೆಗಳು, ಇದುವರೆಗೂ ನಡೆದಿರುವ ಸಂಶೋಧನಾ ಸಂಯೋಜನೆಗಳ ಸಾರವನ್ನು ಒಳಗೊಂಡ ಪ್ರಕಟಣೆಗಳು ಮತ್ತು ವಿಚಾರ ಸಂಕಿರಣಗಳು– ಉಪನ್ಯಾಸ ಮಾಲಿಕೆಗಳು ಇವುಗಳು ದೊಡ್ಡಮಟ್ಟದಲ್ಲಿ, ಅದರಲ್ಲೂ ಒಂದು ಐತಿಹಾಸಿಕ ನೆಲೆಗಟ್ಟಿನಲ್ಲಿ ನಡೆಯದಿರುವುದು ಒಂದು ದೊಡ್ಡ ಕೊರೆ ಎಂದೇ ನಾನು ಭಾವಿಸುತ್ತೇನೆ.

ಯಾವುದೇ ಅಧ್ಯಯನ ವಿಷಯದ ಬೆಳವಣಿಗೆಯಲ್ಲಿ ದಾಖಲಿಕೆ ಬಹುಮುಖ್ಯವಾದ ಒಂದು ಘಟ್ಟ, ಅದನ್ನು ಭಾರತೀಯ ಸಮಾಜಶಾಸ್ತ್ರದ ಒಂದು ದುರ್ಬಲ ಕೊಂಡಿ ಎಂದು ಕರೆದರೂ ಉತ್ಪ್ರೇಕ್ಷೆಯಾಗಲಾರದು. ವಿಶೇಷವಾಗಿ ದಕ್ಷಿಣ ಭಾರತದ ವಿಶ್ವವಿದ್ಯಾನಿಲಯಗಳ ಮಟ್ಟಿಗೆ ಇದನ್ನು ಮತ್ತಷ್ಟು ಗಟ್ಟಿಯಾಗಿ ಹೇಳಬಹುದು. ಇನ್ನು ಮುಂದಾದರೂ ವಿಭಾಗಗಳು, ಕಾಲೇಜುಗಳು ಲಭ್ಯವಿರುವ ಮಾಹಿತಿಯನ್ನು ಬಳಸಿಕೊಂಡು ಈ ಕೆಲಸಕ್ಕೆ ಮುಂದಾಗದಿದ್ದರೆ ಸಮಾಜಶಾಸ್ತ್ರದ ಅನೇಕ ನಿರೂಪಣೆಗಳು, ಜನಸಮುದಾಯಗಳ ಜೀವನಾನುಭವಗಳು ಹಾಗೂ ಕಥೆಗಳು ಕಾಲ ಗರ್ಭದಲ್ಲಿ ಕಳೆದು ಹೋಗುವುದರಲ್ಲಿ ಸಂದೇಹವಿಲ್ಲ.

ನಮ್ಮ ಅಧ್ಯಯನ ವಿಷಯದ ಬೋಧನಾ ಹಾಗೂ ಸಂಶೋಧನಾ ಕ್ಷೇತ್ರದ ಮುಂಚೂಣಿಯಲ್ಲಿರುವ ಎಲ್ಲರಿಗೆ ಇಂದು ಮತ್ತೊಂದು ಗುರುತರ ಜವಾಬ್ದಾರಿಯಿದೆ. ಅದು ಸಮಾಜಶಾಸ್ತ್ರವನ್ನು ಸಾರ್ವಜನಿಕ ವಲಯಕ್ಕೆ ತರುವುದು. ಸಮಾಜಶಾಸ್ತ್ರ ಇಂದು ಒಂದು 'ಆಚರಣೆ' ಯಾಗಬೇಕು ಮತ್ತು ಸಾರ್ವಜನಿಕ ನೀತಿಗಳನ್ನು ಪ್ರಭಾವಿಸುವಂಥ ಸ್ಥಿತಿಗೆ ತಲುಪ ಬೇಕು. ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಯ ಬೇಡಿಕೆಗಳಿಗೆ ಪೂರಕವಾಗಿ ವಿಷಯ ತನ್ನನ್ನು ಮಾರ್ಪಾಡು ಮಾಡಿಕೊಳ್ಳುತ್ತಿಲ್ಲ, ಆದ್ದರಿಂದ ಅನೇಕ ಕಡೆಗಳಲ್ಲಿ ಸಮಾಜಶಾಸ್ತ್ರ ಕೋರ್ಸುಗಳು ಮುಚ್ಚಿ ಹೋಗುತ್ತಿವೆ. ಏಕೆಂದರೆ ಅದರ ಆಕರ್ಷಣೆ ಕಡಿಮೆಯಾಗುತ್ತಿದೆ ಎಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ನಮ್ಮ ನೂರು ವರ್ಷಗಳ ಪಯಣ ಸಾರ್ಥಕವಾಗಬೇಕಾದರೆ ಗಂಭೀರವೂ ಗಹನವೂ ಆದ ಹೊಸ ಚಿಂತನೆ ನಡೆಯಬೇಕಷ್ಟೇ ಅಲ್ಲ, ಈ ಹೊಸ ಚಿಂತನೆಯನ್ನು ಕಾರ್ಯರೂಪಕ್ಕೆ ತರಲು ವೃತ್ತಿ ಸಮುದಾಯ ಸನ್ನದ್ಧವಾಗಬೇಕು.







ಬುಧವಾರ ಬೆಂಗಳೂರಿನಲ್ಲಿ ದೀಪಾವಳಿಯಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರ ಸ್ವಾಮಿ ಅವರಿಗೆ ಸಿಹಿ ತಿನಿಸಿ, ಶುಭಾಶಂಯ ಕೋರಿದರು. ಈ ವೇಳೆ ಆ ನಾಯಕರೂ ಸಹ ಪ್ರತಿಯಾಗಿ ಜಿ.ಟಿ.ದೇವೇಗೌಡರಿಗೆ ಸಿಹಿ ತಿನಿಸಿ, ಶುಭ ಕೋರಿದರು.

ಸರ್ಕಾರಿ ಶಾಲೆ ದತ್ತು ಸ್ವೀಕಾರ ಸೇರಿ ವಿವಿಧ ಸೇವಾ ಕಾರ್ಯದೊಂದಿಗೆ

ಶಾಸಕ ಎಸ್.ಎ.ರಾಮದಾಸ್ ಹುಟ್ಟುಹಬ್ಬ ಅರ್ಥಪೂರ್ಣ ಆಚರಣೆ

ಚಾಮುಂಡಿಬೆಟ್ಟದಲ್ಲಿ ತಾಯಿ ದರ್ಶನ ಪಡೆದು, ಕೆಆರ್ ಕ್ಷೇತ್ರದಲ್ಲಿ ನಾನಾ ಸೇವಾ ಕಾರ್ಯಕ್ರಮ



ಶಾಸಕ ಎಸ್.ಎ.ರಾಮದಾಸ್ ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಯುವ ಮೋರ್ಚಾ ವತಿಯಿಂದ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಈ ವೇಳೆ ಮೈಸೂರು ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಶ್ವ ಹಿಂದೂ ಪರಿಷತ್ ಜಿಲ್ಲಾಧ್ಯಕ್ಷ ಬಿ.ಎಸ್. ಪ್ರಶಾಂತ್, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಾಗೇಂದ್ರ, ಉಪಾಧ್ಯಕ್ಷ ಸಂತೋಷ್(ಶಂಭು), ಹೇಮಂತ್‌ಕುಮಾರ್, ವೈಷ್ಣವಿ ಸ್ವೀಟ್ಸ್ ಮಾಲೀಕ ನವೀನ್, ಯುವ ಮೋರ್ಚಾ ಅಧ್ಯಕ್ಷ ಮನು ಶೈವ್, ಪುನೀತ್, ನಾಗೇಂದ್ರ, ಗುರುದತ್, ವಿನೋದ್ (ಕೆಸರೆ), ಯುವ ಮೋರ್ಚಾ ಕಾರ್ಯಕರ್ತರು ಹಾಗೂ ರಾಮದಾಸ್ ಅವರ ಅಭಿಮಾನಿಗಳು ಉಪಸ್ಥಿತರಿದ್ದರು.



ಬಡ ಮಕ್ಕಳಿಗೆ ಶಾಲೆ ಬ್ಯಾಗ್, ಪುಸ್ತಕ ವಿತರಣೆ ಮಾಡಲಾಯಿತು.

ಮೈಸೂರು, ಅ.27(ಪಿಎಂ)– ಸರ್ಕಾರಿ ಶಾಲೆಯೊಂದರ ದತ್ತು ಸ್ವೀಕಾರ ಸೇರಿದಂತೆ ವಿವಿಧ ಸೇವಾ ಕಾರ್ಯಕ್ರಮಗಳ ಮೂಲಕ ಮಾಜಿ ಸಚಿವರೂ ಆದ ಶಾಸಕ ಎಸ್.ಎ.ರಾಮದಾಸ್ ಬುಧವಾರ ತಮ್ಮ ಹುಟ್ಟುಹಬ್ಬವನ್ನು ಅರ್ಥಪೂರ್ಣ ಹಾಗೂ ಸಂಭ್ರಮದಿಂದ ಆಚರಿಸಿಕೊಂಡರು.

ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಶಾಸಕರು, ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿ ದರ್ಶನ ಪಡೆದರು. ಇದೇ ವೇಳೆ ಮಹಿಳಾ ಮೂರ್ಚಾ ವತಿಯಿಂದ ಶಾಸಕರಿಗೆ ಶುಭ ಹಾರೈಸಲಾಯಿತು. ಜೊತೆಗೆ 101 ತೆಂಗಿನಕಾಯಿ ಹೊಡೆಯಲಾಯಿತು. ನಂತರ 53ನೇ ವಾರ್ಡಿನ ಸಂಗೀತ ಕಾರ್ನರ್ ಸರ್ಕಲ್‌ನಲ್ಲಿ ಪೌರಕಾರ್ಮಿಕರಿಗೆ ಬಟ್ಟೆ ವಿತರಿಸಿದ ಶಾಸಕರು, ನಂತರ ಬೀದಿಬದಿ ವ್ಯಾಪಾರಿಗಳಿಗೆ ಅಸಂಘಟಿತರ ಕಾರ್ಡ್ ವಿತರಿಸಿದರು. 52ನೇ ವಾರ್ಡಿನಲ್ಲಿ ಸೀರೆ, ಪಟಾಕಿ ವಿತರಿಸಿದ ಶಾಸಕರು, ನಂತರ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪಿಂಜರಾಪೋಲ್‌ನಲ್ಲಿರುವ ಗೋವುಗಳಿಗೆ ಪೂಜೆ ನೆರವೇರಿಸಿದರು. ಜೊತೆಗೆ ಅಲ್ಲಿನ ಗೋಪಾಲಕರಿಗೆ ವಸ್ತ್ರ ವಿತರಣೆ ಮಾಡಿದರು.

ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿಯಿರುವ ಪಿಂಜರಾಪೋಲ್‌ನಲ್ಲಿ ಚಾಮುಂಡಿಬೆಟ್ಟದಿಂದ ಹಾಗೂ ಸುತ್ತಮುತ್ತಲ ಪ್ರದೇಶದಿಂದ ಮಳೆ ನೀರು ಹರಿದುಬಂದು ಸಮಸ್ಯೆ ಉಂಟಾಗಿರುವ ಸಂಬಂಧ ಶಾಸಕರು, ಪಾಲಿಕೆ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅಲ್ಲದೆ, ತುರ್ತಾಗಿ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಂತರ 54ನೇ ವಾರ್ಡಿನಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ದತ್ತು ತೆಗೆದುಕೊಳ್ಳುವ ಪ್ರಕ್ರಿಯೆ ನಡೆಸಿದರು. ನಂತರ ಕನಕಗಿರಿ ಸರ್ಕಲ್ ಅಲ್ಲಿನ ಮಕ್ಕಳಿಗೆ ಪಟಾಕಿ ವಿತರಿಸಿದರು. ಬಳಿಕ 51ನೇ ವಾರ್ಡಿನ ನಟರಾಜ ಕಲ್ಯಾಣ ಮಂಟಪದಲ್ಲಿ 75 ಮಂದಿ ಪೌರಕಾರ್ಮಿಕರು ಹಾಗೂ ಒಳಚರಂಡಿ ಪೌರಕಾರ್ಮಿಕರಿಗೆ ಉಪಹಾರ ಬಡಿಸಿದರು.

ಬಳಿಕ 50ನೇ ವಾರ್ಡಿನ ಮಾರ್ಕೆಟ್ ರಸ್ತೆಯಲ್ಲಿ ಬೀದಿ ಬದಿಗಳಲ್ಲಿ ತರಕಾರಿ ಮಾರುವವರಿಗೆ ಬೃಹತ್ ಗಾತ್ರದ ಛತ್ರಿಗಳನ್ನು ವಿತರಿಸಿದರು. ಅಲ್ಪಸಂಖ್ಯಾತ ಮೋರ್ಚಾ ವತಿಯಿಂದ ಸೆಕ್ಯೂರ್ ನರ್ಸಿಂಗ್ ಹೋಂನಲ್ಲಿರುವ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಿದರು. 49ನೇ ವಾರ್ಡಿನ ನಂಜುಮಳಿಗೆ ವೃತ್ತದಲ್ಲಿ ಬಡ ಮಕ್ಕಳಿಗೆ ಶಾಲೆ ಬ್ಯಾಗ್, ಪುಸ್ತಕ ವಿತರಣೆ ಮಾಡಿದ ಶಾಸಕರು, ನಂತರ ಅಂಗವಿಕಲರಿಗೆ ಕೃತಕ ಕಾಲು ವಿತರಣೆ ಮಾಡಿದರು.

55ನೇ ವಾರ್ಡಿನ ಚಾಮುಂಡಿಪುರಂ ವೃತ್ತದಲ್ಲಿ ಬಡ ಮಹಿಳೆಯರಿಗೆ ಸೀರೆ, ವಿಶೇಷಚೇತನ ಮಕ್ಕಳಿಗೆ ಬಟ್ಟೆ ವಿತರಣೆ ಮಾಡಿದ ಶಾಸಕರು, ಯುವ ಮೋರ್ಚಾ ವತಿಯಿಂದ ಆರಾಧ್ಯ ಮಹಾಸಭಾದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿದರು. ಶಿಬಿರದಲ್ಲಿ 75 ಮಂದಿ ಕಾರ್ಯಕರ್ತರು ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿದರು. 56ನೇ ವಾರ್ಡಿನಲ್ಲಿ ಪರಿಶಿಷ್ಟ ಬಡ ಮಕ್ಕಳಿಗೆ ಉಚಿತವಾಗಿ ಪುಸ್ತಕ–ಪೆನ್ನು ನೀಡಿದ ಶಾಸಕರು, 60ನೇ ವಾರ್ಡಿನಲ್ಲಿ ಬಡಜನರಿಗೆ ಬೆಡ್‌ಶೀಟ್ ಹಾಗೂ ರಗ್ಗುಗಳನ್ನು ವಿತರಿಸಿದರು. ನಂತರ ರಾಮಲಿಂಗೇಶ್ವರ ದೇವಸ್ಥಾನದ ಪಾರ್ಕಿನಲ್ಲಿ ಸುಮಾರು 300 ಮಕ್ಕಳಿಗೆ ಪಟಾಕಿ ವಿತರಣೆ ಮಾಡಿದರು. ನಂತರ 61ನೇ ವಾರ್ಡಿನಲ್ಲಿ ವಸತಿಹೀನರಿಗೆ ಬಟ್ಟೆ ಮತ್ತು ಬೆಡ್‌ಶೀಟ್ ವಿತರಣೆ ಮಾಡಿದರು.

ನಂತರ 62ನೇ ವಾರ್ಡಿನಲ್ಲಿ ಗೊಬ್ಬಳಿ ಮರ ವೃತ್ತದಲ್ಲಿ ಸುಮಾರು 25 ಬಡ ಮಹಿಳೆಯರಿಗೆ ಶಾಸಕರು ಹೊಲಿಗೆ ಯಂತ್ರಗಳನ್ನು ವಿತರಿಸಿದರು. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಐರಾವತ ಯೋಜನೆಯಡಿ ಸಿ.ಮಹದೇವ ಎಂಬ ಫಲಾನುಭವಿಗೆ ಟೆಂಪೋ ಟ್ರಾವೆಲರ್ ಸೌಲಭ್ಯ ಸಂಬಂಧ 4.14 ಲಕ್ಷ ರೂ. ಸಬ್ಸಿಡಿ ಹಣದ ಚೆಕ್ ಅನ್ನು ವಿತರಣೆ ಮಾಡಿದರು.

ವಾರ್ಡ್ 63ರಲ್ಲಿ ನಿರ್ಗತಿಕರಿಗೆ ರಗ್ಗುಗಳನ್ನು ವಿತರಣೆ ಮಾಡಿದ ಶಾಸಕರು, ಬಳಿಕ ವಾರ್ಡ್ 65ರಲ್ಲಿ ಶಾಲಾ ಮಕ್ಕಳಿಗೆ ಪುಸ್ತಕ–ಪೆನ್ನುಗಳನ್ನು ವಿತರಣೆ ಮಾಡಿದರು. 64ನೇ ವಾರ್ಡಿನಲ್ಲಿ ತರಕಾರಿ ಮಾರುವವರಿಗೆ ಬೃಹತ್ ಗಾತ್ರದ ಛತ್ರಿ ವಿತರಣೆ ಮಾಡಿದರು. 59ನೇ ವಾರ್ಡಿನಲ್ಲಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ ಮಾಡಿದರು. 57ನೇ ವಾರ್ಡಿನಲ್ಲಿ ಮಕ್ಕಳಿಗೆ ಪುಸ್ತಕ ಹಾಗೂ 43ನೇ ವಾರ್ಡ್ ಮತ್ತು 47ನೇ ವಾರ್ಡ್‌ನಲ್ಲಿ ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ ಮಾಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ನಂದಿನಿ
ಮೈಸೂರು
ಮೈಮುಲ್
ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿ.,
ಬೆಂಗಳೂರು ಮತ್ತು
ಮೈಸೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮೈಸೂರು
ಇವರ ಸಂಯುಕ್ತ ಆಶ್ರಯದಲ್ಲಿ
ನೂತನ ಪಶು ಆಹಾರ ಘಟಕದ
ಭೂಮಿ ಪೂಜಾ ಕಾರ್ಯಕ್ರಮ
ಕರ್ನಾಟಕ ಸಹಕಾರ ಹಾಲು ಮಹಾ ಮಂಡಳಿ ನಿರ್ದೇಶಕರು
ಶ್ರೀ ಹೆಚ್.ಡಿ. ರೇವಣ್ಣ
ಹಾಸನ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ., ಶಾಸಕರು, ಹೊಳೆನರಸೀಪುರ ಮತಕ್ಷೇತ್ರ
ಶ್ರೀ ಎಲ್.ಬಿ.ಪಿ. ಭೀಮನಾಯ್ಕ
ಶ್ರೀ ಹೆಚ್.ಜಿ. ಹಿರೇಗೌಡ್ರ
ಧಾರವಾಡ, ಗದಗ ಮತ್ತು ಉತ್ತರ-ಕನ್ನಡ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಕಾಪು ದಿವಾಕರ ಶೆಟ್ಟಿ
ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಮಾರುತಿ ಕಾಶಂಪೂರ
ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಶ್ರೀಶೈಲಗೌಡ ಬೀ ಪಾಟೀಲ
ವಿಜಯಪುರ-ಬಾಗಲಕೋಟೆ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಕೆ.ಎಸ್. ಕುಮಾರ್
ಮೈಸೂರು ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಅಮರ್‌ನಾಥ ರ ಜಾರಕಿಹೊಳಿ
ಬೆಳಗಾವಿ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಆನಂದ್ ಕುಮಾರ್
ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಆರ್. ಶ್ರೀನಿವಾಸ್
ಕೋಲಾರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಎಂ. ನಂಜುಂಡ ಸ್ವಾಮಿ
ಚಾಮರಾಜನಗರ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಸಿ. ವೀರಭದ್ರ ಬಾಬು
ಶಿವಮೊಗ್ಗ, ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ವಿ.ಎಂ.ವಿಶ್ವನಾಥ್
ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀ ಎಂ.ಕೆ. ಪ್ರಕಾಶ್
ತುಮಕೂರು ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ.,
ಶ್ರೀಮತಿ ಸಲ್ಮಾ ಫಾಹಿಮ್, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
ಕ್ಯಾಪ್ಟನ್ ಡಾ.ಕೆ.ರಾಜೇಂದ್ರ, ಭಾ.ಆ.ಸೇ.
ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ಸರ್ಕಾರ
ಶ್ರೀ ಎಸ್. ರಾಜೀವ್
ಪ್ರಾಂತೀಯ ಮುಖ್ಯಸ್ಥರು ಎನ್.ಡಿ.ಡಿ.ಬಿ. ಬೆಂಗಳೂರು
ಶ್ರೀ ಬಿ.ಸಿ. ಸತೀಶ್, ಕೆ.ಸಿ.ಎಸ್.
ವ್ಯವಸ್ಥಾಪಕ ನಿರ್ದೇಶಕರು, ಕಹಾಮ
ಸರ್ವರಿಗೂ ಆದರದ ಸ್ವಾಗತ
ಶ್ರೀ ಪಿ.ಎಂ. ಪ್ರಸನ್ನ
ಅಧ್ಯಕ್ಷರು ಮೈಮುಲ್ ಮೈಸೂರು
ಶ್ರೀ ಜಿ.ಡಿ. ಹರೀಶ್‌ಗೌಡರು
ಅಧ್ಯಕ್ಷರು ಎಂ.ಸಿ.ಡಿ.ಸಿ. ಬ್ಯಾಂಕ್, ಮೈಸೂರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಬೆಂಗಳೂರು
ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರು
ಶ್ರೀ ಎ.ಟಿ. ಸೋಮಶೇಖರ್ ನಿರ್ದೇಶಕರು
ಶ್ರೀ ಕೆ.ಜಿ. ಮಹೇಶ್ ನಿರ್ದೇಶಕರು
ಶ್ರೀ ಕೆ ಈರೇಗೌಡ ನಿರ್ದೇಶಕರು
ಶ್ರೀ ಕೆ.ಎಸ್. ಕುಮಾರ್ ನಿರ್ದೇಶಕರು
ಶ್ರೀ ಓಂಪ್ರಕಾಶ್ ನಿರ್ದೇಶಕರು
ಶ್ರೀ ಕೆ. ಉಮಾಶಂಕರ್ ನಿರ್ದೇಶಕರು
ನಿರ್ದೇಶಕರು
ಶ್ರೀಮತಿ ಲೀಲಾ ಬಿ.ಕೆ. ನಾಗರಾಜು ನಿರ್ದೇಶಕರು
ನಿರ್ದೇಶಕರು
ನಿರ್ದೇಶಕರು
ಶ್ರೀ ಹೆಚ್.ಡಿ. ರಾಜೇಂದ್ರ ನಿರ್ದೇಶಕರು
ಶ್ರೀ ಬಿ.ಎನ್. ಸದಾನಂದ ನಿರ್ದೇಶಕರು
ಶ್ರೀ ಆರ್. ಚೆಲುವರಾಜ್ ನಿರ್ದೇಶಕರು
ಶ್ರೀ ಎಸ್.ಸಿ. ಅಶೋಕ್ ನಾಮ ನಿರ್ದೇಶಕರು
ಸಹಕಾರ ಸಂಘಗಳ ಜಂಟಿ ನಿಬಂಧಕರು
ನಿರ್ದೇಶಕರು, ಪಶುಸಂಗೋಪನಾ ಇಲಾಖೆ ಕಹಾಮ, ಪ್ರತಿನಿಧಿ
ಉಪ ನಿರ್ದೇಶಕರು ಪಶುಸಂಗೋಪನಾ ಇಲಾಖೆ
ಶ್ರೀ ರಜನಿ ತ್ರಿಪಾಠಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ
ಶ್ರೀ ಬಿ.ಎನ್. ವಿಜಯ್‌ಕುಮಾರ್ ವ್ಯವಸ್ಥಾಪಕ ನಿರ್ದೇಶಕರು
ದಿನಾಂಕ : 28-10-2022ರ ಶುಕ್ರವಾರ
ಸಮಯ : ಮಧ್ಯಾಹ್ನ 12-00 ಗಂಟೆಗೆ
ಸ್ಥಳ : ಸತ್ಯಗಾಲ ಗ್ರಾಮ, ಪಂಚವಳ್ಳಿ,
ಪಿರಿಯಾಪಟ್ಟಣ ರಸ್ತೆ, ತಾ|| ಪಿರಿಯಾಪಟ್ಟಣ

ನಾಳೆ, ನಾಡಿದ್ದು ಮೈಸೂರು ರೇಸ್‌ನಲ್ಲಿ 'ಬೆಟ್ವೇ ಮೈಸೂರು ಡರ್ಬಿ–2022' ವಾರಾಂತ್ಯ ರೇಸ್‌ಗಳು

● ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್‌ರಿಂದ ಟ್ರೋಫಿಗಳ ಅನಾವರಣ ● 2 ದಿನ ಪ್ರತಿಷ್ಠಿತ ರೇಸ್‌ಗಳ ಆಯೋಜನೆ



'ಬೆಟ್ವೇ ಮೈಸೂರು ಡರ್ಬಿ 2022' ವಾರಾಂತ್ಯದ ರೇಸ್‌ನ ಟ್ರೋಫಿಗಳನ್ನು ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಗುರುವಾರ ಅನಾವರಣಗೊಳಿಸಿದರು. ಈ ವೇಳೆ ಎಂಆರ್‌ಸಿ ಅಧ್ಯಕ್ಷ ವೈ.ಬಿ.ಗಣೇಶ್ ಸೇರಿದಂತೆ ಕಮಿಟಿ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು, ಅ.27(ಜಿಎ)– ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ವತಿಯಿಂದ ಮೈಸೂರಿನಲ್ಲಿ ನಡೆಯಲಿರುವ 'ಬೆಟ್ವೇ ಮೈಸೂರು ಡರ್ಬಿ 2022' ವಾರಾಂತ್ಯದ ರೇಸ್‌ನ ಟ್ರೋಫಿಗಳನ್ನು ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಅವರು ಗುರುವಾರ ಸಂಜೆ ಅನಾವರಣಗೊಳಿಸಿದರು.

ಮೈಸೂರಿನಲ್ಲಿ ಅ.29 ಮತ್ತು 30ರಂದು ನಡೆಯಲಿರುವ 'ಬೆಟ್ವೇ ಮೈಸೂರು ಡರ್ಬಿ 2022 (ಗ್ರೇಡ್ 1)' ರೇಸ್‌ನ ಟ್ರೋಫಿಗಳನ್ನು ಕ್ಲಬ್‌ನ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅನಾವರಣಗೊಳಿಸಿ, ಕುದುರೆಗಳ ಮಾಲೀಕರು ತರಬೇತುದಾರರು, ಜಾಕಿಗಳಿಗೆ ಶುಭ ಕೋರಿದರು. ಈ ವೇಳೆ ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಮ್ಯಾನೇಜಿಂಗ್ ಕಮಿಟಿ ವತಿಯಿಂದ ರಾಜಮಾತೆ ಪ್ರಮೋದಾ ದೇವಿ ಒಡೆಯರ್ ಅವರ ಹುಟ್ಟುಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ನಂತರ ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ಅಧ್ಯಕ್ಷ ವೈ.ಬಿ.ಗಣೇಶ್ ಮಾತನಾಡಿ, 'ಬೆಟ್ವೇ ಮೈಸೂರು ಡರ್ಬಿ 2022' (ಗ್ರೇಡ್ 1) ಚಳಿಗಾಲದ ರೇಸ್ ಅ.29 ಮತ್ತು ಅ.30 ನಡೆಯಲಿದ್ದು, ಮೈಸೂರು ರೇಸ್ ಕ್ಲಬ್ ಲಿಮಿಟೆಡ್ ಮತ್ತು ಬೆಟ್ವೇ ಲಿಮಿಟೆಡ್ ನಡುವಿನ ಪ್ರಾಯೋಜಕತ್ವದಿಂದ ಏರ್ಪಡಿಸಲಾಗುತ್ತಿದೆ. ಮಾನ್ಸೂನ್ ಸೀಸನ್ 2022 ರಿಂದ ಡರ್ಬಿ 2023 ವಾರದ ಅಂತ್ಯದವರೆಗೆ ಎರಡೂ ಸಂಸ್ಥೆಗಳಿಗೆ ಹೆಚ್ಚು ಪ್ರಯೋಜನಕಾರಿಯಾಗುವ ರೀತಿಯಲ್ಲಿ ಈ ಪ್ರಾಯೋಜಕತ್ವವನ್ನು ಮುನ್ನಡೆಸುವ ಭರವಸೆ ಇದೆ ಎಂದರು.

ಇಡೀ ರೇಸಿಂಗ್ ಪ್ರಿಯರು ಕಳೆದ 2 ವರ್ಷದಿಂದ ಈ ವಾರಾಂತ್ಯ ರೇಸ್‌ಗೆ ಕಾತುರದಿಂದ ಕಾಯುತ್ತಿದ್ದರು. ಆದರೆ, ಕೊರೊನಾ ಸಾಂಕ್ರಾಮಿಕ ರೋಗದಿಂದಾಗಿ ಕಳೆದ 2 ವರ್ಷದಿಂದ ನಡೆಸಲು ಸಾಧ್ಯವಾಗಲಿಲ್ಲ. ಈಗ ಕ್ಲಬ್ ಪ್ರತಿಷ್ಠಿತ ರೇಸ್‌ಗಳನ್ನು ಏರ್ಪಡಿಸಲು ಸಜ್ಜಾಗುತ್ತಿದೆ. ಇದಕ್ಕೆ ಎಲ್ಲರ ಸಹಕಾರ ಅಗತ್ಯವಿದ್ದು, ಇದು ಯಶಸ್ವಿಯಾಗುತ್ತದೆ ಎಂಬ ಆಶಯವಿದೆ ಎಂದು 'ಬೆಟ್ವೇ ಮೈಸೂರು ಡರ್ಬಿ 2022' ಸ್ಪರ್ಧಿಗಳು, ಮಾಲೀಕರು, ತರಬೇತುದಾರರು ಮತ್ತು ಜಾಕಿಗಳಿಗೆ ಶುಭಹಾರೈಸಿ ಕೋರಿದರು.

ಅ.29ರ ರೇಸ್‌ಗಳು: ಸಿ.ಶೇಷಾಚಲಂ ಸ್ಮಾರಕ ಟ್ರೋಫಿ–ಡಿವಿಷನ್ II, ಶರಣ್ ಲಕ್ಷ್ಮಣ್ ಸ್ಮಾರಕ ಟ್ರೋಫಿ ಡಿವಿಷನ್–I ಎಚ್.ಪಿ.ವಿಶ್ವನಾಥನ್ ಸ್ಮಾರಕ ಟ್ರೋಫಿ, ಸಿ.ಶೇಷಾಚಲಂ ಸ್ಮಾರಕ ಟ್ರೋಫಿ–ಡಿವಿಷನ್ I, ಆರ್.ಎಂ.ಪುಟ್ಟಣ್ಣ ಸ್ಮಾರಕ ಟ್ರೋಫಿ, ಗಾಯತ್ರಿ ದೇವಿ ಸ್ಮಾರಕ ಟ್ರೋಫಿ, ಮೈಸೂರು ರೇಸ್ ಕ್ಲಬ್ ವಾರ್ಷಿಕೋತ್ಸವ ಕಪ್, ದಿ ಬೊಟ್ಟೊಲೆಂಡಾ ಟ್ರೋಫಿ, ಶರಣ್ ಲಕ್ಷ್ಮಣ್ ಸ್ಮಾರಕ ಟ್ರೋಫಿ ಡಿವಿಷನ್–IIಗಾಗಿ ರೇಸ್ ನಡೆಯಲಿವೆ.

ಅ.30ರ ರೇಸ್‌ಗಳು: ದೆಹಲಿ ರೇಸ್ ಕ್ಲಬ್ ಟ್ರೋಫಿ ಡಿವಿಷನ್–II, ದೆಹಲಿ ರೇಸ್ ಕ್ಲಬ್ ಟ್ರೋಫಿ ಡಿವಿಷನ್–I, ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಡಿವಿಷನ್–, ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಟ್ರೋಫಿ, ಹೈದರಾಬಾದ್ ರೇಸ್ ಕ್ಲಬ್ ಟ್ರೋಫಿ, ಬೆಂಗಳೂರು ಟರ್ಫ್ ಕ್ಲಬ್ ಟ್ರೋಫಿ, **ಬೆಟ್ವೇ ಮೈಸೂರು ಡರ್ಬಿ 2022 (ಗ್ರೇಡ್ 1)**, ರಾಯಲ್ ಕಲ್ಕತ್ತಾ ಟರ್ಫ್ ಕ್ಲಬ್ ಟ್ರೋಫಿ, ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಡಿವಿಷನ್–II ರೇಸ್‌ಗಳು ನಡೆಯಲಿವೆ.

ವಿಶೇಷ ಸ್ಪರ್ಧೆ: 1000 ರೂ.ಗಿಂತ ಹೆಚ್ಚಿನ ಹಣ ಪಾವತಿಸುವವರಿಗೆ ಪ್ರತಿ ಬೆಟ್‌ಗೆ ಒಂದು ಹೆಚ್ಚುವರಿ ಸ್ಪರ್ಧೆಯ ನಮೂನೆಗೆ ಅರ್ಹರಾಗಿರುತ್ತಾರೆ. ಇದರಲ್ಲಿ ವಿಜೇತರಾದವರಿಗೆ Renault KWID ಕಾರನ್ನು ಹಾಗೂ ಬಜಾಜ್ ಪ್ಲಾಟಿನಾ ಬೈಕ್ ಅನ್ನು ಬಂಪರ್ ಬಹುಮಾನವಾಗಿ ಮತ್ತು ಮೂವರಿಗೆ ಸಮಾಧಾನಕರ ಬಹುಮಾನ ನೀಡಲಾಗುತ್ತದ್ದು ಇದಕ್ಕಾಗಿ ಈ ಬಾರಿಯ ರೇಸ್‌ನಲ್ಲಿ ವಿಶೇಷ ಕೌಶಲ್ಯ ಸ್ಪರ್ಧೆಯನ್ನು ಆಯೋಜಿಸಿದೆ.

ಬಹುಮಾನಗಳ ಪಟ್ಟಿ ಇಂತಿವೆ: ಪ್ರಥಮ ಸ್ಥಾನ ಪಡೆದ ಕುದುರೆ ಮಾಲೀಕರಿಗೆ 44,67,375 ರೂ., ತರಬೇತುದಾರರಿಗೆ 5,41,500 ರೂ., ಜಾಕಿಗೆ 4,06,125 ರೂ.ಗಳನ್ನು ನೀಡಲಾಗುತ್ತದೆ. ದ್ವಿತೀಯ ಸ್ಥಾನದ ಮಾಲೀಕರಿಗೆ 14,89,125 ರೂ., ತರಬೇತುದಾರರಿಗೆ 1,80,500 ರೂ., ಜಾಕಿಗೆ 1,35,375 ರೂ. ನೀಡಲಾಗುತ್ತದೆ. ತೃತೀಯ ಸ್ಥಾನದ ಮಾಲೀಕರಿಗೆ 7,44,565ರೂ., ತರಬೇತುದಾರರಿಗೆ 90,250 ರೂ., ಜಾಕಿಗೆ 67,690 ರೂ. ಮತ್ತು 4ನೇ ಸ್ಥಾನ ಪಡೆದ ಮಾಲೀಕರಿಗೆ 3,72,280 ರೂ., ತರಬೇತುದಾರರಿಗೆ 45,125 ರೂ., ಜಾಕಿಗೆ 33,845 ರೂ., ಐದನೇ ಸ್ಥಾನದ ಮಾಲೀಕರಿಗೆ 2,23,370 ರೂ., ತರಬೇತುದಾರರಿಗೆ 27,075 ರೂ., ಜಾಕಿಗೆ 20,075 ರೂ ಹಾಗೂ ಆರನೇ ಸ್ಥಾನ ಪಡೆದ ಮಾಲೀಕರಿಗೆ 1,48,910 ರೂ., ತರಬೇತುದಾರರಿಗೆ 18,050, ಜಾಕಿಗೆ 13,535 ರೂ. ನೀಡಲಾಗುತ್ತದೆ.

ದೀಪಾವಳಿಯಂದೇ ಉಪನ್ಯಾಸಕಿ ಸರ ಕಳವು

ಮೈಸೂರು,ಅ.27–ದೀಪಾವಳಿ ಯಂದು ದೇವಸ್ಥಾನಕ್ಕೆ ಹೋಗುತ್ತಿದ್ದ ಉಪನ್ಯಾಸಕಿಯೊಬ್ಬರ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮೈಸೂರಿನ ದಟ್ಟಗಳ್ಳಿಯ ಗಂಟೇಸಪ್ಪ ದೇವಸ್ಥಾನದ ಬಳಿ ನಡೆದಿದೆ. ದಟ್ಟಗಳ್ಳಿ ಇ–ಬ್ಲಾಕ್‌ನಲ್ಲಿ ವಾಸವಿರುವ ಉಪನ್ಯಾಸಕಿ ಅನ್ನಪೂರ್ಣ(32) ಅವರು ಅ.24ರಂದು ಸಂಜೆ ದಟ್ಟಗಳ್ಳಿಯ ಜೋಡಿ ಬೇವಿನಮರದ ಬಳಿ ಇರುವ ದೇವಸ್ಥಾನಕ್ಕೆ ಹೋಗುತ್ತಿದ್ದಾಗ ಆವರ ಬಳಿ ಬಂದ ಖದೀಮ, 25 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಓಡಿ ಹೋಗಿ ಮತ್ತೊರ್ವ ಸ್ಟಾರ್ಟಿಂಗ್‌ನಲ್ಲಿ ನಿಲ್ಲಿಸಿಕೊಂಡಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅತ್ಯಂತ ವಿಜೃಂಭಣೆಯಿಂದ ನಡೆದ ಕುಂಬಾರಕೊಪ್ಪಲು ಮಹದೇಶ್ವರಸ್ವಾಮಿ ಜಾತ್ರೆ

● ಸಾವಿರಾರು ಸಂಖ್ಯೆಯಲ್ಲಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ಭಕ್ತಾದಿಗಳು
● ಮೂರು ದಿನಗಳ ಕಾಲ ದೀಪಾಲಂಕಾರದಲ್ಲಿ ನಾನಾ ಉತ್ಸವ, ಸಂಭ್ರಮಿಸಿದ ಜನ







ಮೈಸೂರು,ಅ.27(ಎಸ್‌ಬಿಡಿ)– ಮೈಸೂರಿನ ಕುಂಬಾರಕೊಪ್ಪಲು ಗ್ರಾಮದಲ್ಲಿ ದೀಪಾವಳಿ ಪ್ರಯುಕ್ತ ಶ್ರೀ ಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಭಕ್ತಿಪೂರ್ವಕ ಹಾಗೂ ವಿಜೃಂಭಣೆಯಿಂದ ನೆರವೇರಿತು.

ಮೈಸೂರು–ಕೆಆರ್‌ಎಸ್ ರಸ್ತೆ ಕಂಬಾರ ಕೊಪ್ಪಲು ಹೆಬ್ಬಾಗಿಲಿನಿಂದ ಶ್ರೀ ಮಹದೇಶ್ವರ ಸ್ವಾಮಿ ದೇವಾಲಯದವರೆಗೆ ಹಾಗೂ ಗ್ರಾಮದ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿತ್ತು. ಹೊಂಬೆಳಕಿನ ನಡುವೆ ವಿಶೇಷ ಪೂಜೆ, ವೈಭವದ ಉತ್ಸವ, ಸಾಂಪ್ರದಾಯಿಕ ಕ್ರೀಡೆ ನಿರ್ವಿಘ್ನವಾಗಿ ನೆರವೇರಿತು. ಕುಂಬಾರಕೊಪ್ಪಲು ಅಭ್ಯುದಯ ಸಂಘದ ನೇತೃತ್ವದಲ್ಲಿ ನಡೆದ ದೀಪಾವಳಿ ಜಾತ್ರೆಯಲ್ಲಿ ಸ್ಥಳೀಯರು ಮಾತ್ರವಲ್ಲದೆ ಮೈಸೂರಿನ ವಿವಿಧೆಡೆ ಹಾಗೂ ದೂರದ ಊರುಗಳಿಂದಲೂ ಸಾವಿರಾರು ಭಕ್ತರು ಆಗಮಿಸಿ ಶ್ರೀ ಮಹದೇಶ್ವರಸ್ವಾಮಿಯ ದರ್ಶನ ಪಡೆದು ಕೃಪಾರ್ಥರಾದರು.

'ಹಾಲರವಿ' ಉತ್ಸವ: ದೀಪಾವಳಿ ದಿನ(ಅ.26) ರಾತ್ರಿ 8 ಗಂಟೆ ನಂತರ ಪ್ರಮುಖವಾದ ಹಾಲರವಿ ಉತ್ಸವ ವೈಭವದಿಂದ ಜರುಗಿತು. ಕೆಆರ್‌ಎಸ್ ಮುಖ್ಯರಸ್ತೆ ಬಳಿಯ ತಿಪ್ಪಾಜಿ ಕೊಳ (ಕಲ್ಯಾಣಿ)ಕ್ಕೆ ವಿಶೇಷ ಪೂಜೆ ಸಲ್ಲಿಸಿದ ನಂತರ ಹಾಲರವಿ ಉತ್ಸವ ಆರಂಭವಾಯಿತು. ವೀರಗಾಸೆ, ಪೂಜಾ ಕುಣಿತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಕಲಾತಂಡಗಳೊಂದಿಗೆ ದೇವರ ಮೂರ್ತಿಯನ್ನು ಮೆರವಣಿಗೆಯಲ್ಲಿ ಗ್ರಾಮಕ್ಕೆ ಕರೆತರಲಾಯಿತು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನೆರವೇರಿದ ಬಳಿಕ ಶ್ರೀ ಮಹದೇಶ್ವರಸ್ವಾಮಿ ದೇವರ ಉತ್ಸವ ದೇವಾಲಯ ತಲುಪಿತು. ಸಂಕಲ್ಪ ಮಾಡಿಕೊಂಡಿದ್ದ ಭಕ್ತರು ಬಾಯಿಗೆ ಬೀಗ ಚುಚ್ಚಿಸಿಕೊಂಡು ಉತ್ಸವದಲ್ಲಿ ಪಾಲ್ಗೊಳ್ಳುವ ಮೂಲಕ ಭಕ್ತಿ ಪರಾಕಷ್ಠೆ ಮೆರೆದರು.

ಹುಲಿವಾಹನ; ಕೊಂಡೋತ್ಸವ: ಇಂದು ಮುಂಜಾವಿನಲ್ಲಿ ಶ್ರೀ ಮಹದೇಶ್ವರಸ್ವಾಮಿ ಹುಲಿ ವಾಹನೋತ್ಸವ ಜರುಗಿತು.

ಹುಲಿ ವಾಹನದಲ್ಲಿ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ದೇವಾಲಯದ ಪ್ರಾಂಗಣದಲ್ಲಿ ಪ್ರದಕ್ಷಿಣೆ ನಡೆಸಿದ ನಂತರ ಗ್ರಾಮದ ಬೀದಿಗಳಲ್ಲಿ ಉತ್ಸವ ಮಾಡಲಾಯಿತು. ಪ್ರತಿ ಮನೆಯವರೂ ಶ್ರೀ ಮಹದೇಶ್ವರಸ್ವಾಮಿಗೆ ಹಣ್ಣು–ಕಾಯಿ ಸಹಿತ ಪೂಜೆ ಸಲ್ಲಿಸಿದರು. ಹುಲಿವಾಹನೋತ್ಸವ ದೇವಾಲಯ ಪ್ರಾಂಗಣಕ್ಕೆ ವಾಪಸ್ಸಾದ ನಂತರ ಅತ್ಯಂತ ಶ್ರದ್ಧಾಭಕ್ತಿಯಿಂದ ಕೊಂಡೋತ್ಸವ ನೆರವೇರಿಸಲಾಯಿತು.

ದೇವರನ್ನು ಹೊತ್ತ ಆರಾಧಕರು ಕೊಂಡ ಹಾಯ್ದು ಭಕ್ತಿ ಮೆರೆದರು. ನಂತರ ಪಕ್ಕದ ಸಮುದಾಯ ಭವನದಲ್ಲಿ ಭಕ್ತರಿಗೆ ಅನ್ನ ಸಂತರ್ಪಣೆ ಕಲ್ಪಿಸಲಾಗಿತ್ತು.

ಕ್ರೀಡಾ ಹಬ್ಬ: ಮೈಸೂರಿನ ಹಳೆಯ ಗ್ರಾಮಗಳಲ್ಲಿ ಇಂದಿಗೂ ಸಾಂಪ್ರದಾಯಿಕ ದೇಸಿ ಕ್ರೀಡೆಗಳನ್ನು ಉಳಿಸಿ, ಮುಂದಿನ ಪೀಳಿಗೆಗೆ ಕಲಿಸುವ ಕಾರ್ಯ ಮುಂದುವರೆದಿದೆ. ಹಾಗೆಯೇ ಕುಂಬಾರಕೊಪ್ಪಲು ಗ್ರಾಮದಲ್ಲೂ ದೀಪಾವಳಿ ಜಾತ್ರಾ ಮಹೋತ್ಸವದ ವೇಳೆ ಕ್ರೀಡಾಹಬ್ಬವೂ ಜೋರಾಗಿರುತ್ತದೆ. ಗ್ರಾಮದಲ್ಲಿರುವ ಪೈಲ್ವಾನರು, ಕ್ರೀಡಾ ಪೋಷಕರು 'ಶ್ರೀ ಮಹದೇಶ್ವರ ಕುಸ್ತಿ ಸೇವಾ ಸಂಘ'ದ ಮೂಲಕ ಪ್ರತಿ ವರ್ಷ ಕುಸ್ತಿ ಪಂದ್ಯಾವಳಿ ನಡೆಸಿಕೊಂಡು ಬಂದಿದ್ದಾರೆ. ಹಾಗೆಂಯೇ ಇಂದು ಗ್ರಾಮದ ಕೆಂಪೇಗೌಡರ ಕ್ರೀಡಾಂಗಣದಲ್ಲಿ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ 30 ಜೋಡಿ ಕುಸ್ತಿಪಟುಗಳು ಸೆಣಸಾಡಿದರು.

ಗೆದ್ದ ಪೈಲ್ವಾನರಿಗೆ ಬಹುಮಾನ ನೀಡಿ, ಅಭಿನಂದಿಸಲಾಯಿತು. ಜಾತ್ರೆ ಅಂಗವಾಗಿ ಈ ಬಾರಿ ಕುಂಬಾರಕೊಪ್ಪಲು ಅಭ್ಯುದಯ ಸಂಘ ಹಾಗೂ ಗಂಧರ್ವ ಸ್ಪೋರ್ಟ್ ಕ್ಲಬ್ ಸಹಯೋಗದಲ್ಲಿ ಅ.25ರಿಂದ ಮೂರು ದಿನ ಕಬಡ್ಡಿ ಪಂದ್ಯಾವಳಿ ಆಯೋಜಿಸುವ ಮೂಲಕ ದೇಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲಾಯಿತು. ವಿಜೇತ ಕಬಡ್ಡಿ ತಂಡಕ್ಕೆ ನಗದು ಬಹುಮಾನ, ಟ್ರೋಫಿ ನೀಡಲಾಯಿತು.

ಐತಿಹ್ಯ ದೇವಾಲಯ: ಕುಂಬಾರಕೊಪ್ಪಲು ಗ್ರಾಮದ ಐತಿಹ್ಯ ಶ್ರೀ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ದೀಪಾವಳಿ ಹಾಗೂ ಯುಗಾದಿ ಹಬ್ಬಗಳ ಸಂದರ್ಭದಲ್ಲಿ ವಿಶೇಷ ಪೂಜಾ ಉತ್ಸವಗಳು ನೆರವೇರುತ್ತವೆ. ಕಾರ್ತಿಕ ಮಾಸ ಮಾತ್ರವಲ್ಲದೆ ಪ್ರತಿ ಸೋಮವಾರ ಇಲ್ಲಿಗೆ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ, ದರ್ಶನ ಪಡೆಯುತ್ತಾರೆ.

ಈ ಬಾರಿ ದೀಪಾವಳಿ ಜಾತ್ರೆಯಲ್ಲಿ ಶಾಸಕ ಎಲ್.ನಾಗೇಂದ್ರ, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಜೆಡಿಎಸ್ ಮುಖಂಡ ಜಿ.ಡಿ.ಹರೀಶ್‌ಗೌಡ, ಗ್ರಾಮ ದವರೇ ಆದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡರು, ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್ ಸೇರಿದಂತೆ ಅನೇಕ ಮುಖಂಡರು, ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.



ಸಾಹಿತ್ಯ, ಕಲೆ, ನಾಟಕಗಳಿಂದ ಬದುಕಿಗೆ ಚೈತನ್ಯ



ಮಂಡ್ಯ,ಅ.27– ಜೀವನದಲ್ಲಿ ಗ್ರಹಿಸುವ ಸಾಹಿತ್ಯ, ಕಲೆ, ನಾಟಕಗಳಿಂದ ಬದುಕಿಗೆ ಚೈತನ್ಯ ದೊರಕುತ್ತದೆ. ನಮ್ಮೊಳಗಿನ ಶಕ್ತಿ ವ್ಯಕ್ತಿತ್ವ ಕಟ್ಟಿಕೊಡುವಲ್ಲಿ ಸಹಾಯಕವಾಗುತ್ತದೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದಲ್ಲಿ ಕರ್ನಾಟಕ ಸಂಘ, ಆದಿಚುಂಚನಗಿರಿ ಮೂಡಲಪಾಯ ಯಕ್ಷಗಾನ ಕೇಂದ್ರಹಾಗೂ ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ ವತಿಯಿಂದ ನಡೆದ ಮಕ್ಕಳಿಂದ ಮಕ್ಕಳಿಗಾಗಿ ನಾಟಕ ಹಾಗೂ ಮೂಡಲಪಾಯ ಯಕ್ಷಗಾನ ರೆಪರ್ಟರಿ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮೋಹನದಾಸ ಕರಮಚಂದ ಗಾಂಧಿಯವರು ಸತ್ಯ ಹರಿಶ್ಚಂದ್ರ ನಾಟಕವನ್ನು ನೋಡಿ ಮನಃ ಪರಿವರ್ತನೆಯಿಂದ 200 ವರ್ಷಗಳ ದಾಸ್ಯದಿಂದ ಹೊರಬಂದು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವ ಶಕ್ತಿಯನ್ನು ಬೆಳೆಸಿತು ಎಂದು ಬಣ್ಣಿಸಿದರು.

ಬಾಲ್ಯದ 15ರಿಂದ 20 ವರ್ಷಗಳಲ್ಲಿ ರೂಢಿಸಿಕೊಳ್ಳುವ ಅಭ್ಯಾಸದಿಂದ 80 ವರ್ಷಗಳ ಬದುಕು ಸುಂದರವಾಗುತ್ತದೆ. ಮನಸ್ಸನ್ನು ಸಮಾಜ ಕಟ್ಟುವ ಕಡೆಗೆ ತಿರುಗಿಸದಿದ್ದರೆ, ನಮ್ಮ ಕೆಟ್ಟ ಮನಸ್ಸು ಮಹಾಭಾರತದ ಕುರುಕ್ಷೇತ್ರವನ್ನು ಸೃಷ್ಟಿಸುತ್ತದೆ ಎಂದು ನಾಟಕದ ಮಹತ್ವವನ್ನು ವಿವರಿಸಿದರು. ನಾಟಕವನ್ನು ನೋಡಿ ಅಲ್ಲಿನ ಹೊಸತನ್ನು ಒಳಗೆ ಬಿಟ್ಟುಕೊಂಡು ನಮ್ಮೊಳಗಿನ ಶಕ್ತಿ ಜಾಗೃತವಾಗಿ ವ್ಯಕ್ತಿತ್ವ ಕಟ್ಟಿಕೊಡುವಲ್ಲಿ ಸಹಾಯಕವಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ವಿದ್ಯಾರ್ಥಿಗಳಿಗೆ ಓದು ಎಷ್ಟು ಮುಖ್ಯವೋ ಕಲೆ–ಸಂಸ್ಕೃತಿ ನಾಟಕಗಳಂಥ ಪಠ್ಯೇತರ ಚಟುವಟಿಕೆಗಳು ಸಹ ಅತ್ಯಮೂಲ್ಯ. ಇದರಿಂದ ಮಾನಸಿಕ ಆರೋಗ್ಯ ಉತ್ತಮಗೊಳ್ಳುತ್ತದೆ. ಪಠ್ಯೇತರ ಚಟುವಟಿಕೆಗಳು ಉತ್ತಮ ನಾಗರಿಕರಾಗಿ ರೂಪುಗೊಂಡು ಸ್ವಾಸ್ಥ್ಯ ಸಮಾಜ ನಿರ್ಮಿಸಲು ಪೂರಕವಾಗುತ್ತದೆ. ಇಂದಿನ ಮೊಬೈಲ್ ಮತ್ತು ಇಂಟರ್‌ನೆಟ್ ಹಾವಳಿಯಲ್ಲಿ ಯುವಕರು ಓದುವ ಮತ್ತು ಇತರೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಶೈಕ್ಷಣಿಕ ಅಭ್ಯಾಸ ಬಿಟ್ಟು ಕಲೆ–ಸಂಸ್ಕೃತಿ ಬಗ್ಗೆ ಹೆಚ್ಚಿನ ಜ್ಞಾನ ಹೊಂದಿರುವುದಿಲ್ಲ. ಈ ಸಂದರ್ಭದಲ್ಲಿ ಇಂಥ ಕಾರ್ಯಕ್ರಮಗಳು ಆಶಾದಾಯಕ. ಯಕ್ಷಗಾನ ಎಂದರೆ ದಕ್ಷಿಣ ಕನ್ನಡ–ಉಡುಪಿಗೆ ಸೀಮಿತ ಎಂದುಕೊಳ್ಳದೆ ಕರ್ನಾಟಕದ ಎಲ್ಲ ಭಾಗಗಳಿಗೂ ಪರಿಚಯಿಸುವ ನಿಟ್ಟಿನಲ್ಲಿ ನಡೆಸುತ್ತಿರುವ ಪ್ರಯತ್ನ ಅಭಿನಂದನೀಯ ಎಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ ಮಾತನಾಡಿದರು. ಶಾಸಕ ಎಂ.ಶ್ರೀನಿವಾಸ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾಧಿಕಾರಿ ಎಚ್.ಎನ್.ಗೋಪಾಲಕೃಷ್ಣ ಜಿಪಂ ಸಿಇಒ ಶಾಂತಾ ಎಲ್.ಹುಲ್ಮನಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಬಿ.ಟಿ.ಚಂದ್ರಕಾಂತ, ಕೆ.ಟಿ.ಸೌಭಾಗ್ಯ, ಶಶಿಧರ್, ಕರ್ನಾಟಕ ಸಂಘದ ಅಧ್ಯಕ್ಷ ಬಿ.ಜಯಪ್ರಕಾಶಗೌಡ ಸೇರಿದಂತೆ ಮತ್ತಿತರರಿದ್ದರು.

ಸಮಾರಂಭದ ನಂತರ ಶಾಲಾ ವಿದ್ಯಾರ್ಥಿಗಳಿಂದ ರಾಷ್ಟ್ರಕವಿ ಕುವೆಂಪು ವಿರಚಿತ ಸ್ಮಶಾನ ಕುರುಕ್ಷೇತ್ರಂ ನಾಟಕ ಪ್ರದರ್ಶನ ನಡೆಯಿತು. ಇನ್ನೂ ಎರಡು ದಿನಗಳ ಕಾಲ ನಾಟಕ ಪ್ರದರ್ಶನ ನಡೆಯಲಿದೆ.

ಸಾವಿನಲ್ಲೂ ಸಾರ್ಥಕತೆ ಮೆರೆದ ಮೊಗಣ್ಣೇಗೌಡ

ಅಂಗಾಂಗ ದಾನದಿಂದ ಹಲವರಿಗೆ ಹೊಸ ಜೀವನ



ಕೆ.ಆರ್.ಪೇಟೆ,ಅ.27– ಮೆದುಳು ನಿಷ್ಕ್ರಿಯಗೊಂಡಿದ್ದ ತಮ್ಮ ತಂದೆಯ ಅಂಗಾಂಗ ದಾನ ಮಾಡಿ ಹಲವು ಜೀವಗಳಿಗೆ ಆಸರೆಯಾಗಿ ಮಾನವೀಯತೆಯೊಂದಿಗೆ ಸಾರ್ಥಕತೆ ಮೆರೆದಿರುವ ಘಟನೆ ಕೆ.ಆರ್.ಪೇಟೆ ತಾಲೂಕಿನ ಬೂಕನಕರೆ ಹೋಬಳಿಯ ಗಂಜಿಗೆರೆ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಘಟನೆ ವಿವರ: ಗಂಜಿಗೆರೆಕೊಪ್ಪಲು ಗ್ರಾಮದ ಮೊಗಣ್ಣೇಗೌಡ(65) ಕಳೆದ ಒಂದು ವಾರದ ಹಿಂದೆ ತಲೆನೋವು ಹೆಚ್ಚಾಗಿ ತಾವು ರಕ್ತಸ್ರಾವದಿಂದ ಬಳಲುತ್ತಿದ್ದು, ಮನೆಯವರು ಗಾಬರಿಗೊಂಡು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಒಳರೋಗಿಯಾಗಿ ದಾಖಲಾಗಿದ್ದಾರೆ. ತಲೆಯಲ್ಲಿ ರಕ್ತದ ಒತ್ತಡ ಹೆಚ್ಚಾಗಿ ಮೆದುಳು ನಿಷ್ಕ್ರಿಯಗೊಂಡಿದ್ದ ಹಿನ್ನೆಲೆಯಲ್ಲಿ ವೈದ್ಯರು ಮೊಗಣ್ಣೇಗೌಡರು ಬದುಕುಳಿಯುವುದಿಲ್ಲ ಎಂಬುದನ್ನು ಖಚಿತ ಪಡಿಸಿದ್ದಾರೆ. ತಂದೆಯ ಮೆದುಳು ನಿಷ್ಕ್ರಿಯಗೊಂಡಿರುವ ವಿಷಯ ತಿಳಿದ ಪುತ್ರರಾದ ರಮೇಶ್, ರವೀಶ್, ಚಂದ್ರು ಅವರು ತಜ್ಞ ವೈದ್ಯರಾದ ಡಾ.ವಾಸನ್ ಸಲಹೆ ಮೇರೆಗೆ ತಮ್ಮ ತಂದೆಯ ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿದರು. ಈ ಮೂಲಕ ಹತ್ತು ಜನರ ಜೀವಕ್ಕೆ ಬೆಳಕು ನೀಡುವ ಮೂಲಕ ತಂದೆಯ ಸಾವಿನಲ್ಲೂ ಅವರ ಮಕ್ಕಳು ಮಾನವೀಯತೆ ಮೆರೆದಿದ್ದಾರೆ.

ಮೈಸೂರು ಜೆಎಸ್‌ಎಸ್ ಆಸ್ಪತ್ರೆಯ ಡಾ.ವಾಸನ್ ಅವರು ಮೊಗಣ್ಣೇಗೌಡ ದೇಹದಿಂದ ಕಿಡ್ನಿ, ಹೃದಯ, ಚರ್ಮ, ಕಣ್ಣುಗಳನ್ನು ತೆಗೆದು ಅಂಗಾಂಗಳನ್ನು ಕಳೆದುಕೊಂಡು ಜೀವನ್ಮರಣದಲ್ಲಿ ಇರುವವರಿಗೆ ಹಾಕಬಹುದು ಎಂದು ತಿಳಿಸಿದರು.

ಸಾವಿನಲ್ಲೂ ಸಾರ್ಥಕತೆ ಮೆರೆದ ಮೃತ ಮೊಗಣ್ಣೇಗೌಡರ ಅಂತ್ಯಸಂಸ್ಕಾರವನ್ನು ಹುಟ್ಟೂರು ಗಂಜಿಗೆರೆಕೊಪ್ಪಲಿ ಗ್ರಾಮದಲ್ಲಿ ಅ.28ರಂದು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದರು.

ತಹಸೀಲ್ದಾರ್‌ಗೆ ಬೆದರಿಕೆ: ಮೂವರ ವಿರುದ್ಧ ಎಫ್‌ಐಆರ್

ಮಂಡ್ಯ,ಅ.27– ಮಂಡ್ಯ ತಹಸೀಲ್ದಾರ್ ಕುಂಞ ಅಹಮದ್ ಅವರಿಗೆ ಬೆದರಿಕೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರ ವಿರುದ್ಧ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ತಹಸೀಲ್ದಾರ್ ಕುಂಞ ಅಹಮದ್ ಅವರು ದೂರು ನೀಡಿದ ಹಿನ್ನಲೆಯಲ್ಲಿ ಕಲ್ಲಹಳ್ಳಿ ರವೀಂದ್ರ, ರವಿ ಮತ್ತು ಸತೀಶ್ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸರ್ಕಾರಿ ಕೆಲಸಕ್ಕೆ ಅಡ್ಡಿ ಮತ್ತು ಹಣಕ್ಕಾಗಿ ಮನೆಗೆ ಬಂದು ಬ್ಲಾಕ್ ಮೇಲ್ ಬೆದರಿಕೆಯಡಿ ತಹಸೀಲ್ದಾರ್ ಕುಂಞ ಅಹಮದ್ ದೂರು ನೀಡಿದ್ದರು. ಅವರ ದೂರಿನ ಅನ್ವಯ ಮೂವರು ಆರೋಪಿಗಳ ವಿರುದ್ಧ ದೂರು ದಾಖಲಾಗಿತ್ತು. ಇದೀಗ ಎಫ್‌ಐಆರ್ ದಾಖಲಾಗಿದೆ.

ಕಳೆದ ಜು.25 ರಂದು ಮಂಡ್ಯದ ಗ್ರಾಮವೊಂದರ ಸರ್ವೆ ನಂ.174/8ರ ಪತ್ರದಂತೆ ಪತ್ರ ಹೊಂದಿರುವವರ ಪರ ಜಾಗದ ನಿಯಮಾನುಸಾರ ಖಾತೆ ಮಾಡಲು ಆದೇಶ ಹೊರಡಿಸಿದ್ದು, ಸದರಿ ಖಾತೆ ನಿಯಮಾನುಸಾರವಿಲ್ಲ ಎಂದು ಕಲ್ಲಹಳ್ಳಿಯ ರವೀಂದ್ರ ಎಂಬಾತ ಆರ್‌ಟಿಐ ಮೂಲಕ ಮಾಹಿತಿ ಕೋರಿದ್ದರು. ಮಾಹಿತಿ ಕೊಡಲು ದಂಡಾಧಿಕಾರಿಗಳ ಕಚೇರಿ ಸಿದ್ಧವಿದ್ದರೂ ಖಾತೆ ನೀಡಿರುವ ಆದೇಶ ತಪ್ಪು ಎಂದು ಪ್ರಶ್ನೆ ಮಾಡಿ, ಪದೇ–ಪದೆ ಕುಂಞ ಅಹಮದ್ ಅವರ ಕಚೇರಿಗೆ ಬಂದು ಕರ್ತವ್ಯದಿಂದ ವಜಾಗೊಳಿಸುವ ಬೆದರಿಕೆ ಹಾಕಿದ್ದಾರೆ ಎಂದು ಎಫ್‌ಐಆರ್ ನಲ್ಲಿ ಉಲ್ಲೇಖಿಸಲಾಗಿದೆ.

ಜೊತೆಗೆ ಸ್ನೇಹಿತ ಸತೀಶ್ ಮತ್ತು ಎಳನೀರು ರವಿ ಅವರೊಂದಿಗೆ ತಹಸೀಲ್ದಾರ್ ಕಚೇರಿ ಆವರಣದಲ್ಲಿ ಕ್ಯಾಂಟೀನ್ ಮತ್ತು ಜೆರಾಕ್ಸ್ ಅಂಗಡಿ ಇಡಲು ಅವಕಾಶ ಮಾಡಿಕೊಡುವಂತೆ ಒತ್ತಾಯಿಸಿದ್ದಾರೆ. ಜೊತೆಗೆ ಕುಂಞ ಅಹಮದ್ ಅವರ ಕೆಲಸಕ್ಕೂ ಅಡ್ಡಿ ಪಡಿಸಿದ್ದು, ನಿಯಮಾನುಸಾರ ಕೆಲಸ ನಿರ್ವಹಿಸುತ್ತಿದ್ದರೂ ತೊಂದರೆ ಕೊಡುವ ಆರೋಪದಡಿ ರವೀಂದ್ರ ಸೇರಿದಂತೆ ಸಹಚರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಜನಸಂಪರ್ಕ ಸಭೆಯಲ್ಲಿ ಸಮಸ್ಯೆ ಆಲಿಸಿದ ಶಾಸಕ



ಭಾರತೀನಗರ.ಅ.27– ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮ ಸೇರಿದಂತೆ ಹಲವು ಗ್ರಾಮಗಳಲ್ಲಿ ಜನಸಂಪರ್ಕ ಸಭೆ ಏರ್ಪಡಿಸಿದ್ದ ಶಾಸಕ ಡಿ.ಸಿ.ತಮ್ಮಣ್ಣ ಜನರ ಸಮಸ್ಯೆ ಆಲಿಸಿದರು. ನಂತರ ಮಾತನಾಡಿದ ಅವರು, ಕ್ಷೇತ್ರದ ಪ್ರತಿಯೊಂದು ಗ್ರಾಮಗಳಿಗೂ ಹಲವಾರು ಬಾರಿ ಬಂದಿದ್ದೇನೆ. ಗ್ರಾಮಕ್ಕೆ ಬರವುದನ್ನು ಕಾರ್ಯಕರ್ತರಿಗೆ ತಿಳಿಸಿ ತಮಟೆ–ನಗಾರಿಗಳನ್ನು ಹೊಡೆಸಿಕೊಂಡು ಮೆರವಣಿಗೆ ಮಾಡಿಸಿಕೊಂಡಿಲ್ಲ, ನನ್ನ ಅಜೆಂಡಾ ಕ್ಷೇತ್ರದ ಅಭಿವೃದ್ಧಿಯೊಂದೇ ಎಂದು ತಿಳಿಸಿದರು.

ಶಾಶ್ವತವಾದ ಕೆಲಸಗಳನ್ನು ಕ್ಷೇತ್ರದಲ್ಲಿ ಮಾಡುತ್ತಿದ್ದೇನೆ. ಕೆಲವು ಸಣ್ಣ–ಪುಟ್ಟ ಸಮಸ್ಯೆಗಳು ಗ್ರಾಮಗಳಲ್ಲಿ ಇರಬಹುದು. ಅವುಗಳನ್ನು ಸಹ ಮುಂದಿನ ದಿನಗಳಲ್ಲಿ ಬಗೆಹಸಿಸುವುದಾಗಿ ತಿಳಿಸಿದರು.

ಹಣವುಳ್ಳವರು ಆಸೆ–ಆಮಿಷಗಳನ್ನು ಒಡ್ಡಿ ಮತದಾರರನ್ನು ಕೊಂಡುಕೊಳ್ಳಲು ಮುಂದಾಗುತ್ತಿದ್ದಾರೆ. ನಾವು ಮಾರಾಟವಾಗಬಾರದು. ಚಿಂತನೆ ನಡೆಸುವಂತಹ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಕ್ಷೇತ್ರಕ್ಕೆ ನಾನು ಬಂದ ಮೇಲೆ ಗ್ರಾಮಗಳನ್ನು ಹೇಗೆ ಅಭಿವೃದ್ಧಿ ಮಾಡಿದ್ದೇನೆಂಬುವುದನ್ನು ಆಲೋಚಿಸಬೇಕೆಂದರು. ಗ್ರಾಮಗಳಲ್ಲಿ ಕೆಲವು ಸಮಸ್ಯೆಗಳು ಬಂದಾಗ ಸಲ್ಲದ ಆರೋಪಗಳನ್ನು ಮಾಡುತ್ತಾರೆ. ನನ್ನ ಬಗ್ಗೆ ತಪ್ಪು ತಿಳುವಳಿಕೆ ಬೇಡ, ಸತ್ಯಾಸತ್ಯತೆಗಳ ಬಗ್ಗೆ ಪರಿಶೀಲಿಸಬೇಕು. ಗ್ರಾಮಗಳ ಅಭಿವೃದ್ಧಿಗೆ ನನ್ನ ಸಹಕಾರ ಇದ್ದೇ ಇರುತ್ತದೆ. ಗ್ರಾಮದ ಅಭಿವೃದ್ಧಿಗೆ ಒಗ್ಗಟ್ಟು ಇರಬೇಕು. ಸಣ್ಣ–ಪುಟ್ಟ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಯಿಂದ ಮಾಡಿಸಿಕೊಳ್ಳಬೇಕು. ಎಲ್ಲವನ್ನು ಶಾಸಕರೇ ಮಾಡಲು ಸಾಧ್ಯವಿಲ್ಲ. ಅಪಪ್ರಚಾರಗಳಿಗೆ ಕಿವಿಕೊಡಬೇಡಿ ಎಂದು ಕೋರಿದರು.

ಕುಮಾರಸ್ವಾಮಿ ಅವರು 45 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದ್ದರು. ಆದರೆ ನನ್ನ 23 ವರ್ಷಗಳ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಸರ್ಕಾರವನ್ನು ನೋಡಿಲ್ಲ, ಕ್ಷೇತ್ರಕ್ಕೆ ಅನುದಾನ ಬಿಡುಗಡೆಗೊಳಿಸುವಲ್ಲಿ ತಾರತಮ್ಯವೆಸಗುತ್ತಿದೆ. ರೈತರ, ಕೂಲಿ ಕಾರ್ಮಿಕರ, ಮಹಿಳೆಯರ ಆರ್ಥಿಕಾಭಿವೃದ್ಧಿಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವು ಭದ್ರಕೋಟೆಯಾಗಿದ್ದು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅಧಿಕಾರದ ಅವಧಿಯಲ್ಲಿ ಜಿಲ್ಲೆಗೆ 8 ಸಾವಿರ ಅನುದಾನವನ್ನು ಘೋಷಣೆ ಮಾಡಿದ ವೇಳೆ ಎರಡು ವಿರೋಧ ಪಕ್ಷಗಳು ಮಂಡ್ಯ ಜಿಲ್ಲಾ ಬಜೆಟ್ ಎಂದು ಹಂಗಿಸಿದ್ದನ್ನು ಎಂದೂ ಮರೆಯಬಾರದು ಎಂದರು.

ಜೆಡಿಎಸ್ ರಾಜ್ಯಸಂಘಟನಾ ಕಾರ್ಯದರ್ಶಿ ಬಿಳಿಯಪ್ಪ ಮಾತನಾಡಿದರು.

ಗ್ರಾಮಗಳಿಗೆ ಭೇಟಿ: ಭುಜುವಳ್ಳಿ, ಕಪರೇಕೊಪ್ಪಲು, ಗೋಪನಹಳ್ಳಿ, ಯಡಗನಹಳ್ಳಿ, ಸಬ್ಬನಹಳ್ಳಿ, ಲಕ್ಷ್ಮೀಗೌಡನದೊಡ್ಡಿ, ಕಡಿಲುವಾಗಿಲು, ಸಿಂಗಟಕೆರೆ, ಮಾದರಹಳ್ಳಿ, ಅರಳಹಳ್ಳಿ ಗ್ರಾಮಗಳಿಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಕುಂದುಕೊರತೆಗಳ ಬಗ್ಗೆ ಆಲಿಸಿ ಜನರಿಂದ ಮನವಿ ಸ್ವೀಕರಿಸಿದರು.

ಇದೇ ವೇಳೆ ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಜಿಲ್ಲಾ ಗೌರವಾಧ್ಯಕ್ಷ ಎಚ್.ಎಂ.ಮರಿಮಾದೇಗೌಡ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಹೊನ್ನೇಗೌಡ, ಭುಜುವಳ್ಳಿ ಆರ್‌ಐ ಪುಟ್ಟಸ್ವಾಮಿ, ಅಪ್ಪಾಜೀಗೌಡ, ಕಪರೇಕೊಪ್ಪಲು ಪುಟ್ಟಸ್ವಾಮಿ, ಜುಂಜಯ್ಯ, ಗಾಳಿಹೊನ್ನಯ್ಯ, ಕಾಡುಕೊತ್ತನಹಳ್ಳಿ ತಾ.ಪಂ ಮಾಜಿ ಸದಸ್ಯ ಕೆಂಪರಾಜು, ದಯಾನಂದ್, ಸ್ವಾಮಿಯಣ್ಣ, ಯಡಗನಹಳ್ಳಿ ಕೆಂಚೇಗೌಡ, ವೈ.ಎಂ.ಹನುಮೇಗೌಡ, ಕೆಂಪರಾಜು, ಸಬ್ಬನಹಳ್ಳಿ ಹೊನ್ನೇಗೌಡ, ಕೃಷ್ಣ, ಲಾಯರ್ ಶಿವಲಿಂಗ, ಕುಳ್ಳೇಗೌಡ, ಪುಟ್ಟಲಿಂಗಾಚಾರಿ ಸೇರಿದಂತೆ ಹಲವರಿದ್ದರು.

ಅಪ್ರಾಪ್ತೆಗೆ ಮರ್ಮಾಂಗ ತೋರಿಸಿದ ವ್ಯಕ್ತಿ ವಿರುದ್ಧ ಪೋಕ್ಸೋ ಪ್ರಕರಣ ದಾಖಲು

ಶ್ರೀರಂಗಪಟ್ಟಣ, ಅ.27–ಅಪ್ರಾಪ್ತ ಬಾಲಕಿಗೆ ಮರ್ಮಾಂಗ ತೋರಿಸಿದ ಆರೋಪದ ಮೇರೆಗೆ ಕುರಿಗಾಹಿಯೋರ್ವನ ವಿರುದ್ಧ ಕೆಆರ್‌ಎಸ್ ಠಾಣೆಯಲ್ಲಿ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.

ಹೊಂಗಳ್ಳಿ ಗ್ರಾಮದ ನಿವಾಸಿ ಕುರಿಗಾಹಿ ನಾಗೇಶ್ (55) ಆರೋಪಿಯಾಗಿದ್ದು, ಈತ ಬುಧವಾರ ಮಧ್ಯಾಹ್ನ ಕುರಿ ಕಾಯುತ್ತಿದ್ದ ವೇಳೆ ಕ್ವಾರ್ಟರ್ಸ್‌ವೊಂದರ ಮನೆ ಮುಂಭಾಗ ಕುಳಿತಿದ್ದ ಬಾಲಕಿಗೆ ತನ್ನ ನಿಕ್ಕರ್ ಬಿಚ್ಚಿ ಮರ್ಮಾಂಗ ತೋರಿಸಿದ್ದಾನೆ ಎಂದು ಆರೋಪಿಸಲಾಗಿದೆ. ಬಾಲಕಿಯು ಈ ಕೃತ್ಯದ ಬಗ್ಗೆ ತಾಯಿಗೆ ತಿಳಿಸಿದ್ದು, ಅವರ ಸೂಚನೆ ಮೇರೆಗೆ ನಾಗೇಶನ ವರ್ತನೆಯನ್ನು ಮೊಬೈಲ್‌ನಲ್ಲಿ ವೀಡಿಯೋ ಮಾಡಿದ್ದಾಳೆ. ವೀಡಿಯೋ ಕ್ಲಿಪ್ಪಿಂಗ್ ಸಮೇತ ಬಾಲಕಿ ತಾಯಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆಆರ್‌ಎಸ್ ಠಾಣೆ ಪೊಲೀಸರು, ಆರೋಪಿ ನಾಗೇಶ್‌ಗೆ ಠಾಣೆಯಲ್ಲೇ ಜಾಮೀನು ನೀಡಿ ನೋಟಿಸ್ ಜಾರಿ ಮಾಡಿ ಕಳುಹಿಸಿದ್ದಾರೆ.

ನೂತನ ಡಿಸಿ ಡಾ.ಗೋಪಾಲಕೃಷ್ಣ ಅಧಿಕಾರ ಸ್ವೀಕಾರ



ಮಂಡ್ಯ,ಅ.27– ನೂತನ ಜಿಲ್ಲಾಧಿಕಾರಿಯಾಗಿ ಗುರುವಾರ ಡಾ.ಎಚ್.ಎನ್.ಗೋಪಾಲಕೃಷ್ಣ ಅಧಿಕಾರ ಸ್ವೀಕರಿಸಿದರು.

ಪಶು ಸಂಗೋಪನೆ ಇಲಾಖೆಯ ಆಯುಕ್ತರಾಗಿ ವರ್ಗಾವಣೆಯಾಗಿರುವ ಎಸ್.ಅಶ್ವತಿ ಅಧಿಕಾರ ಹಸ್ತಾಂತರಿಸಿದರು.

ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಜಿಲ್ಲಾಡಳಿತದ ವತಿಯಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಲಾಗುವುದು ಎಂದರು. ಸಾರ್ವಜನಿಕರು ತಮ್ಮ ಕೆಲಸಗಳಿಗೆ ಜಿಲ್ಲಾ ಮತ್ತು ತಾಲೂಕು ಕಚೇರಿಗಳಿಗೆ ಅಲೆದಾಡುವು ದನ್ನು ತಪ್ಪಿಸಲು ಸರ್ಕಾರ ಹಲವಾರು ಯೋಜನೆ ಗಳನ್ನು ರೂಪಿಸಿದೆ. ಅವುಗಳು ನಿಗದಿತ ಅವಧಿಯಲ್ಲಿ ಫಲಾನುಭವಿಗಳಿಗೆ ತಲುಪಿಸುವುದು. ಜಿಲ್ಲೆಯಲ್ಲಿರುವ ಸಮಸ್ಯೆಗಳನ್ನು ಜಿಲ್ಲಾಡಳಿತ ಒಂದು ತಂಡವಾಗಿ ಕಾರ್ಯನಿರ್ವಹಿಸಿ ಪರಿಹರಿಸುತ್ತದೆ ಎಂದರು.

ಪಾಂಡವಪುರ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ತಹಶೀಲ್ದಾರ್ ರೂಪ, ಜಿಲ್ಲಾಧಿಕಾರಿ ಕಚೇರಿಯ ಹಿರಿಯ ಸಹಾಯಕ ಸ್ವಾಮಿಗೌಡ, ಜಿಲ್ಲಾ ವಾರ್ತಾಧಿ ಕಾರಿ ಎಸ್.ಎಚ್.ನಿರ್ಮಲ ಇತರರಿದ್ದರು.

ಪ್ರಸ್ತುತ ಪಶು ಸಂಗೋಪನೆ ಇಲಾಖೆಯ ಆಯುಕ್ತರಾಗಿ ವರ್ಗಾವಣೆಗೊಂಡ ಎಸ್.ಅಶ್ವತಿ ಅವರಿಗೆ ಬೀಳ್ಕೊಡಲಾಯಿತು.

ಇನ್ಫೋಸಿಸ್, ಬಿವಿಬಿ ಜಂಟಿ ಆಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ

ಮೈಸೂರಲ್ಲಿ ನ.4ರಿಂದ ಏಳು ದಿನಗಳ ಸಾಂಸ್ಕೃತಿಕ ಉತ್ಸವ

ಮೈಸೂರು,ಅ.27(ಪಿಎಂ)– ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ನ.4ರಿಂದ 10ರವರೆಗೆ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ' ಏರ್ಪಡಿಸಲಾಗಿದೆ

ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ಕಲಾಮಂದಿರದಲ್ಲಿ ಈ ಸಾಂಸ್ಕೃತಿಕ ಉತ್ಸವ ನಡೆಯಲಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ಅವರು, ಬಿವಿಬಿ ಕಳೆದ 84 ವರ್ಷಗಳಿಂದ ಭಾರತೀಯ ಸಂಸ್ಕೃತಿ, ಕಲೆ ಹಾಗೂ ಸಾಹಿತ್ಯವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ಭಾರತದ ಇತಿಹಾಸ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಪುಸ್ತಕಗಳನ್ನು ಹೊರತಂದಿದೆ ಎಂದು ತಿಳಿಸಿದರು.

ಭಾರತದ ಸಂವಿಧಾನ ರಚನೆಯಲ್ಲಿ ಮುಖ್ಯ ಪಾತ್ರ ವಹಿಸಿದ ಕುಲಪತಿ ಡಾ.ಕೆ.ಎಂ.ಮುನ್ಷಿ ಅವರು ಬಿವಿಬಿ ಸ್ಥಾಪಿಸಿದರು. ಅವರ ದೂರದೃಷ್ಟಿಯ ಫಲವಾಗಿ ಸ್ಥಾಪನೆಗೊಂಡ ಬಿವಿಬಿ ಪ್ರಸ್ತುತ ದೇಶ ಮತ್ತು ವಿದೇಶಗಳೂ ಸೇರಿದಂತೆ 160ಕ್ಕೂ ಹೆಚ್ಚು ಕೇಂದ್ರಗಳನ್ನು ಹೊಂದಿದೆ. ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯ ಉತ್ತೇಜಿಸುವುದು ಬಿವಿಬಿ ಮುಖ್ಯ ಧ್ಯೇಯವಾಗಿದೆ. 'ಕಲಾಭಾರತಿ' ಶೀರ್ಷಿಕೆಯ ಸಾಂಸ್ಕೃತಿಕ ವಿಭಾಗವನ್ನೂ ಬಿವಿಬಿ ಹೊಂದಿದೆ. ಈ ಏಳು ದಿನಗಳ ಸಾಂಸ್ಕೃತಿಕ ಉತ್ಸವದಲ್ಲಿ ಒಟ್ಟಾರೆ 158 ಕಲಾವಿದರು ಭಾಗವಹಿಸಲಿದ್ದಾರೆ ಎಂದರು.

ಉದ್ಘಾಟನೆ: ನ.4ರಂದು ಸಂಜೆ 5.30ಕ್ಕೆ ಇನ್ಫೋಸಿಸ್ ಮೈಸೂರು ಕಾರ್ಯಕಾರಿ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ಶಾಜಿ ಮ್ಯಾಥ್ಯೂ ಸಾಂಸ್ಕೃತಿಕ ಉತ್ಸವ ಉದ್ಘಾಟಿಸಲಿದ್ದಾರೆ. ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಬಿವಿಬಿ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ.ರಾಘವನ್, ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಅತಿಥಿಗಳಾಗಿ ಭಾಗವಹಿಸಲಿದ್ದು, ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಸಾಂಸ್ಕೃತಿಕ ಉತ್ಸವಕ್ಕೆ ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದ್ದು, ಯಾವುದೇ ಪ್ರವೇಶ ಶುಲ್ಕ ಇರುವುದಿಲ್ಲ ಅಲ್ಲದೆ, ಎಲ್ಲಾ ಏಳು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳು ಬಿವಿಬಿ ಬೆಂಗಳೂರು ಕೇಂದ್ರದ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರಗೊಳ್ಳಲಿವೆ. ಬಿವಿಬಿ ಮೈಸೂರು ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಆಡಳಿತಾಧಿಕಾರಿ ಸುಧೀಂದ್ರ ರಾಜ್ ಸುದ್ದಿಗೋಷ್ಠಿಯಲ್ಲಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷರಾದ ಕೆ.ಬಿ.ಗಣಪತಿ ಅವರು ಮಾತನಾಡಿದರು. (ಎಡದಿಂದ) ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಆಡಳಿತಾಧಿಕಾರಿ ಸುಧೀಂದ್ರ ರಾಜ್ ಚಿತ್ರದಲ್ಲಿದ್ದಾರೆ.

ಕಲಾಶಿಬಿರ...

ಭಾರತೀಯ ಹಬ್ಬಗಳು ಸಾಂಸ್ಕೃತಿಕ ಉತ್ಸವದ ಪ್ರಯುಕ್ತ ನ.8ರಿಂದ 10ರವರೆಗೆ ಮೂರು ದಿನಗಳು ಪ್ರತಿದಿನ ಬೆಳಗ್ಗೆ 10.30ರಿಂದ ಮಧ್ಯಾಹ್ನ 3ರವರೆಗೆ ಮೈಸೂರು ರಂಗಾಯಣದ ಬಯಲು ರಂಗಮಂದಿರ ಆವರಣದಲ್ಲಿ ಕಲಾಶಿಬಿರ ನಡೆಯಲಿದೆ. ಇನ್ನಾ ಉಮ್ಮೇಹಾನಿ ಅವರ ಮಾರ್ಗದರ್ಶನದಲ್ಲಿ ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ ಮತ್ತು ರವಿವರ್ಮ ಆರ್ಟ್ ಇನ್‌ಸ್ಟಿಟ್ಯೂಟ್‌ನ ವಿದ್ಯಾರ್ಥಿಗಳು ಶಿಬಿರದಲ್ಲಿ ಚಿತ್ರಕಲೆ ರಚಿಸಲಿದ್ದಾರೆ. ಸದರಿ ಚಿತ್ರಕಲೆಗಳನ್ನು ಸ್ಥಳದಲ್ಲಿ ಸಾರ್ವಜನಿಕರಿಗಾಗಿ ಪ್ರದರ್ಶಿಸಲಾಗುತ್ತದೆ.

ಪುಸ್ತಕ ಮೇಳ: ಜೊತೆಗೆ ಕಲಾಮಂದಿರ ಆವರಣದಲ್ಲಿ ಬಿವಿಬಿ ಪ್ರಕಾಶನದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ. ಆಸಕ್ತ ಓದುಗರು ರಿಯಾಯಿತಿ ದರದಲ್ಲಿ ಪುಸ್ತಕ ಖರೀದಿಗೆ ಅವಕಾಶ ಕಲ್ಪಿಸಲು ಈ ಮೇಳ ಹಮ್ಮಿಕೊಳ್ಳಲಾಗಿದೆ.



ಶಾಜಿ ಮ್ಯಾಥ್ಯೂ



ಯದುವೀರ್



ಕೆ.ಜಿ.ರಾಘವನ್

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಉತ್ಸವದ ಕುರಿತ ಹೆಚ್ಚಿನ ವಿವರಗಳಿಗೆ ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ (94480 57919), ಬಿವಿಬಿ ಬೆಂಗಳೂರು ಜಂಟಿ ನಿರ್ದೇಶಕಿ ಕೆ.ನಾಗಲಕ್ಷ್ಮೀ ರಾವ್ (98456 25899) ಅವರನ್ನು ಸಂಪರ್ಕಿಸಬಹುದು. ಅಥವಾ ಇ–ಮೇಲ್ ವಿಳಾಸ: *bhavanblrhns50@gmail.com* ಕೂಡ ಸಂಪರ್ಕಿಸಬಹುದು.

ಉತ್ಸವದ ವೇಳಾಪಟ್ಟಿ

ನ.4ರಂದು ಸಂಜೆ 6ಕ್ಕೆ: ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಲಿ ವತಿಯಿಂದ ಸೂತ್ರದ ಗೊಂಬೆ ಆಟ ಪ್ರದರ್ಶನ. ಪ್ರಸಂಗ: ಚೂಡಾಮಣಿ–ಲಂಕಾದಹನ, ನಿರ್ದೇಶನ: ಭಾಸ್ಕರ್ ಕೊಗ್ಗಾ ಕಾಮತ್.





ನ.5ರಂದು ಸಂಜೆ 6ಕ್ಕೆ: ಬೆಂಗಳೂರಿನ ದೃಷ್ಟಿ ಆರ್ಟ್ಸ್ ಮೇಳದ ವತಿಯಿಂದ 'ಭಾರತೀಯ ಹಬ್ಬಗಳು' ಮತ್ತು 'ಶ್ರೀಕೃಷ್ಣ ಪರೀಕ್ಷಣಂ' ಕುರಿತು ಶಾಸ್ತ್ರೀಯ ನೃತ್ಯ ಕಾರ್ಯಕ್ರಮ. ನಿರ್ದೇಶನ: ವಿದುಷಿ ಅನುರಾಧಾ ವಿಕ್ರಾಂತ್.

ನ.6ರಂದು ಸಂಜೆ 4ಕ್ಕೆ: ವಿಶೇಷ ಕಾರ್ಯಕ್ರಮ 'ಅಷ್ಟಾವಧಾನ'. ನಾಲ್ಕು ಗಂಟೆ ಅವಧಿಯ 'ಭಾರತದ ಹಬ್ಬಗಳು' ಕುರಿತು ವಿದ್ವಾನ್ ಶತಾವಧಾನಿ ಡಾ.ಆರ್.ಗಣೇಶ್ ಅವರಿಂದ ಅಷ್ಟಾವಧಾನ ಕಾರ್ಯಕ್ರಮ. ಇವರೊಂದಿಗೆ ಕೆ.ಬಿ.ಎಸ್.ರಾಮಚಂದ್ರ (ನಿಷೇಧಾಕ್ಷರ) ಹೆಚ್.ಎ.ವಾಸುಕಿ (ಸಮಸ್ಯಾಪೂರಣ), ಅಷ್ಟಾವಧಾನಿ ಗಣೇಶ್ ಭಟ್ಟ ಕೊಪ್ಪಲತೋಟ (ದತ್ತಪದಿ), ಡಾ.ರಂಜನಿ ವಾಸುಕಿ (ಧಾತುವಿಗೆ ಮಾತು), ಅರ್ಜುನ್ ಭಾರದ್ವಾಜ್ (ಆಶು ಕವಿತೆ), ಶ್ರೀಶ ಕಾರಂತ (ಉದ್ದಿಷ್ಟಾಕ್ಷರ), ಕಶ್ಯಪ್ ನಾಯಕ್ (ಕಾವ್ಯ ವಾಚನ), ಸೋಮಶೇಖರ್ ಶರ್ಮ (ಅಪ್ರಸ್ತುತ ಪ್ರಸಂಗ) ಅವರು ಅಷ್ಟಾವಧಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.



ನ.7ರಂದು ಸಂಜೆ 6ಕ್ಕೆ: 'ಲಯ ಮಿಲನ' ಶೀರ್ಷಿಕೆಯಡಿ ವಿದ್ವಾನ್ ಬಿ.ಸಿ.ಮಂಜುನಾಥ್ ನಿರ್ದೇಶನದಲ್ಲಿ ವಾದ್ಯ ಸಂಗೀತ ಕಾರ್ಯಕ್ರಮ. ಕೊಳಲು: ಎಲ್.ವಿ.ಮುಕುಂದ್, ಪಿಟೀಲು: ಜೆ.ಕೆ.ಶ್ರೀಧರ್, ಮೃದಂಗ: ಬಿ.ಸಿ.ಮಂಜುನಾಥ್, ಖಂಜಿರ: ಎ.ಎಸ್.ಎನ್.ಸ್ವಾಮಿ, ಘಟಂ: ಎಸ್.ಎನ್.ನಾರಾಯಣಮೂರ್ತಿ, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ.ಕೃಷ್ಣ, ಢೋಲಕ್: ವಿ.ಶ್ರೀಧರ, ತಬಲಾ: ಉದಯರಾಜ್ ಕರ್ಪೂರ್, ಚಂಡೆ: ಹರ್ಷ ಸಾಮಗ, ಡ್ರಮ್ಸ್: ಕಾರ್ತಿಕ್ ಮಣಿ, ಕೊನ್ನಕೋಲ್: ಸೋಮಶೇಖರ್ ಜೋಯಿಸ್.





ನ.8ರಂದು ಸಂಜೆ 6ಕ್ಕೆ: 'ತ್ರಿಪುರಾದ ಹಬ್ಬಗಳು' ಶೀರ್ಷಿಕೆಯಡಿ ಅಗರ್ತಲ ಕಲಾವಿದರಿಂದ 'ಗುಡ್ಡಗಾಡು ಜನಾಂಗದ' ನೃತ್ಯಗಳು. ಪಾಂಚಾಲಿ ಡೆಬ್ ವರ್ಮ ಅವರ ನಿರ್ದೇಶನದಲ್ಲಿ 'ಮಮಿತ', 'ಲೆಬಂಗ್ ಬೋಮನಿ' ಹಾಗೂ 'ಹೋಜಾಗಿರಿ' ನೃತ್ಯಪ್ರದರ್ಶನ

ನ.9ರಂದು ಸಂಜೆ 6ಕ್ಕೆ: ಪಂ.ಪ್ರವೀಣ್ ಡಿ.ರಾವ್ ನಿರ್ದೇಶನದಲ್ಲಿ ಕರ್ನಾಟಕ ಜಾನಪದ ಕಲಾವಿದರಿಂದ ಜಾನಪದ ಮೇಳ.



ನ10ರಂದು ಸಂಜೆ 6ಕ್ಕೆ: 'ಮೈಸೂರು ಸಹೋದರರು' ಎಂದೇ ಖ್ಯಾತನಾಮರರಾದ ವಿದ್ವಾನ್ ಮೈಸೂರು ನಾಗರಾಜು ಮತ್ತು ವಿದ್ವಾನ್ ಡಾ.ಮೈಸೂರು ಮಂಜುನಾಥ್ ಅವರಿಂದ 'ಅಮೋಘ ಯುಗಳ ಪಿಟೀಲು ವಾದನ'. ಮೃದಂಗ: ತುಮಕೂರು ಬಿ.ರವಿಶಂಕರ್, ಘಟಂ: ಗಿರಿಧರ್ ಉಡುಪ, ತಬಲಾ: ರೂಪಕ್ ಕಲ್ಲೂರ್ಕರ್.

ಸುನಕ್‌ಗೆ ಕರೆ ಮಾಡಿ ಅಭಿನಂದಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿ

ನವದೆಹಲಿ,ಅ.27–ನೂತನವಾಗಿ ಆಯ್ಕೆಯಾಗಿರುವ ಬ್ರಿಟಿಷ್ ಪ್ರಧಾನಿ ರಿಷಿ ಸುನಕ್ ಜೊತೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಮಾತುಕತೆ ನಡೆಸಿದ್ದು, ಮುಕ್ತ ವಹಿವಾಟು ಒಪ್ಪಂದಕ್ಕೆ ಉಭಯ ನಾಯಕರು ಒಲವು ತೋರಿದ್ದಾರೆ. ಸುನಕ್ ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ಇದೇ ಮೊದಲ ಮೋದಿ ದೂರವಾಣಿ ಕರೆ ಮೂಲಕ ಅವರನ್ನು ಅಭಿನಂದಿಸಿ ದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ನರೇಂದ್ರ ಮೋದಿ, ರಿಷಿ ಸುನಕ್ ಜೊತೆ ಮಾತನಾಡಲು ಹೆಮ್ಮೆ ಎನ್ನಿಸುತ್ತಿದೆ. ಯುಕೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿರುವುದಕ್ಕೆ ಅವರನ್ನು ಅಭಿನಂದಿಸಿರುವೆ. ಉಭಯ ದೇಶಗಳ ನಡುವಿನ ಕಾರ್ಯತಂತ್ರದ ಪಾಲುದಾರಿಕೆಯನ್ನು ಸಮಗ್ರ ವಾಗಿ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದೇವೆ. ಸಮಗ್ರ ಮತ್ತು ಸಮತೋಲಿತ ಮುಕ್ತ ವಹಿವಾಟು ಕುರಿತಾದ ಆರಂಭಿಕ ತೀರ್ಮಾನದ ಪ್ರಾಮುಖ್ಯತೆಯನ್ನು ಕೂಡ ನಾವು ಒಪ್ಪಿಕೊಂಡಿದ್ದೇವೆ ಎಂದಿದ್ದಾರೆ.



ನಾಳೆ ಮೈಸೂರಲ್ಲಿ ಬಿಜೆಪಿ ಜನಸಂಕಲ್ಪ ಯಾತ್ರೆ

ಕೆಆರ್ ಕ್ಷೇತ್ರದಲ್ಲಿ ವಿವಿಧ ಕಾರ್ಯಕ್ರಮ



ಮೈಸೂರು,ಅ.27(ಪಿಎಂ)– ರಾಜ್ಯಾದ್ಯಂತ ಬಿಜೆಪಿ ವತಿಯಿಂದ ಜನ ಸಂಕಲ್ಪ ಯಾತ್ರೆ ಹಮ್ಮಿಕೊಂಡಿದ್ದು, ಇದರ ಅಂಗವಾಗಿ ನಾಲ್ಕು ತಂಡಗಳು ರಾಜ್ಯದ ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಮಾವೇಶಗಳನ್ನು ಯಶಸ್ವಿಯಾಗಿ ನಡೆಸುತ್ತಿವೆ. ಅಂತೆಯೇ ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ನೇತೃತ್ವದ ತಂಡದಿಂದ ಅ.29ರಂದು ಮೈಸೂರಿನಲ್ಲಿ ಜನಸಂಕಲ್ಪ ಯಾತ್ರೆ ನಡೆಯಲಿದೆ ಎಂದು ಬಿಜೆಪಿ ಕೆಆರ್ ಕ್ಷೇತ್ರದ ಅಧ್ಯಕ್ಷ ಎಂ.ವಡಿವೇಲು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3ಕ್ಕೆ ಕೆಆರ್ ಕ್ಷೇತ್ರ ವ್ಯಾಪ್ತಿಯ ವಿದ್ಯಾರಣ್ಯಪುರಂನ ಬೂತಾಳೆ ಮೈದಾನದಲ್ಲಿ ಸಮಾವೇಶ ಏರ್ಪಡಿಸಲಾಗಿದೆ. ಅಂದು ನಂಜನಗೂಡಿನಿಂದ ಮೈಸೂರಿಗೆ ಆಗಮಿಸುವ ನಳೀನ್ ಕುಮಾರ್ ಕಟೀಲ್ ಅವರನ್ನು ರಿಂಗ್ ರಸ್ತೆಯಿಂದ ಬೈಕ್ ರ್‍ಯಾಲಿ ಮೂಲಕ ಯುವ ಮೋರ್ಚಾ ಕಾರ್ಯಕರ್ತರು, ಬೂತಾಳೆ ಮೈದಾನಕ್ಕೆ ಕರೆತರಲಿದ್ದಾರೆ ಎಂದರು.

ನಂತರ ಮಧ್ಯಾಹ್ನ 3ಕ್ಕೆ ಕೆಆರ್ ಕ್ಷೇತ್ರದ ಬೂತ್ ಮಟ್ಟದ ಏಜೆಂಟ್‌ಗಳು (ಬಿಎಲ್‌ಎ–2), 270 ಬೂತ್‌ಗಳ ಅಧ್ಯಕ್ಷರು ಸೇರಿದಂತೆ ಒಟ್ಟು 540 ಕಾರ್ಯಕರ್ತರ ಜೊತೆಗೆ ಸಂವಾದ ನಡೆಸಲಿದ್ದಾರೆ. ಬಳಿಕ ಸಂಘಟನಾತ್ಮಕ ಸಭೆ ನಡೆಸಲಿದ್ದಾರೆ. ಸಂಜೆ 4ಕ್ಕೆ ಕೆಆರ್ ಕ್ಷೇತ್ರದ 270 ಮತಗಟ್ಟೆಗಳ ವ್ಯಾಪ್ತಿಯಲ್ಲಿ ರಚನೆಯಾಗಿರುವ ಬೂತ್ ಕಮಿಟಿ, ಪಂಚರತ್ನ ಪ್ರಮುಖರು ಹಾಗೂ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಸೇರಿದಂತೆ 5 ಸಾವಿರ ಕಾರ್ಯಕರ್ತರ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ತಿಳಿಸಿದರು.

ಸಂಜೆ 6ಕ್ಕೆ ಶಾಸಕ ಎಸ್.ಎ.ರಾಮದಾಸ್ ಅವರ ಕಚೇರಿಯಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳ ಜೊತೆಗೆ ನಳೀನ್ ಕುಮಾರ್ ಕಟೀಲ್ ಸಂವಾದ ನಡೆಸಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಶಾಸಕ ರಾಮದಾಸ್ ಸೇರಿದಂತೆ ರಾಜ್ಯ ಮಟ್ಟದ ಹಲವು ನಾಯಕರು ಭಾಗವಹಿಸಲಿದ್ದಾರೆ.

ಸಾರಿಗೆ ಬಸ್ ದರ ಹೆಚ್ಚಳ ಪ್ರಸ್ತಾಪ ಇಲ್ಲ

ಸಚಿವ ಶ್ರೀರಾಮುಲು ಸ್ಪಷ್ಟನೆ

ಮೈಸೂರು, ಅ.27(ಆರ್‌ಕೆಬಿ)– ರಾಜ್ಯದಲ್ಲಿ ಸಾರಿಗೆ ಬಸ್ ದರ ಹೆಚ್ಚಳ ಪ್ರಸ್ತಾಪವಿಲ್ಲ. ಸದ್ಯಕ್ಕೆ ಸಾರಿಗೆ ಬಸ್ ದರ ಹೆಚ್ಚಳ ಮಾಡುವುದಿಲ್ಲ ಎಂದು ಸಾರಿಗೆ ಸಚಿವ ಶ್ರೀರಾಮುಲು ಇಂದಿಲ್ಲಿ ಸ್ಪಷ್ಟನೆ ನೀಡಿದರು.



ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಬಸ್ಸುಗಳ ನಿಯೋಜನೆ ಮಾಡಲು ಆದ್ಯತೆ ನೀಡಲಾಗಿದೆ. ಎಲೆಕ್ಟ್ರಿಕ್ ಬಸ್ಸುಗಳನ್ನು ಸೇವೆಗೆ ಸಮರ್ಪಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ, ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಸಚಿವ ಶ್ರೀರಾಮುಲು, ಕಾಂಗ್ರೆಸ್ಸಿನಿಂದ ಹಿಂದುಳಿದ ವರ್ಗಗಳಿಗೆ ನ್ಯಾಯ ಸಿಕ್ಕಿಲ್ಲ, ಸಿಗುವುದೂ ಇಲ್ಲ. ಇತ್ತೀಚೆಗೆ ಭಾರತ್ ಜೋಡೋ ಯಾತ್ರೆ ವೇಳೆ ಕಾಡುಗೊಲ್ಲ ಸಮುದಾಯಕ್ಕೆ ಅಪಮಾನ ಮಾಡಲಾಗಿದೆ. ರಾಹುಲ್ ಗಾಂಧಿ ಭೇಟಿ ಮಾಡಿ, ಸಂವಾದಕ್ಕೆ ಮುಂದಾಗಿದ್ದ ಕಾಡುಗೊಲ್ಲರಿಗೆ ತಡೆಯೊಡ್ಡಲಾಗಿದೆ. ಕಾಡುಗೊಲ್ಲರು ರಾಹುಲ್ ಗಾಂಧಿಯನ್ನು ಭೇಟಿ ಮಾಡಲು ಅಡ್ಡಿಪಡಿಸಲಾಗಿದೆ. ಇದು ಕಾಂಗ್ರೆಸ್ಸಿನ ಹಿಂದುಳಿದ ವರ್ಗಗಳ ವಿರೋಧಿತನಕ್ಕೆ ಸಾಕ್ಷಿಯಾಗಿದೆ ಎಂದು ಟೀಕಿಸಿದರು.

ಅನುದಾನಿತ ಶಾಲಾ-ಕಾಲೇಜು ನೌಕರರ

ಬೇಡಿಕೆ ಈಡೇರಿಸುವ ಸಂಬಂಧ ಶೀಘ್ರ ಕ್ರಮ ವಹಿಸಿ

ಮುಖ್ಯಮಂತ್ರಿಗಳಲ್ಲಿ ಎಂಎಲ್‌ಸಿ ಮರಿತಿಬ್ಬೇಗೌಡ ಒತ್ತಾಯ

ಮೈಸೂರು,ಅ.27(ಪಿಎಂ)– ಅನುದಾನಿತ ಶಾಲಾ–ಕಾಲೇಜುಗಳ ಬೋಧಕ ಮತ್ತು ಬೋಧಕೇತರ ನೌಕರರಿಗೆ ಪಿಂಚಣಿ ಸೌಲಭ್ಯ ಕಲ್ಪಿಸುವುದು ಸೇರಿ ವಿವಿಧ ಬೇಡಿಕೆ ಈಡೇರಿಸುವ ಸಂಬಂಧ ಶಿಕ್ಷಕರ, ಪದವೀಧರರ ಕ್ಷೇತ್ರದ ವಿಧಾನಪರಿಷತ್ ಸದಸ್ಯರು, ಸದರಿ ನೌಕರರ ಸಂಘಟನೆಯ ಪದಾಧಿಕಾರಿಗಳ ಸಭೆ ನಡೆಸಿ ಸೂಕ್ತ ಪರಿಹಾರ ಒದಗಿಸುವಂತೆ ಮುಖ್ಯಮಂತ್ರಿಗಳಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ. ಅ.7ರಂದು ರಾಜ್ಯದ ಎಲ್ಲಾ ಭಾಗಗಳಿಂದಲೂ ಶಾಲಾ–ಕಾಲೇಜುಗಳ ಪಿಂಚಣಿ ವಂಚಿತ ಬೋಧಕ–ಬೋಧಕೇತರರು ತುಮಕೂರು ಶ್ರೀ ಸಿದ್ದಗಂಗಾ ಮಠದಿಂದ ಬೆಂಗಳೂರಿನವರೆಗೆ ಬೃಹತ್ ಪಾದಯಾತ್ರೆ ನಡೆಸಿ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಹೋರಾಟ ನಡೆಸುತ್ತಿದ್ದಾರೆ.



ಟಿ20 ವಿಶ್ವಕಪ್: ಡಚ್ಚರ ವಿರುದ್ಧ ಭಾರತಕ್ಕೆ ಜಯ



ಸಿಡ್ನಿ, ಅ.27– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಭಾರತ ನೆದರ್ಲೆಂಡ್ಸ್ ವಿರುದ್ಧ 56 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಭಾರತ ಬಿ.ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಇಲ್ಲಿನ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 179 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕನ್ನಡಿಗ ಕೆಎಲ್.ರಾಹುಲ್ ಕೇವಲ 9 ರನ್‌ಗೆ ಔಟಾಗುವ ಮೂಲಕ ಮತ್ತೊಮ್ಮೆ ನಿರಾಸೆ ಮೂಡಿಸಿದರು. ಈ ವೇಳೆ ನಾಯಕ ರೋಹಿತ್ ಶರ್ಮಾ ಜೊತೆಗೂಡಿದ ವಿರಾಟ್ ಕೊಹ್ಲಿ 2ನೇ ವಿಕೆಟ್‌ಗೆ 73 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 39 ಎಸೆತಗಳಲ್ಲಿ 3 ಸಿಕ್ಸರ್, 4 ಬೌಂಡರಿ ಒಳಗೊಂಡ 53 ರನ್ ಗಳಿಸಿದ್ದ ರೋಹಿತ್ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸೂರ್ಯ ಕುಮಾರ್ ಯಾದವ್ ಕೊಹ್ಲಿ ಜೊತೆಗೂಡಿ 3ನೇ ವಿಕೆಟ್‌ಗೆ ಅಜೇಯ 95 ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಬಿರುಸಿನ ಬ್ಯಾಟಿಂಗ್ ಮಾಡಿದ ಸೂರ್ಯ ಕುಮಾರ್ ಕೇವಲ 25 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ಒಳಗೊಂಡ 51 ರನ್ ಗಳಿಸಿ ಅಜೇಯರಾಗಿ ಉಳಿದರು. ಮತ್ತೊಂದೆಡೆ ತಾಳ್ಮೆ ಹಾಗೂ ಎಚ್ಚರಿಕೆಯ ಆಟವಾಡಿದ ಕೊಹ್ಲಿ ಕೊನೆ ಓವರ್‌ಗಳಲ್ಲಿ ಅಬ್ಬರಿಸಿದರು. ಅಂತಿಮವಾಗಿ ಅವರು 2 ಸಿಕ್ಸರ್, 3 ಬೌಂಡರಿ ಒಳಗೊಂಡ 62ರನ್ ಸಿಡಿಸಿ ಅಜೇಯರಾಗುಳಿದರು. ನೆದರ್ಲೆಂಡ್ಸ್ ಪರ ಫ್ರೆಡ್ ಕ್ಲಾಸೆನ್, ವ್ಯಾನ್ ಮೀಕೆರೆನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಭಾರತ ನೀಡಿದ 180 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಿದ ನೆದರ್ಲೆಂಡ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 123 ರನ್ ಗಳಿಸಿತು. ನೆದರ್ಲೆಂಡ್ಸ್ ಪರ ಮ್ಯಾಕ್ಸ್ ಓಡೋಡ್, ಬಾಸ್ ಡಿ ಲೀಡೆ ತಲಾ 16, ಕಾಲಿನ್ ಅಕರ್ಮನ್ 17, ಟೀಮ್ ಪ್ರಿಂಗಲ್ 20, ಶಾರೀಜ್ ಅಹ್ಮದ್ 16ರನ್ ಗಳಿಸಿದರು. ಭಾರತದ ಪರ ಭುವನೇಶ್ವರ್ ಕುಮಾರ್, ಹರ್ಷದೀಪ್ ಸಿಂಗ್, ಅಕ್ಷರ್ ಪಟೇಲ್, ರವಿಚಂದ್ರನ್ ಅಶ್ವಿನ್ ತಲಾ 2, ಮೊಹಮ್ಮದ್ ಶಮಿ 1 ವಿಕೆಟ್ ಪಡೆದರು. ಸೂರ್ಯ ಕುಮಾರ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪಾಕ್ ವಿರುದ್ಧ ಜಿಂಬಾಬ್ವೆಗೆ 1 ರನ್‌ಗಳ ರೋಚಕ ಜಯ

ಪರ್ತ್, ಅ.27– ಟೀಂ ಇಂಡಿಯಾ ವಿರುದ್ಧ ಸೋತು ಕಂಗಾಲಾಗಿದ್ದ ಪಾಕಿಸ್ತಾನದ ವಿರುದ್ಧ ಜಿಂಬಾಬ್ವೆ ಒಂದು ರನ್‌ಗಳ ರೋಚಕ ಜಯ ದಾಖಲಿಸಿದೆ.

ಇಲ್ಲಿನ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಜಿಂಬಾಬ್ವೆ ಪಾಕ್ ಬೌಲರ್‌ಗಳ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 130 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಪರ ಸಿಯಾನ್ ವಿಲಿಯಮ್ಸ್ 31, ಕ್ರೇಗ್ ಇರ್ವಿನ್, ಬ್ರಾಡ್ ಇವಾನ್ಸ್ ತಲಾ 19 ರನ್ ಗಳಿಸಿದರು. ಪಾಕ್ ಪರ ಮೊಹಮ್ಮದ್ ವಾಸಿಂ ಜೂನಿಯರ್ 4, ಶಾಬದ್ ಖಾನ್ 3, ಹ್ಯಾರಿಸ್ ರವೂಫ್ ಒಂದು ವಿಕೆಟ್ ಉರುಳಿಸಿದರು.

ಜಿಂಬಾಬ್ವೆ ನೀಡಿದ ಸಾಧಾರಣ ಗುರಿ ಬೆನ್ನತ್ತಿದ ಪಾಕಿಸ್ತಾನ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 129ರನ್ ಗಳಿಸಲಷ್ಟೇ ಶಕ್ತವಾಯಿತು. ತಂಡದ ಪರ ನಾಯಕ ಬಾಬರ್ ಅಜಂ 4, ಮೊಹಮ್ಮದ್ ರಿಜ್ವಾನ್ 14, ಇಫ್ತಿಕಾರ್ ಅಹಮದ್ 5 ಬಹುಬೇಗ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಶಾನ್ ಮಸೂದ್ ಮತ್ತು ಶಾಬದ್ ಖಾನ್ 4ನೇ ವಿಕೆಟ್‌ಗೆ 52 ರನ್ ಕೂಡಿಸಿದರು. ಆದರೆ 17 ರನ್ ಗಳಿಸಿ ಶಾಬದ್ ಖಾನ್ ಔಟಾದರು. ನಂತರ ಬಂದ ಹೈದರ್ ಅಲಿ ಶೂನ್ಯಕ್ಕೆ ಔಟಾದರು. ಶಾನ್ ಮಸೂದ್ 44 ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಹೀಗಾಗಿ ಜಿಂಬಾಬ್ವೆ ಸುಲಭ ಜಯದ ನಿರೀಕ್ಷೆಯಲ್ಲಿತ್ತು ಆದರೆ ಪಾಕ್ ಸುಲಭವಾಗಿ ಸೋಲೊಪ್ಪಲಿಲ್ಲ.

ಮೊಹಮ್ಮದ್ ನವಾಜ್ 22 ಮತ್ತು ಮೊಹಮ್ಮದ್ ವಾಸಿಂ ಜೂನಿಯರ್ ಅಜೇಯ 18 ರನ್ ಗಳಿಸಿ ಪ್ರತಿರೋಧ ತೋರಿದರಾದರೂ ತಮ್ಮ ತಂಡಕ್ಕೆ ಗೆಲುವು ತಂದುಕೊಡಲು ಸಾಧ್ಯವಾಗಲಿಲ್ಲ. ಕೊನೇ ಓವರ್‌ನ ಐದನೇ ಎಸೆತಗಳಲ್ಲಿ ನವಾಜ್ ವಿಕೆಟ್ ಒಪ್ಪಿಸಿದರು. ಅಂತಿಮ ಎಸೆತದಲ್ಲಿ 3 ರನ್ ಬೇಕಿದ್ದಾಗ ಶಾಹಿನ್ ಅಫ್ರಿದಿ 1 ರನ್ ಗಳಿಸಿ ರನೌಟ್ ಆದರು. ಹೀಗಾಗಿ ಪಾಕ್ ಪಡೆ 1 ರನ್ ಅಂತರದಿಂದ ಸೋಲೊಪ್ಪಿಕೊಳ್ಳಬೇಕಾಯಿತು. ಜಿಂಬಾಬ್ವೆ ಪರ ಸಿಕಂದರ್ ರಾಜಾ 3, ಬ್ರಾಡ್ ಇವಾನ್ಸ್ 2, ಬ್ಲೆಸ್ಸಿಂಗ್ ಮುಜರಬಾನಿ, ಲ್ಯೂಕ್ ಜೊಂಗ್ವೆ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು. ಸಿಕಂದರ್ ರಾಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ನ.20ರಂದು ಬಳ್ಳಾರಿಯಲ್ಲಿ ರಾಜ್ಯ ಎಸ್‌ಟಿ ಮೋರ್ಚಾ ಸಮಾವೇಶಕ್ಕೆ ಲಕ್ಷ... ಲಕ್ಷ... ಜನ ಬನ್ನಿ

● ಸಚಿವ ಶ್ರೀರಾಮುಲು ಆಹ್ವಾನ ● ಮೈಸೂರಲ್ಲಿ ಪೂರ್ವಭಾವಿ ಸಭೆ



ಮೈಸೂರು, ಅ.27(ಆರ್‌ಕೆಬಿ)– ಬಿಜೆಪಿ ರಾಜ್ಯ ಎಸ್‌ಟಿ ಮೋರ್ಚಾ ವತಿಯಿಂದ ಬಳ್ಳಾರಿಯಲ್ಲಿ ನ.20ರಂದು ನಡೆಯಲಿರುವ ಕೃತಜ್ಞತಾ ಸಮಾವೇಶಕ್ಕೆ ರಾಜ್ಯಾದ್ಯಂತ ಲಕ್ಷಾಂತರ ಮಂದಿ ಭಾಗವಹಿಸುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಸಾರಿಗೆ ಸಚಿವ ಶ್ರೀರಾಮುಲು ಇಂದಿಲ್ಲಿ ಆಹ್ವಾನ ನೀಡಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಬಳ್ಳಾರಿ ಎಸ್‌ಟಿ ಸಮಾವೇಶ ಕುರಿತ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಬೊಮ್ಮಾಯಿ ಅವರು ಪರಿಶಿಷ್ಟ ವರ್ಗದ ಸಮುದಾಯಕ್ಕೆ ಪ್ರತ್ಯೇಕ ಸಚಿವಾಲಯ ಮಾಡಿಕೊಟ್ಟಿದ್ದಾರೆ. ಅದರ ಮೊದಲ ಸಚಿವನಾಗಿ ನನ್ನನ್ನು ನೇಮಕ ಮಾಡಿದ್ದಾರೆ. ನಾಯಕ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವಲ್ಲಿ ಪ್ರಮುಖ ಕಾರಣರಾದ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕೃತಜ್ಞತೆ ಸಲ್ಲಿಸಬೇಕೆಂದೇ ಬಳ್ಳಾರಿಯಲ್ಲಿ ಕೃತಜ್ಞತಾ ಸಮಾವೇಶ ಏರ್ಪಡಿಸಿದ್ದೇವೆ. ಅವರಿಗೆ ಅಭಿನಂದನೆ ಸಲ್ಲಿಸಲು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯಿಂದ ಕನಿಷ್ಠ 50 ಸಾವಿರ ಮಂದಿ ಹುಬ್ಬಳ್ಳಿ ಸಮಾವೇಶಕ್ಕೆ ಬರಬೇಕು. ರಾಜ್ಯದಿಂದ ಲಕ್ಷಾಂತರ ಮಂದಿ ಹುಬ್ಬಳ್ಳಿ ಸಮಾವೇಶಕ್ಕೆ ಬರುವುದಾದರೆ ಪ್ರಧಾನಿ ಮೋದಿಯವರನ್ನೂ ಆಹ್ವಾನಿಸಲಾಗುವುದು ಎಂದರು.

ಪರಿವಾರ, ತಳವಾರ ಎಸ್‌ಟಿ ಸರ್ಟಿಫಿಕೇಟ್ ಸಿಗುತ್ತಿಲ್ಲವೆಂದು ಮಹಿಳೆಯೊಬ್ಬರು ಅವಲವತ್ತುಕೊಂಡಿದ್ದರಿಂದ ಆ ಬಗ್ಗೆ ನಾನು ಸಮುದಾಯಕ್ಕೆ ನೀಡಿದ್ದ ಭರವಸೆಯಂತೆ ಈ ಪಂಗಡಗಳನ್ನು ಎಸ್‌ಟಿ ಪಂಗಡಕ್ಕೆ ಸೇರಿಸುವ ಮೂಲಕ ಬೇಡಿಕೆ ಈಡೇರಿಸಿದ್ದೇನೆ ಎಂದು ಶ್ರೀರಾಮುಲು ಹೇಳಿದರು.

ಮೀಸಲಾತಿ ಬಗ್ಗೆ ನನ್ನ ಮೇಲೆ ಅನೇಕರು ಅನೇಕ ಮಾತುಗಳನ್ನಾಡಿ ಟೀಕಿಸಿದ್ದರು. ಆದರೆ ನಾನು ಹಿಂಜರಿಯಲಿಲ್ಲ. ರಾಜಕೀಯ ಇಚ್ಛಾಸಕ್ತಿ ಇರುವಂತಹ ಯಾವ ರಾಜಕಾರಣಿಗಳು ಆ ಕೆಲಸ ಮಾಡಲಿಲ್ಲ. ಸಿದ್ದರಾಮಯ್ಯ ಅವರು ಮಾಡಬಹುದಿತ್ತು. ಮಾಡಲಿಲ್ಲ. ಆದರೆ, ಬಿ.ಎಸ್.ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮಾಡಿ ತೋರಿಸಿದ್ದಾರೆ. ಪರಿಶಿಷ್ಟ ಸಮುದಾಯಕ್ಕೆ ಶೇ.7+17 ಸೇರಿ ಒಟ್ಟು 24 ಮೀಸಲಾತಿ ಸಿಗುವಂತಾಯಿತು ಎಂದು ಹೇಳಿದರು.

ಕಾಂಗ್ರೆಸ್ ಪಕ್ಷದ ನಾಯಕರು ವಾಲ್ಮೀಕಿ ಪ್ರತಿಮೆ ಸ್ಥಾಪಿಸಿದ್ದು ಬಿಟ್ಟರೆ, ನಾಯಕ ಸಮುದಾಯಕ್ಕೆ ಬೇರೆ ಏನಾದರೂ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, ನಮ್ಮ ಬಿಜೆಪಿ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ಮೀಸಲಾತಿ ವಿಚಾರವನ್ನು ಕ್ಯಾಬಿನೆಟ್‌ಗೆ ತಂದು ಗೆಜೆಟ್ ಮಾಡಿ ಅದಕ್ಕೆ ರಾಜ್ಯಪಾಲರಿಂದ ಅಂಕಿತ ಹಾಕಿಸುವ ಕೆಲಸವೂ ಆಗಿ, ಅಂದಿನಿಂದಲೇ ಅದೇ ಕ್ಷಣದಿಂದ ಮೀಸಲಾತಿ ಜಾರಿಗೊಳಿಸುವ ಸುಗ್ರೀವಾಜ್ಞೆಯನ್ನು ಹೊರಡಿಸುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿದೆ ಎಂದು ತಿಳಿಸಿದರು.

ಸಭೆಯಲ್ಲಿ ಮೇಯರ್ ಶಿವಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ತಿಪ್ಪರಾಜ ಹವಾಲ್ದಾರ್, ಉಪಾಧ್ಯಕ್ಷ ಮಲ್ಲೇಶ್‌ನಾಯ್ಕ, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಗ್ರಾಮಾಂತರ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಅಪ್ಪಣ್ಣ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಐವರು ಖದೀಮರ ಬಂಧನ: 800 ಕೆ.ಜಿ. ಕರಿಮೆಣಸು, 1.67 ಲಕ್ಷ ನಗದು ವಶ



ಮಡಿಕೇರಿ,ಅ.27– ತೋಟದ ಮನೆಯೊಂದರಿಂದ ಕರಿಮೆಣಸು ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ 5 ಮಂದಿ ಆರೋಪಿಗಳನ್ನು ಸುಂಟಿಕೊಪ್ಪ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿಗಳಿಂದ 800 ಕೆ.ಜಿ. ಕರಿಮೆಣಸು, 1.67 ಲಕ್ಷ ರೂ. ನಗದು ಹಾಗೂ ಕೃತ್ಯಕ್ಕೆ ಬಳಸಿದ 1 ಮಹೀಂದ್ರಾ ಜೀಪನ್ನು ವಶಪಡಿಸಿಕೊಳ್ಳಲಾಗಿದೆ.

ಸುಂಟಿಕೊಪ್ಪ ಠಾಣಾ ವ್ಯಾಪ್ತಿಯ ಅತ್ತೂರು ನಲ್ಲೂರು ಗ್ರಾಮದ ಮಹಾಲಕ್ಷ್ಮಿ ಎಸ್ಟೇಟ್‌ನ ತೋಟದ ಮನೆಯಿಂದ ಅ.17ರಿಂದಅ.19ರ ನಡುವೆ ಸುಮಾರು ರೂ.4ಲಕ್ಷ ಮೌಲ್ಯದ 800 ಕೆ.ಜಿ. ಕರಿಮೆಣಸನ್ನು ಮನೆಯ ಹೆಂಚು ತೆಗೆದು ಒಳ ಪ್ರವೇಶಿಸಿ ಕಳವು ಮಾಡಲಾಗಿತ್ತು. ಈ ಕುರಿತು ಸುಂಟಿಕೊಪ್ಪ ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಎ. ಅಯ್ಯಪ್ಪ ನಿರ್ದೇಶನದಂತೆ ಸೋಮವಾರಪೇಟೆ ಉಪ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಆರ್.ವಿ. ಗಂಗಾಧರಪ್ಪ ಉಸ್ತುವಾರಿಯಲ್ಲಿ ಕುಶಾಲನಗರ ವೃತ್ತ ನಿರೀಕ್ಷಕ ಬಿ.ಜಿ.ಮಹೇಶ್ ನೇತೃತ್ವದಲ್ಲಿ ಒಂದು ತನಿಖಾ ತಂಡವನ್ನು ರಚಿಸಲಾಗಿತ್ತು.

ಪ್ರಕರಣವನ್ನು ಬೇಧಿಸಿದ ಪೊಲೀಸರ ತಂಡ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೂತನಹಳ್ಳಿ ನಿವಾಸಿ ಮೂರ್ತಿ, ಪಿರಿಯಾಪಟ್ಟಣ ತಾಲೂಕಿನ ತರಿಕಲ್ಲು ಗ್ರಾಮದ ಕುಮಾರ, ಹರೀಶ, ಸಿದ್ದಾಪುರ ಬಳಿಯ ಬಾಡಗ ಬಾಣಂಗಾಲ ಗ್ರಾಮದ ಚಂದ್ರಶೇಖರ್ ಮತ್ತು ಮೂಲತಃ ಪೊನ್ನಂಪೇಟೆ ತಾಲೂಕಿನ ತೂಚಮಕೇರಿ ನಿವಾಸಿ ಹಾಲಿ ಇದೇ ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡಿರುವ ಎಂ.ಸಿ.ಕಾಳಪ್ಪ ಎಂಬ ಐವರನ್ನು ಬಂಧಿಸಿ ವಿಚಾರಣೆ ನಡೆಸಿದ್ದರು.

ಈ ವೇಳೆ ಆರೋಪಿಗಳು ಕಳವು ಮಾಡಿದ 800 ಕೆ.ಜಿ. ಕರಿಮೆಣಸು, 1.67 ಲಕ್ಷ ರೂ.ನಗದು ಹಾಗೂ ಕಳವಿಗೆ ಉಪಯೋಗಿಸಿದ ಒಂದು ಮಹೀಂದ್ರಾ ಜೀಪನ್ನು ವಶಪಡಿಸಿಕೊಂಡು ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಕುಶಾಲನಗರ ವೃತ್ತನಿರೀಕ್ಷಕ ಬಿ.ಜಿ.ಮಹೇಶ್ ತಂಡದಲ್ಲಿ ಸುಂಟಿಕೊಪ್ಪ ಠಾಣಾ ಪಿಎಸ್‌ಐ ಹೆಚ್.ಡಿ.ಮಂಜು, ಪಿಎಸ್‌ಐ ಸ್ವಾಮಿ ಹೆಚ್.ಸಿ, ಕುಶಾಲನಗರ ಗ್ರಾಮಾಂತರ ಠಾಣೆಯ ಪಿಎಸ್‌ಐ ಹೆಚ್.ವಿ.ಚಂದ್ರಶೇಖರ್, ಪ್ರೊ.ಪಿಎಸ್‌ಐ ನವೀನ್, ಎಎಸ್‌ಐ ಗೋಪಾಲ್ ಎಂ.ಎ, ಹಾಗೂ ಸಿಬ್ಬಂದಿಗಳಾದ ದಯಾನಂದ, ಸಜಿ, ಲೋಕೇಶ್, ಚಂಗಪ್ಪ, ಪ್ರಕಾಶ್, ಪ್ರವೀಣ್, ಸಂದೇಶ್, ರಂಜಿತ್, ಚಾಲಕರಾದ ಅರುಣ್, ಜಯಶಂಕರ್ ಹಾಗೂ ಸಿಡಿಆರ್ ವಿಭಾಗದ ರಾಜೇಶ್, ಗಿರೀಶ್ ಮತು ಪ್ರವೀಣ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕಾಲು ಜಾರಿ ಕೆರೆಗೆ ಬಿದ್ದು ವಿದ್ಯಾರ್ಥಿನಿ ಸಾವು

ಮಡಿಕೇರಿ,ಅ.27– ದನ ಕಟ್ಟಲು ತೆರಳುತ್ತಿದ್ದ ಸಂದರ್ಭ ಯುವತಿಯೋರ್ವಳು



ಕಾಲು ಜಾರಿ ಕೆರೆಗೆ ಬಿದ್ದು ಮೃತಪಟ್ಟ ಘಟನೆ ನಾಪೋಕ್ಲು ಪಾರಾಣೆ ಗ್ರಾ.ಪಂ ವ್ಯಾಪ್ತಿಯ ಕಿರುಂದಾಡು ಗ್ರಾಮದಲ್ಲಿ ನಡೆದಿದೆ. ಪಾರಾಣೆ ಗ್ರಾಪಂ ಸದಸ್ಯೆ ದಾಕ್ಷಾಯಿಣಿ ಮತ್ತು ಕುಶಾಲಪ್ಪ ದಂಪತಿ ಪುತ್ರಿ ಚಸ್ಮಿಕಾ(20) ಎಂಬಾಕೆ ಮೃತ ದುರ್ದೈವಿಯಾಗಿದ್ದಾರೆ.

ಮೂರ್ನಾಡು ಕಾಲೇಜಿನಲ್ಲಿ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದ ಚಸ್ಮಿಕಾ ಬುಧವಾರ ದನ ಕಟ್ಟಲು ಕೆರೆಯ ದಂಡೆಯ ದಾರಿಯಲ್ಲಿ ತೆರಳುತ್ತಿದ್ದಾಗ ಕಾಲುಜಾರಿ ಕೆರೆಗೆ ಬಿದ್ದಿದ್ದು, ಈಜು ಬಾರದೇ ಮೃತಪಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಸದಾಶಿವ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ನಾಪೋಕ್ಲು ಯುವಕರ ತಂಡ ಕೆರೆಯಿಂದ ಯುವತಿಯ ಮೃತದೇಹವನ್ನು ಹೊರ ತೆಗೆದಿದ್ದಾರೆ. ಘಟನೆ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಶಾಸಕರಾದ ಕೆ.ಜಿ ಬೋಪಯ್ಯ ಭೇಟಿ ನೀಡಿ ಮೃತ ಯುವತಿಯ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಎಂ.ಕುಟ್ಟಪ್ಪ ಸ್ಮರಣಾರ್ಥ

ಕೊಡವ ಕೌಟುಂಬಿಕ ರಿಂಕ್ ಹಾಕಿ ಪಂದ್ಯಾವಳಿಗೆ ಚಾಲನೆ



ಪೊನ್ನಂಪೇಟೆ, ಅ.27– ಕರ್ನಾಟಕ ಪಬ್ಲಿಕ್ ಶಾಲಾ ಟರ್ಫ್ ಮೈದಾನದಲ್ಲಿ ಕೊಡವ ಹಾಕಿ ಅಕಾಡೆಮಿ ವತಿಯಿಂದ ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಎಂ. ಕುಟ್ಟಪ್ಪ ಸ್ಮರಣಾರ್ಥ ನವೆಂಬರ್ 6 ರವರೆಗೆ ಆಯೋಜಿಸಿರುವ ಕೊಡವ ಕೌಟುಂಬಿಕ ರಿಂಕ್ ಹಾಕಿ ಪಂದ್ಯಾವಳಿಗೆ ಗುರುವಾರ ಚಾಲನೆ ನೀಡಲಾಯಿತು.

ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ(ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಎಂ. ಕುಟ್ಟಪ್ಪ ಅವರ ಪುತ್ರ) ಪಾಂಡಂಡ ಕೆ.ಬೋಪಣ್ಣ ಬೆಳ್ಳಿ ಸ್ಟಿಕ್ ಮೂಲಕ ಚೆಂಡನ್ನು ನೂಕಿ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ, ಕೊಡವ ಹಾಕಿ ಪೋಷಣೆಗೆ ತಂದೆಯ ಕನಸು ಈಡೇರಿಸಲು ಶ್ರಮಿಸಲಾಗುವುದು ಎಂದರು. ತಂದೆಯ ಸಹೋದರ ಕಾಶಿ ಪೊನ್ನಪ್ಪ ಅವರೊಂದಿಗೆ ಸೇರಿಕೊಂಡು ಕೊಡವ ಕೌಟುಂಬಿಕ ಹಾಕಿ ನಮ್ಮೆ ಆರಂಭಿಸಿದ್ದರು. ನಂತರದ ದಿನಗಳಲ್ಲಿ ನಮ್ಮೆಯ ವಿಶೇಷ ಪ್ರದರ್ಶನ ನೀಡಿದ ತಂಡಗಳ ನಡುವೆ ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆಯೋಜಿಸಲು ಚಿಂತನೆ ನಡೆಸಿದ್ದರು. ಕೊಡವ ಹಾಕಿಗೆ ಪ್ರತ್ಯೇಕ ಮೈದಾನ, ಮೂಲಭೂತ ವ್ಯವಸ್ಥೆ ಒಂದೇ ಕಡೆಯಲ್ಲಿ ದೊರೆಯುವಂತೆ ಮಾಡಲು ಉತ್ಸುಕರಾಗಿದ್ದರು. ಇದನ್ನು ಅನುಷ್ಠಾನ ಗೊಳಿಸಲಾಗುವುದು. ಕೊಡವ ಹಾಕಿ ಉಳಿವಿಗೆ ಅಕಾಡೆಮಿ ಮೂಲಕ ತೊಡಗಿ ಕೊಳ್ಳಲಾಗುವುದು ಎಂದರು.

ಕೊಡವ ಕೌಟುಂಬಿಕ ಹಾಕಿ ಮೂಲಕ ಕೊಡಗಿನ ಎಲ್ಲ ಜನಾಂಗಗಳ ಕ್ರೀಡಾ ಉತ್ಸವಕ್ಕೆ ಕಾರಣಕರ್ತರಾದ ಪಾಂಡಂಡ ಎಂ. ಕುಟ್ಟಪ್ಪ ಕೊಡವ ಕೌಟುಂಬಿಕ ಹಾಕಿ ಜನಕ ಮಾತ್ರವಲ್ಲ, 'ಕೊಡಗಿನ ಸರ್ವ ಜನಾಂಗಗಳ ಕ್ರೀಡಾಕೂಟದ ಜನಕ' ಎಂದು ಜೀವ ವೈವಿಧ್ಯ ಮಂಡಳಿ ರಾಜ್ಯ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಬಣ್ಣಿಸಿದರು.

ಕುಟ್ಟಪ್ಪ ಅವರ ಪತ್ನಿ ಲೀಲಾ ಕುಟ್ಟಪ್ಪ, ಸಹೋದರಿ ಕಸ್ತೂರಿ ಚಂಗಪ್ಪ, ಹಾಕಿ ಒಲಿಂಪಿಯನ್ ಚೆಪ್ಪುಡೀರ ಪೂಣಚ್ಚ, ಕೂರ್ಗ್ ಹಾಕಿ ಅಸೋಸಿಯೇಷನ್ ಮಾಜಿ ಅಧ್ಯಕ್ಷರಾದ ಚೆಪ್ಪುಡೀರ ಎ.ಮುತ್ತಣ್ಣ, ನೆಲ್ಲಮಕ್ಕಡ ಮೋಹನ್ ಅಯ್ಯಪ್ಪ, ಪೊನ್ನಂಪೇಟೆ ಗ್ರಾ.ಪಂ ಅಧ್ಯಕ್ಷೆ ಗಿರಿಜಾ ವೆಂಕಟೇಶ್, ಕರ್ನಾಟಕ ಪಬ್ಲಿಕ್ ಶಾಲೆ ಉಪಾಧ್ಯಕ್ಷ ಮಂಡೆಚಂಡ ದಿನೇಶ್ ಚಿಟ್ಟಿಯಪ್ಪ, ಉಪ ಪ್ರಾಂಶುಪಾಲ ಚಂಗಪ್ಪ, ಹಾಕಿ ಮೈಸೂರು ಅಧ್ಯಕ್ಷ ಕೊಂಗಂಡ ದಿಲೀಪ್, ಹಾಕಿ ಕೂರ್ಗ್ ಉಪಾಧ್ಯಕ್ಷ ಪಳಂಗಂಡ ಲವಕುಮಾರ್, ಉದ್ಯಮಿ ತೀತರಮಾಡ ಪ್ರಭು ಇದ್ದರು.


ಬೆಳ್ಳಿ ಸ್ಟಿಕ್, ಚೆಂಡು; ಕೊಡವ ಹಾಕಿ ಅಕಾಡೆಮಿಗೆ ಚೆಪ್ಪುಡೀರ ಕುಟುಂಬವು ಬೆಳ್ಳಿಯ ಸ್ಟಿಕ್, ಚೆಕ್ಕೇರ ಕುಟುಂಬ ಬೆಳ್ಳಿಯ ಚೆಂಡು ನೀಡಿ ಪ್ರೋತ್ಸಾಹಿಸಿದನ್ನು ನೆನಪಿಸಿಕೊಳ್ಳಲಾಯಿತು. ವಿಶ್ವದಲ್ಲಿಯೇ ಕೊಡವ ಹಾಕಿ ನಮ್ಮೆಯಲ್ಲಿ ಮಾತ್ರ ಬೆಳ್ಳಿ ಸ್ಟಿಕ್ ಮತ್ತು ಚೆಂಡು ಬಲಸಲಾಗುತ್ತದೆ ಎಂದು ತಿಳಿಸಲಾಯಿತು.

ನೆನಪು, ಉದ್ಗಾರ; ಹಾಕಿ ಮೂಲಕ ಕೊಡವರನ್ನು ಒಗ್ಗೂಡಿಸಲು ಕಾರಣಕರ್ತರಾದ ಕೊಡವ ಕೌಟುಂಬಿಕ ಹಾಕಿ ಜನಕ ಪಾಂಡಂಡ ಕುಟ್ಟಪ್ಪ ಅವರನ್ನು ಉದ್ಘಾಟನಾ ಕಾರ್ಯಕ್ರಮದುದ್ದಕ್ಕೂ ನೆನಪಿಸಿಕೊಳ್ಳಲಾಯಿತು. 1997 ರಲ್ಲಿ ಪಾಂಡಂಡ ಹಾಕಿ ನಮ್ಮೆ ಆಚರಿಸಿ 21 ವರ್ಷದ ಹಾಕಿ ನಮ್ಮೆ ಆಚರಣೆಗೆ ನಾಂದಿ ಹಾಡಿದಕ್ಕೆ ಕೃತಜ್ಞತೆ ಸಲ್ಲಿಸಲಾಯಿತು. 856 ಕೊಡವ ಕುಟುಂಬಗಳಲ್ಲಿ 333 ಕುಟುಂಬಗಳು ಸ್ಪರ್ಧಿಸಿದ್ದ (ಕುಲ್ಲೇಟೀರ ಕಪ್‌ನಲ್ಲಿ) ಕಾರಣ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ದಾಖಲೆಗೆ ಕಾರಣಕರ್ತರಾದ ಬಗ್ಗೆ ತಿಳಿಸಲಾಯಿತು. ನವದೆಹಲಿಯ ಇಂದ್ರಪ್ರಸ್ಥ ಸಭಾಂಗಣದಲ್ಲಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ ಚೇರ್ಮನ್ ಜಾನ್ ವಾಲ್ಟರ್, ಶಭನಾಸ್ಮಿ ಅವರಿಂದ ಗೌರವ ಸ್ವೀಕರಿಸಿದ ಕುಟ್ಟಪ್ಪ ಅವರ ಸಾಧನೆ ಬಗ್ಗೆ ಕಾರ್ಯಕ್ರಮದಲ್ಲಿ ಬೆಳಕು ಚೆಲ್ಲಲಾಯಿತು.

ಮಾತುಗಳ ನೆನಪು; ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಪ್ರಶಸ್ತಿ ಸ್ವೀಕಾರ ಸಂದರ್ಭ ಪಾಂಡಂಡ ಕುಟ್ಟಪ್ಪ ಅವರು, 'ಕೊಡವ ಕುಟುಂಬ ಒಂದಾಗಲಿ, ಹುಡುಗ ಮತ್ತು ಹುಡುಗಿಯರು ಮತ್ತಷ್ಟು ಹಾಕಿಯಲ್ಲಿ ದೇಶವನ್ನು ಪ್ರತಿನಿಧಿಸಲಿ' ಎಂದು ಹೇಳಿದ್ದನ್ನು ಸ್ಮರಿಸಲಾಯಿತು.

ಶಿಕ್ಷಣ ಇಲಾಖೆ ನಿಯಮ ಪಾಲಿಸದ ಅರಬಿ ಶಾಲೆಗಳ ವಿರುದ್ಧ ಕ್ರಮ

ಶಿಕ್ಷಣ ಸಚಿವ ಬಿ.ಸಿ.ನಾಗೇಶ್



ಮಡಿಕೇರಿ,ಅ.27– ರಾಜ್ಯದಲ್ಲಿನ ಹಲವಾರು ಅರಬಿ ಶಾಲೆಗಳು ಶಿಕ್ಷಣ ಇಲಾಖೆಯ ನಿಯಮ ಪಾಲಿಸದೇ ಪ್ರಮುಖ ವಿಷಯಗಳನ್ನೇ ಭೋದಿಸದೇ ಇರುವುದು ಗಮನಕ್ಕೆ ಬಂದಿದೆ. ಈ ನಿಟ್ಟಿನಲ್ಲಿ ಸಮಗ್ರ ಮಾಹಿತಿ ಕಲೆ ಹಾಕಿ ಇಂತಹ ಶಾಲೆಗಳ ವಿರುದ್ದ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಶಿಕ್ಷಣ ಸಚಿವ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಅವರು, ರಾಜ್ಯದಲ್ಲಿ 200 ಅರಬಿ ಶಾಲೆಗಳಿದ್ದು, ಈ ಪೈಕಿ 108 ಅನುದಾನಿತ ಶಾಲೆಗಳು ಮತ್ತು 80ಕ್ಕೂ ಅಧಿಕ ಅನುದಾನ ರಹಿತ ಶಾಲೆಗಳಿವೆ. ಶಿಕ್ಷಣ ಇಲಾಖೆಯಲ್ಲಿ ನೋಂದಾಯಿಸಿಕೊಂಡಿರುವ ಈ ಎಲ್ಲಾ ಶಾಲೆಗಳು ರಾಜ್ಯ ಶಿಕ್ಷಣ ಇಲಾಖೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕಾಗಿದೆ.

ಹೀಗಿದ್ದರೂ ಬಹುತೇಕ ಅರಬಿ ಶಾಲೆಗಳು ಶಿಕ್ಷಣ ಇಲಾಖೆಯ ನಿಯಮ ಪಾಲಿಸದೇ ವಿಜ್ಞಾನದಂತಹ ಪ್ರಮುಖ ವಿಷಯಗಳನ್ನೇ ಭೋದಿಸುತ್ತಿಲ್ಲ. ಇದರಿಂದಾಗಿ ಅರಬಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಡಕಾಗಿದೆ ಎಂಬ ದೂರುಗಳು ಬಂದಿವೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿನ ಅರಬಿ ಶಾಲೆಗಳ ಸಮೀಕ್ಷೆ ಮಾಡಲಾಗುತ್ತಿದೆ. ಸಮಗ್ರ ಮಾಹಿತಿಯನ್ನು ಕಲೆ ಹಾಕಿದ ಬಳಿಕ ಯಾವ ಶಾಲೆಗಳು ಶಿಕ್ಷಣ ಇಲಾಖೆಯ ನಿಯಮ ಪಾಲಿಸದೇ ಸೂಕ್ತ ವಿದ್ಯಾಭ್ಯಾಸ ಕಲಿಸುತ್ತಿಲ್ಲವೋ ಅಂತಹ ಶಾಲೆಗಳ ವಿರುದ್ದ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸಚಿವ ನಾಗೇಶ್ ಹೇಳಿದರು.

ಈ ಸಂದರ್ಭ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಮಡಿಕೇರಿ ನಗರ ಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಮತ್ತಿತರರು ಹಾಜರಿದ್ದರು.

ಜಿಪಂ ನೂತನ ಸಿಇಓ ಡಾ.ಆಕಾಶ್ ಅಧಿಕಾರ ಸ್ವೀಕಾರ

ಮಡಿಕೇರಿ,ಅ.27– ಕೊಡಗು ಜಿಲ್ಲಾ ಪಂಚಾಯತಿಯ ನೂತನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಡಾ.ಎಸ್.ಆಕಾಶ್ ಅಧಿಕಾರ ಸ್ವೀಕಾರ ಮಾಡಿದರು. ನಿರ್ಗಮಿತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭಂವರ್ ಸಿಂಗ್ ಮೀನಾ ಅವರು ಹೂ ಗುಚ್ಛ ನೀಡುವ ಮೂಲಕ ನೂತನ ಸಿ.ಇ.ಓ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಡಾ. ಎಸ್.ಆಕಾಶ್ ಅವರು 2019ನೇ ಬ್ಯಾಚ್‌ನ ಐ.ಎ.ಎಸ್. ಅಧಿಕಾರಿಯಾಗಿದ್ದು, ಈ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ಬಳ್ಳಾರಿ ಉಪ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.



ಇಂದು ಕೋಟಿ ಕಂಠ ಗಾಯನ ಕಾರ್ಯಕ್ರಮ

ಮಡಿಕೇರಿ, ಅ.27– ಜಿಲ್ಲಾಡಳಿತ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ 'ಕೋಟಿ ಕಂಠ ಗಾಯನ' ಪ್ರಧಾನ ಕಾರ್ಯಕ್ರಮವು ಅಕ್ಟೋಬರ್ 28 ರಂದು ಬೆಳಗ್ಗೆ 10.30 ಗಂಟೆಗೆ ನಗರದ ರಾಜಸೀಟಿನಲ್ಲಿ ನಡೆಯಲಿದೆ. ಶಾಸಕರು, ಗಣ್ಯರು, ಅಧಿಕಾರಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಇತರರು ಪಾಲ್ಗೊಳ್ಳಲಿದ್ದಾರೆ.

ಜಿಲ್ಲೆಯ ತಾಲೂಕು ಕೇಂದ್ರಗಳಲ್ಲಿ, ವಿವಿಧ ಶಾಲಾ–ಕಾಲೇಜುಗಳು, ಕಚೇರಿಗಳು, ಸಂಘ ಸಂಸ್ಥೆಗಳು ಹಾಗೂ ಪ್ರಮುಖ ಸ್ಥಳಗಳಲ್ಲಿ ಕೋಟಿ ಕಂಠ ಗಾಯನ ಕಾರ್ಯಕ್ರಮವು ಏಕಕಾಲದಲ್ಲಿ ನಡೆಯಲಿದೆ.

ನ.20ರಂದು ಬಳ್ಳಾರಿಯಲ್ಲಿ ಎಸ್ಟಿ ಸಮಾವೇಶ

ಸಮುದ್ರದ ಅಲೆಯಂತೆ ಬಳ್ಳಾರಿಯಲ್ಲಿ ಸಂಘಟನೆಗೊಳ್ಳಿ

● ಪ್ರಧಾನಿಗೆ ಆಹ್ವಾನ ● 10 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ



ಚಾಮರಾಜನಗರ, ಅ.27– ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಸಮುದಾಯಗಳ ಮೀಸಲಾತಿ ಹೆಚ್ಚಳ ಮಾಡಿದ ಮುಖ್ಯಮಂತ್ರಿ ಹಾಗೂ ಪ್ರಧಾನಿ ಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿ ನ.20 ರಂದು ಬಳ್ಳಾರಿಯಲ್ಲಿ ಬೃಹತ್ ಎಸ್ಟಿ ಸಮಾವೇಶ ಆಯೋಜನೆ ಮಾಡಲಾಗಿದೆ. ಜಿಲ್ಲೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಶ್ರೀರಾಮುಲು ಮನವಿ ಮಾಡಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗುರುವಾರ ನಡೆದ ಬಿಜೆಪಿ ಎಸ್ಟಿ ಸಮಾವೇಶ ಕುರಿತು ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಹಳ ವರ್ಷಗಳಿಂದ ಆಡಳಿತ ನಡೆಸಿದ ಸರ್ಕಾರಗಳಿಗೆ ಈ ಸಮುದಾಯಗಳ ಕಷ್ಟ ಅರ್ಥವಾಗಿಲ್ಲ. ಡಾ. ಬಿ.ಆರ್. ಅಂಬೇಡ್ಕರ್ ನೀಡಿದ್ದ ಮೀಸಲಾತಿ ಪ್ರಮಾಣವನ್ನು ಜನಸಂಖ್ಯೆಗೆ ಅನುಗುಣವಾಗಿ ಏರಿಕೆ ಮಾಡಬೇಕೆಂಬ ಕೂಗು ಬಹಳ ವರ್ಷಗಳಿಂದ ಇತ್ತು. ರಾಜಕೀಯ ಇಚ್ಛಾಶಕ್ತಿ ಕೊರತೆಯಿಂದ ಎಸ್ಟಿ ಸಮುದಾಯಗಳಿಗೆ ಮೀಸಲಾತಿ ಹೆಚ್ಚಳವಾಗಿರಲಿಲ್ಲ. ನಾನು ಚುನಾವಣಾ ಪೂರ್ವದಲ್ಲಿಯೇ ಹೇಳಿದಂತೆ ನಮ್ಮ ಬಿಜೆಪಿ ಸರ್ಕಾರ ಬಂದರೆ ಖಂಡಿತವಾಗಿ ಮೀಸಲಾತಿ ಹೆಚ್ಚಳ ಮಾಡುವುದಾಗಿ ವಾಗ್ದಾನ ಮಾಡಿದ್ದೆ. ಇಂದು ನಮ್ಮ ಸರ್ಕಾರ ಸುಗ್ರೀವಾಜ್ಞೆ ಮಾಡುವ ಮೂಲಕ ನುಡಿದಂತೆ ನಡೆದಿದೆ ಎಂದು ಶ್ರೀರಾಮುಲು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಹಾಗು ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರನ್ನು ಆಹ್ವಾನಿಸಿ ಅವರಿಗೆ ಗೌರವ ಸಲ್ಲಿಸಬೇಕು. ಹಾಗೂ ಕೆಚ್ಚೆದೆಯಿಂದ ಯಾವುದೇ ವಿರೋಧವನ್ನು ಲೆಕ್ಕಿಸದೇ ಎಸ್ಟಿಗೆ ಶೇ.3 ರಷ್ಟು ಇದ್ದ ಮೀಸಲಾತಿಯನ್ನು ಶೇ. 7ಕ್ಕೆ ಏರಿಕೆ, ಎಸ್ಸಿಗೆ ಶೇ.15 ರಿಂದ ಶೇ.17ಕ್ಕೆ ಏರಿಕೆ ಮಾಡಿದೆ. ಇದರಿಂದ ನಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗದಲ್ಲಿ ಮೀಸಲಾತಿ ದೊರಕಿ, ಅವರು ಸ್ವಾಭಿಮಾನದಿಂದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಲಿದೆ. ಇದು ಬಿಜೆಪಿ ಸರ್ಕಾರದ ಕೊಡುಗೆಯಾಗಿದೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಬಂದಾಗಲೆಲ್ಲ ಅನುಕೂಲವಾಗುತ್ತಿದೆ. ಈ ಹಿಂದೆ ಪರಿವಾರ, ತಳವಾರವನ್ನು ಎಸ್ಟಿಗೆ ಸೇರ್ಪಡೆ ಮಾಡಿದೆ. ಇದಕ್ಕೆ ನನ್ನ ಹಾಗೂ ವೇದಿಕೆಯಲ್ಲಿ ಕುಳಿತಿರುವ ಎಲ್ಲ ನಾಯಕರ ಹೋರಾಟ ಫಲ ಇದಾಗಿದೆ. ಅಲ್ಲದೇ ಸರ್ಕಾರ ವಾಲ್ಮೀಕಿ ಜಯಂತಿ ಆಚರಣೆ, ಜಿಲ್ಲಾ ಕೇಂದ್ರದಲ್ಲಿ ಅಂಬೇಡ್ಕರ್ ಭವನಗಳ ಮಾದರಿಯಲ್ಲಿ ವಾಲ್ಮೀಕಿ ಭವನಗಳನ್ನು ನಿರ್ಮಿಸಲು ತಲಾ 5 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ. ಭವನಗಳು ನಿರ್ಮಾಣವಾಗಿ, ಸಮುದಾಯದ ಏಳಿಗೆಗೆ ಬಳಕೆಯಾಗುತ್ತಿವೆ ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ತಿಪ್ಪರಾಜು ಹವಾಲ್ದಾರ್ ಮಾತನಾಡಿ, ಬಳ್ಳಾರಿಯಲ್ಲಿ ನ.20 ರುದು ನಡೆಯುವ ಸಮಾವೇಶವನ್ನು ಯಶಸ್ವಿಗೊಳಿಸುವಂತೆ ಕೋರಿದರು. ಸಭೆಯಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರು, ಮೈಸೂರು ಮಹಾಪೌರ ಶಿವಕುಮಾರ್, ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಜಂಗಲ್ ಲಾಡ್ಜ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಬಿಜೆಪಿ ಜಿಲ್ಲಾಧ್ಯಕ್ಷ ಆರ್. ಸುಂದರ್, ರಾಜ್ಯ ಎಸ್ಟಿ ಮೋರ್ಚಾ ಕಾರ್ಯದರ್ಶಿ ಮಂಜುಳಾ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಶೈಲಜಾ ಮಲ್ಲೇಶ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಡಾ. ಎ.ಆರ್. ಬಾಬು, ಮಲ್ಲೇಶ್ ಅಮ್ಮನಪುರ, ಪ. ಮಲ್ಲೇಶ್, ನಗರಸಭಾ ಅಧ್ಯಕ್ಷೆ ಆಶಾನಟರಾಜು, ಮಾಜಿ ಅಧ್ಯಕ್ಷ ಸುರೇಶನಾಯಕ್, ಸದಸ್ಯ ಶಿವರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಕುಮಾರ್, ಗುಂಡ್ಲುಪೇಟೆ ಪುರಸಭಾ ಅಧ್ಯಕ್ಷ ಗಿರೀಶ್ ಮೊದಲಾದವರು ಇದ್ದರು.

ಅನ್ಯರು ಕಟ್ಟೋ ಗೂಡಲ್ಲಿ ಸಿದ್ದರಾಮಯ್ಯ ರಾಜಕಾರಣ: ಬಿ.ಶ್ರೀರಾಮುಲು

ಚಾಮರಾಜನಗರ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿವರು ಕಟ್ಟೋ ಗೂಡಲ್ಲಿ ರಾಜಕಾರಣ ಮಾಡುತ್ತಿದ್ದಾರೆ ಎಂದು ಸಚಿವ ಬಿ.ಶ್ರೀರಾಮುಲು ಟೀಕಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಬೇರೆಯವರನ್ನು ತುಳಿದು ಸಿದ್ದರಾಮಯ್ಯ ರಾಜಕಾರಣ ಮಾಡುತ್ತಾರೆ, ದೇವೇಗೌಡರನ್ನು, ಪರಮೇಶ್ವರ್ ಅವರನ್ನು ತುಳಿದದ್ದಾಗಿದೆ. ಈಗ ಡಿಕೆಶಿ ಅವರನ್ನು ತುಳಿಯಲು ಹೊರಟಿದ್ದಾರೆ, ಯಾವುದೇ ಶ್ರಮ ಹಾಕದೇ ಅವರಿವರು ಕಟ್ಟೋ ಗೂಡಲ್ಲಿ ಸಿದ್ದರಾಮಯ್ಯ ರಾಜಕಾರಣ ಮಾಡುತ್ತಾರೆ ಎಂದು ವ್ಯಂಗ್ಯವಾಡಿದರು.

ಜಾತಿಗಳ ಹೆಸರು, ಮಹಾನ್ ಪುರುಷರ ಹೆಸರು ಹೇಳಿಕೊಂಡು ರಾಜಕಾರಣ ಮಾಡುತ್ತಾರೆ, ಅವರ ಸರ್ಕಾರ ಇದ್ದಾಗ ಮೀಸಲಾತಿ ಕೊಡಲಿಲ್ಲ ಈಗ ಪ್ರೋತ್ಸಾಹ ಕೊಟ್ಟೆವು, ಸಲಹೆ ಕೊಟ್ಟೆವು ಎನ್ನುತ್ತಾರೆ. ಆದರೆ, ಮೀಸಲಾತಿ ಹೆಚ್ಚು ಮಾಡಬೇಕೆಂಬ ಇಚ್ಛಾಸಕ್ತಿಯೇ ಅವರಲ್ಲಿ ಇರಲಿಲ್ಲ ಎಂದು ಟೀಕಿಸಿದರು. ಈಗಾಗಲೇ ದೇಶದಲ್ಲಿ ಕಾಂಗ್ರೆಸ್‌ನ್ನು ಜನರು ತಿರಸ್ಕರಿಸಿದ್ದು, ಕರ್ನಾಟಕದಲ್ಲೂ ಈ ಬಾರಿ ಎಲ್ಲಾ ಸಮುದಾಯವು ಕಾಂಗ್ರೆಸ್‌ನ್ನು ತಿರಸ್ಕರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಂದು ಕೊಳ್ಳೇಗಾಲ ನಗರಸಭೆಯ 7 ವಾರ್ಡ್‌ಗಳಿಗೆ ಉಪಚುನಾವಣೆ

ತಾಲೂಕು ಆಡಳಿತದಿಂದ ಸಕಲ ಸಿದ್ಧತೆ

ಕೊಳ್ಳೇಗಾಲ, ಅ.27– ಬಹಳ ಕುತೂಹಲ ಕೆರಳಿದ್ದ ಕೊಳ್ಳೇಗಾಲ ನಗರಸಭೆ 7 ವಾರ್ಡ್‌ಗಳ ಉಪಚುನಾವಣೆ ನಾಳೆ (ಅ.28) ಬೆಳಗ್ಗೆ 7ರಿಂದ ಸಂಜೆ 5ರ ತನಕ ನಡೆಯಲಿದೆ.



ಶಾಂತಿಯುತ ಮತ ದಾನಕ್ಕಾಗಿ ತಾಲೂಕು ಆಡಳಿತ ಅಗತ್ಯ ಕ್ರಮ ಕೈಗೊಂಡಿದ್ದು, 7 ವಾರ್ಡ್‌ಗಳಲ್ಲಿ 24 ಮಂದಿ ಕಣದಲ್ಲಿದ್ದಾರೆ.

7ವಾರ್ಡ್‌ಗಳಲ್ಲಿ ಗಂಗಮ್ಮ ವರದರಾಜು, ನಾಸೀರ್ ಷರೀಫ್, ಪವಿತ್ರ, ಪ್ರಕಾಶ್, ರಾಮಕೃಷ್ಣ, ನಾಗಸುಂದ್ರಮ್ಮ, ರಾಮಕೃಷ್ಣ, ನಾಗಮಣಿ ಅವರುಗಳು ಬಿಎಸ್ಪಿಯಿಂದ ಗೆದ್ದು, ಶಾಸಕ ಮಹೇಶ್ ಜೊತೆ ಗುರುತಿಸಿಕೊಂಡು ಬಿಜೆಪಿಗೆ ಮತ ಹಾಕಿದ್ದ ಪರಿಣಾಮ ಸದಸ್ಯತ್ವದಿಂದ ಅನರ್ಹರಾಗಿದ್ದರು.

ಕಾಂಗ್ರೆಸ್, ಬಿಜೆಪಿಯಿಂದ ತಲಾ 7ಮಂದಿ, ಜೆಡಿಎಸ್ 1, ಬಿಎಸ್ಪಿ 3, ಎಸ್‌ಡಿಪಿಐ 1, ಕೆಆರ್‌ಎಸ್ ಪಕ್ಷ 1, ಇತರೆ ಪಕ್ಷೇತರರು ಒಳಗೊಂಡಂತೆ 24 ಮಂದಿ ಅಂತಿಮ ಕಣದಲ್ಲಿದ್ದಾರೆ. ನಾಳೆ ನಡೆಯಲಿರುವ ಮತದಾನ ಪ್ರಕ್ರಿಯೆಯಲ್ಲಿ ಎಂಟುಸಾವಿರ ಒಂಬೈನೂರು ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದು, ಈ ಪೈಕಿ ಪುರುಷರು 4383 ಹಾಗೂ ಮಹಿಳೆಯರು 4516 ಮಂದಿ ಮತದಾನದಲ್ಲಿ ಪಾಲ್ಗೊಳ್ಳಲಿದ್ದಾರೆ.

10 ಮತಗಟ್ಟೆ ಸ್ಥಾಪನೆ: ಚುನಾವಣಾ ಪ್ರಕ್ರಿಯೆ ಶಾಂತಿಯುತವಾಗಿ ನಡೆಯುವಂತೆ ತಹಸಿಲ್ದಾರ್ ಮಂಜುಳಾ ಮನವಿ ಮಾಡಿದ್ದು, ಅಗತ್ಯ ಕ್ರಮಕ್ಕಾಗಿ 10 ಮತಗಟ್ಟೆಗಳನ್ನು ಸ್ಥಾಪಿಸಿದ್ದಾರೆ. 7ವಾರ್ಡ್‌ಗಳಲ್ಲಿ ಸೂಕ್ತ ರಕ್ಷಣೆ ಹಾಗೂ ಶಾಂತಿಯುತ ಮತದಾನಕ್ಕಾಗಿ ಡಿವೈಎಸ್ಪಿ 1, ಸಿಪಿಐ 4 ಮಂದಿ, ಪಿಎಸ್‌ಐ 6, ಎಎಸ್‌ಐ 8, ಮುಖ್ಯಪೇದೆ ಹಾಗೂ ಪೇದೆಗಳನ್ನು ಸೇರಿ 65 ಮಂದಿ ಹಾಗೂ ಮಹಿಳಾ ಪೇದೆಗಳು 10ಮಂದಿ, ಡಿಆರ್ ವಾಹನವನ್ನು ನಿಯೋಜಿಸಿ ಕ್ರಮ ವಹಿಸಲಾಗಿದೆ. ಚುನಾವಣಾಧಿಕಾರಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಸಹಾಯಕ ಚುನಾವಣಾಧಿಕಾರಿ ಸಮಾಜ ಕಲ್ಯಾಣಾಧಿಕಾರಿ ಗಂಗಾಧರ್ ಕಾರ್ಯನಿರ್ವಹಿಸಲಿದ್ದಾರೆ.

ಬೈಕ್ ವ್ಹೀಲಿಂಗ್ ಮಾಡುತ್ತಿದ್ದ 6 ಮಂದಿ ಬಂಧನ

ಚಾಮರಾಜನಗರ, ಅ.27– ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಬೈಕ್ ವ್ಹೀಲಿಂಗ್ ಮಾಡುತ್ತಿದ್ದ ಆರು ಮಂದಿ ಯವಕರನ್ನು ಹಾಗೂ ಮೂರು ಬೈಕ್‌ಗಳನ್ನು ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಅ.25 ರಂದು ಮೂರು ಮೋಟಾರ್ ಬೈಕ್‌ಗಳಲ್ಲಿ ಆರು ಜನ ವ್ಹೀಲಿಂಗ್ ಮಾಡುತ್ತಿದ್ದರು. ವಿಷಯ ತಿಳಿದ ಪೊಲೀಸರು ಆಗಮಿಸಿ, ವ್ಹೀಲಿಂಗ್‌ನಲ್ಲಿ ತೊಡಗಿದ್ದ ಆರು ಮಂದಿ ಯವಕರನ್ನು ವಶಕ್ಕೆ ಪಡೆದರು. ಇದಲ್ಲದೇ ವ್ಹೀಲಿಂಗ್‌ಗೆ ಬಳಸಿದ ಮೂರು ಬೈಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್ ತಿಳಿಸಿದ್ದಾರೆ.

ಸಾರ್ವಜನಿಕ ರಸ್ತೆಯಲ್ಲಿ ಮೋಟರ್ ಬೈಕ್ ವ್ಹೀಲಿಂಗ್ ಮಾಡುವುದು ಹಾಗೂ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ವಿರುದ್ಧ ಸೂಕ್ತ ನಿರ್ದಾಕ್ಷಿಣ್ಯ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದ್ದಾರೆ.

ಹುಲಿ ಉಗುರು ಸಂಗ್ರಹ: ಯುವಕನ ಬಂಧನ

ಚಾಮರಾಜನಗರ, ಅ.27–ಮನೆಯಲ್ಲಿ ಹುಲಿ ಉಗುರು ಸಂಗ್ರಹಿಸುತ್ತಿದ್ದ ಯುವಕನನ್ನು ಪೊಲೀಸ್ ಅರಣ್ಯ ಸಂಚಾರಿ ದಳದ ಅಧಿಕಾರಿಗಳು ಬಂಧಿಸಿದ್ದಾರೆ. ತಾಲೂಕಿನ ಹರದನಹಳ್ಳಿ ಗ್ರಾಮದ ಮಹೇಂದ್ರ(26) ಬಂಧಿತನಾಗಿದ್ದು, ಪೆಟ್ರೋಲ್‌ಬಂಕ್‌ವೊಂದರಲ್ಲಿ ಕೆಲಸ ಮಾಡುತ್ತಿರುವ ಈತ ಹುಲಿ ಉಗುರು ಮಾರಾಟಕ್ಕೆ ಪ್ರಯತ್ನಿಸುತ್ತಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಆತನ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು, ಆರೋಪಿಯನ್ನು ಬಂಧಿಸಿ 4 ಹುಲಿ ಉಗುರು ವಶಪಡಿಸಿಕೊಂಡಿದ್ದಾರೆ.



ಗುಮಟಾಪುರದಲ್ಲಿ ಸಂಭ್ರಮದ ಗೊರೆಹಬ್ಬ

ಸಗಣಿ ಎರಚಿ ಸಂಭ್ರಮಿಸಿದ ಯುವಕರು



ಚಾಮರಾಜನಗರ, ಅ.27– ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಇರುವ ತಮಿಳುನಾಡಿನ ತಾಳವಾಡಿ ತಾಲೂಕಿನ ಗುಮಟಾಪುರ ಗ್ರಾಮದಲ್ಲಿ ಪ್ರತಿ ವರ್ಷ ಆಚರಿಸುವ ಪರಸ್ಪರ ಸಗಣಿ ಎರಚಿ ಸಂಭ್ರಮಿಸುವ 'ಗೊರೆಹಬ್ಬ' ಗುರುವಾರ ಸಡಗರ, ಸಂಭ್ರಮದಿಂದ ನಡೆಯಿತು.

ಪ್ರತಿ ವರ್ಷ ದೀಪಾವಳಿಯ ಬಲಿಪಾಡ್ಯಮಿಯ ಮೂರನೇ ದಿನ ಗುಮಟಾಪುರ ಗ್ರಾಮದಲ್ಲಿ ಗೊರೆಹಬ್ಬವನ್ನು ಹಲವಾರು ವರ್ಷಗಳಿಂದ ಆಚರಿಸಲಾಗುತ್ತಿದೆ. ಅದರಂತೆ ಈ ವರ್ಷವೂ ಸಹ ಹಬ್ಬವನ್ನು ಆಚರಿಸಲಾಯಿತು. ಕಳೆದ ಎರಡು–ಮೂರು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ಗೊರೆಹಬ್ಬದಲ್ಲಿ ಹೆಚ್ಚಿನ ಜನರು ಕಂಡು ಬಂದಿರಲಿಲ್ಲ. ಆದರೆ ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಜನವರು ಪಾಲ್ಗೊಂಡು ಗೊರೆಹಬ್ಬವನ್ನು ಕಣ್ತುಂಬಿಕೊಂಡರು.

ಗ್ರಾಮದ ಯುವಕರು ಯಾವುದೇ ಬೇಧ–ಭಾವ ಇಲ್ಲದೇ ಸಗಣಿ ರಾಶಿಯ ಗುಡ್ಡೆಯಲ್ಲಿ ಉರುಳಾಡಿ, ಸಗಣಿಯನ್ನು ಎರಚಾಡಿಕೊಂಡು ಸಂಭ್ರಮಿಸಿದರು. ಈ ಮೂಲಕ ಸೌಹಾರ್ದತೆ ಮೆರೆದ ಯುವಕರ ಬಗ್ಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಯಿತು.

ಗ್ರಾಮದ ಮನೆ ಮನೆಗಳಿಂದ ಸಗಣಿಯನ್ನು ಸಂಗ್ರಹಿಸಿಕೊಂಡು ಗ್ರಾಮದ ಮಧ್ಯ ಭಾಗದಲ್ಲಿರುವ ಬೀರಪ್ಪ ದೇವರ ಗುಡಿಯ ಆವರಣದಲ್ಲಿ ರಾಶಿ ಮಾಡಲಾಯಿತು. ಗ್ರಾಮದ ಮಕ್ಕಳು ಮನೆ ಮನೆಗಳಿಂದ ಎಣ್ಣೆಗಳನ್ನು ಸಂಗ್ರಹಿಸಿ ಗ್ರಾಮ ದೇವರಿಗೆ ಪೂಜೆ ಸಲ್ಲಿಸಿದರು. ನಂತರ ಗ್ರಾಮದ ಯುವಕರು ಕೆರೆಯ ಬಳಿಗೆ ತೆರಳಿ ಸ್ನಾನ ಮಾಡಿದರು. ಬಳಿಕ ಇಬ್ಬರು ಯುವಕರಿಗೆ ಚಾಡಿಕೋರರು ಎಂದು ಹೆಸರಿಟ್ಟು ಅವರಿಗೆ ಹುಲ್ಲಿನ ಗಡ್ಡ, ಮೀಸೆ ಹಚ್ಚಿ ಕತ್ತೆ ಮೇಲೆ ಕೂರಿಸಲಾಯಿತು. ನಂತರ ಇವರಿಬ್ಬರನ್ನು ಬೀರೇಶ್ವರನ ಗುಡಿಯವರೆಗೂ ಅಶ್ಲೀಲ ಪದಗಳಿಂದ ನಿಂದಿಸಲಾಯಿತು. ಹುಲ್ಲಿನ ಮೀಸೆ ಮತ್ತು ಗಡ್ಡವನ್ನು ಸಗಣಿ ರಾಶಿಯಲ್ಲಿ ನೆಟ್ಟು, ಬೀರೇಶ್ವರನಿಗೆ ಪೂಜೆ ಸಲ್ಲಿಸಿದ ಬಳಿಕ ದೇವಸ್ಥಾನದ ಪ್ರಧಾನ ಅರ್ಚಕರು ಸಗಣಿ ರಾಶಿಗೆ ತೀರ್ಥ ಇಟ್ಟರು. ಬಳಿಕ ಯುವಕರು ಬರಿ ಮೈಯಲ್ಲಿ ಸಗಣಿ ಎರಚುವುದರಲ್ಲಿ ತೊಡಗಿದರು. ಇದನ್ನು ನೆರೆದಿದ್ದವರು ನೋಡಿ ಖುಷಿ ಪಟ್ಟರು. ಸ್ವಲ್ಪ ಸಮಯದ ನಂತರ ಗ್ರಾಮದ ಹೊರವಲಯದ ಕೊಂಡಿಗೆ ಕಾಕನ ಗುಡ್ಡದಲ್ಲಿ ಗೊಂಬೆಯನ್ನು ನಿರ್ಮಿಸಿ ಸುಡಲಾಯಿತು. ನಂತರ ಸಗಣಿ ರಾಶಿಯಲ್ಲಿ ಬಿದ್ದು ಯುವಕರು ಕೆರೆಯಲ್ಲಿ ಸ್ನಾನ ಮಾಡಿದರು. ಇಲ್ಲಿಗೆ ವಿಶಿಷ್ಟ ಗೊರೆ ಹಬ್ಬ ಮುಗಿಯಿತು.

ಮೈಸೂರು ಮಿತ್ರ

ನ.1ರಂದೇ ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಘೋಷಣೆ

ಬೆಂಗಳೂರು, ಅ.27(ಕೆಎಂಶಿ)– ನವೆಂಬರ್ ಒಂದ ರಂದೇ ಮುಂದಿನ ವಿಧಾನಸಭೆ ಚುನಾವಣೆ ಕಣಕ್ಕಿಳಿಸಲಿ ರುವ ಅಭ್ಯರ್ಥಿಗಳ ಮೊದಲ ಪಟ್ಟಿ ಯನ್ನು ಬಿಡುಗಡೆ ಮಾಡುವುದಾಗಿ ಜೆಡಿಎಸ್ ಹಿರಿಯ ನಾಯಕ ಹಾಗೂ ಮಾಜಿ ಸಿಎಂ ಹೆಚ್.ಡಿ. ಕುಮಾರ ಸ್ವಾಮಿ ಪ್ರಕಟಿಸಿದ್ದಾರೆ. ಅಂದು ಕೋಲಾರ ಜಿಲ್ಲೆಯ ಮುಳಬಾಗಿಲು ಕ್ಷೇತ್ರದ ಕುರುಡುಮಲೆ ಗಣಪತಿ ದೇವಾಲಯ ದಲ್ಲಿ ಪೂಜೆ ಸಲ್ಲಿಸಿ ಪಂಚರತ್ನ ರಥ ಯಾತ್ರೆಗೆ ಚಾಲನೆ ನೀಡಲಾಗುವುದು ಎಂದರು.

ಜನವರಿಯಲ್ಲಿ ಮೈಸೂರಲ್ಲಿ ರಥಯಾತ್ರೆ

ಹೊಸ ವರ್ಷದ ಜನವರಿ ತಿಂಗಳಲ್ಲಿ ಮೈಸೂರಿನ ಚಾಮುಂಡೇಶ್ವರಿ ಸನ್ನಿಧಾನದಲ್ಲಿ ಪೂಜೆ ನಡೆಸಿ ಆ ಭಾಗದಲ್ಲಿ ಪಂಚರತ್ನ ರಥಯಾತ್ರೆ ಆರಂಭ ಮಾಡಲಾಗುವುದು. ಮುಖ್ಯವಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ದೊಡ್ಡ ಸಮಾವೇಶ ಮಾಡಬೇಕೆ ಎನ್ನುವ ನಿರ್ಧಾರಕ್ಕೆ ಬಂದಿದ್ದೇವೆ. ಜನವರಿ ನಂತರ ಶಾಸಕ ಜಿ.ಟಿ.ದೇವೇಗೌಡರು ಪಕ್ಷದ ಸಂಘಟನೆಯಲ್ಲಿ ತೊಡಗಿಸಿ ಕೊಳ್ಳುತ್ತಿದ್ದಾರೆ.
–ಹೆಚ್.ಡಿ.ಕುಮಾರಸ್ವಾಮಿ

ಒಮಿಕ್ರಾನ್‌ನಿಂದ ರಾಜ್ಯದಲ್ಲಿ ಯಾವುದೇ ಆತಂಕವಿಲ್ಲ

ಗಡಿಗಳಲ್ಲಿ ಮುನ್ನೆಚ್ಚರಿಕೆ ವಹಿಸಲಾಗಿದೆ: ಆರೋಗ್ಯ ಸಚಿವ ಡಾ.ಕೆ.ಸುಧಾಕರ್

ಮೈಸೂರು,ಅ.27(ಆರ್‌ಕೆ)– ಒಮಿಕ್ರಾನ್ ರೂಪಾಂತರ ಹೊಸ ತಳಿ ಪತ್ತೆಯಾಗಿರುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಒಮಿಕ್ರಾನ್ ರೂಪಾಂತರಿ ಹೊಸ ತಳಿ ಬಗ್ಗೆ ರಾಜ್ಯದಲ್ಲಿ ಯಾವುದೇ ಆತಂಕವಿಲ್ಲ, ಅಗತ್ಯ ಮುನ್ನೆಚ್ಚರಿಕೆ ವಹಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಮಹಾರಾಷ್ಟ್ರದಲ್ಲಿ ಒಂದು ಪ್ರಕರಣ ಪತ್ತೆಯಾಗಿದ್ದು, ಅಮೆರಿಕಾದಲ್ಲಿ ಈ ಪ್ರಕರಣ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಗಡಿ ಜಿಲ್ಲೆಗಳಿಗೆ ಮಾರ್ಗ ಸೂಚಿ ನೀಡಲಾಗಿದೆ. ಕಟ್ಟೆಚ್ಚರ ವಹಿಸುವಂತೆ ಆಯಾಯ ಜಿಲ್ಲಾಧಿ ಕಾರಿಗಳಿಗೆ ಸೂಚನೆ ನೀಡಲಾ ಗಿದೆ. ಮಾಸ್ಕ್ ಕಡ್ಡಾಯದ ಬಗ್ಗೆ ಇನ್ನೂ ಯಾವುದೇ ನಿರ್ಧಾರ ಆಗಿಲ್ಲ. ಆದಷ್ಟು ಬೇಗ ಜನರು 3ನೇ ಡೋಸ್ ಲಸಿಕೆ ಪಡೆದು ಕೊಳ್ಳುವುದು ಒಳ್ಳೆಯದು ಎಂದು ಜನರಲ್ಲಿ ಮನವಿ ಮಾಡಿದರು.

ಸಿದ್ದು-ಡಿಕೆಶಿ ಉತ್ತರ ದಕ್ಷಿಣ: ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಯಾವಾಗಲೂ ಉತ್ತರ ದಕ್ಷಿಣದ ರೀತಿ. ಒಬ್ಬರು ದಕ್ಷಿಣ, ಮತ್ತೊಬ್ಬರು ಉತ್ತರಕ್ಕೆ ಹೊರಟಿದ್ದಾರೆ. ಇದರಲ್ಲಿ ಅಚ್ಚರಿ ಏನೂ ಇಲ್ಲ. ಯಾವಾಗಲೂ ನಾನೊಂದು ತೀರ, ನೀನೊಂದು ತೀರ ಎಂಬಂತಿದ್ದಾರೆ. ಚುನಾವಣೆ ವೇಳೆ ಯಾತ್ರೆಗಳು ಸಾಮಾನ್ಯ. ನಾಲ್ಕೂವರೆ ವರ್ಷದಿಂದ ಇವರಿಗೆ ಯಾವುದೇ ಸಮಸ್ಯೆ ಕಾಣಲಿಲ್ಲ. ಈಗ ಚುನಾವಣೆ ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಬಂದಿದ್ದಾರೆ. ಜನರು ಎಲ್ಲರಿಗಿಂತ ಬುದ್ಧಿವಂತರಿದ್ದಾರೆ. ಇವರ ಬ್ಲಫ್ ಜನರಿಗೆ ಅರ್ಥವಾಗಲಿದೆ ಎಂದು ಹೇಳಿದರು. ತಮ್ಮ ವಿರುದ್ಧ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏಕವಚನದಲ್ಲಿ ವಾಗ್ದಾಳಿ ನಡೆಸಿದ ವಿಚಾರ ಕುರಿತು ಮಾತನಾ ಡಿದ ಅವರು, ಸಿದ್ದರಾಮಯ್ಯ ಎಲ್ಲ ವನ್ನೂ ಕಲಿತಿದ್ದಾರೆ. ಆದರೆ ಬಹುವಚನ ಮಾತ್ರ ಕಲಿ ತಿಲ್ಲ. ಏಕವಚನದಲ್ಲಿ ಮಾತನಾಡುವುದರಲ್ಲಿ ಯಾವುದೇ ವಿಶೇಷತೆ ಇಲ್ಲ ಎಂದರು. ಕೆಲ ಜಿಲ್ಲೆಗಳಲ್ಲಿ ಜೆಡಿಎಸ್–ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಎದುರಿಸುತ್ತಿದ್ದೇನೆ. ಹಾಗಾಗಿ ನನ್ನನ್ನು ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಹೇಳಿದರು.

ಬಿಜೆಪಿಗೆ ಬಂದಿರುವ ಯಾರೂ ಪಕ್ಷ ಬಿಡುವುದಿಲ್ಲ: ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದಿರುವ ಯಾರೂ ವಾಪಸ್ಸು ಹೋಗುವುದಿಲ್ಲ. ಎಚ್.ವಿಶ್ವನಾಥ್ ಸಹ ಹೋಗುವುದಿಲ್ಲ ಎಂದು ಭಾವಿಸಿ ದ್ದೇನೆ. ಆದರೆ ಬಿಜೆಪಿ ಸೇರ್ಪಡೆ ವೇಳೆ ಎಚ್.ವಿಶ್ವನಾಥ್ ನಮ್ಮ ಜೊತೆ ಇರಲಿಲ್ಲ ಎಂದು ಸುಧಾಕರ್ ಹೇಳಿದರು. ಆರೋಗ್ಯ ಇಲಾಖೆಯಲ್ಲಿ ಖಾಲಿ ಬಿದ್ದಿರುವ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡಿಕೊಳ್ಳಲಾಗುವುದು. ಕೆಲ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುವುದು. ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಾಯಕಲ್ಪ ನೀಡಲಾಗುತ್ತಿದೆ ಎಂದರು.

ಮೂರನೇ ಪುಟದಿಂದ

ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಿ

ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಕೆಲ ಜಿಲ್ಲೆಗಳು ವಿಫಲವಾಗಿವೆ. ಇಲಾಖೆ ಕಾರ್ಯಕ್ರಮಗಳ ಬಗ್ಗೆ ಯಾವ ಕಾರಣದಿಂದಲೂ ನಿರುತ್ಸಾಹ, ನಿರ್ಲಕ್ಷ್ಯ ತೋರಬಾರದು ಎಂದು ಕಿವಿಮಾತು ಹೇಳಿದರು.

ಕಾರ್ಯವೈಖರಿ ಚುರುಕಾಗಲಿ: ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಸೇವೆಯಲ್ಲಿ ಮಹಾರಾಷ್ಟ್ರ, ಆಂಧ್ರ, ಕೇರಳ, ತಮಿಳುನಾಡು ಮುಂಚೂಣಿಯಲ್ಲಿವೆ. ನಮ್ಮ ರಾಜ್ಯದಲ್ಲೂ ಇಲಾಖೆ ಕಾರ್ಯ ವೈಖರಿ ಚುರುಕಾಗಬೇಕು. ನಿರೀಕ್ಷಿತ ಗುರಿ ಸಾಧನೆಗೆ ಬದ್ಧತೆಯಿಂದ ಕೆಲಸ ಮಾಡಬೇಕು. ತಾಂತ್ರಿಕ ಕಾರಣಗಳನ್ನು ನೆಪ ಮಾಡಬಾರದು. ಚಾಮರಾಜನಗರದಲ್ಲಿ ನೋಂದಣಿಯಾಗುವ ಎಲ್ಲಾ ಗರ್ಭಿಣಿಯರೂ ಆರೋಗ್ಯ ತಪಾಸಣೆಗೆ ಒಳಗಾಗುತ್ತಿಲ್ಲ. ತಾಯಿ ಹಾಗೂ ಮಕ್ಕಳ ಸಾವಿನ ಅಂಕಿಅಂಶದಲ್ಲೂ ವ್ಯತ್ಯಾಸವಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲೂ ಪ್ರಗತಿಯಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್, ಆಯುಕ್ತ ಡಿ.ರಂದೀಪ್, ಎನ್‌ಹೆಚ್‌ಎಂ ಅಭಿಯಾನ ನಿರ್ದೇಶಕಿ ಡಾ.ಅರುಂಧತಿ ಚಂದ್ರಶೇಖರ್, ನಿರ್ದೇಶಕಿ ಡಾ.ಇಂದುಮತಿ, ವಿಭಾಗೀಯ ಸಹ ನಿರ್ದೇಶಕಿ ಡಾ.ರಾಜೇಶ್ವರಿ ದೇವಿ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕೆಂಪೇಗೌಡ ಕೌಶಲ್ಯ ವಿಶ್ವವಿದ್ಯಾಲಯ ಸ್ಥಾಪನೆ

ಹೊಡೆದಿಲ್ಲ ಎಂದು ಬಿಜೆಪಿ, ಕಾಂಗ್ರೆಸ್‌ಗೆ ಟಾಂಗ್ ನೀಡಿದರು. ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ, ಅದರಲ್ಲೂ ಭವಿಷ್ಯಕ್ಕೆ ದಿಕ್ಕು ತೋರಿಸುವ ಶಿಕ್ಷಣ ಕೊಡಬೇಕೆಂಬ ಉದ್ದೇಶ ಜೆಡಿಎಸ್ ಹೊಂದಿದೆ. ಈ ಉದ್ದೇಶ ಸಾಕಾರಕ್ಕಾಗಿ ನಾಡಪ್ರಭು ಕೆಂಪೇಗೌಡರ ಹೆಸರಲ್ಲಿ ಮಾಗಡಿಯಲ್ಲಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡಲಾಗುವುದು. ಅದರಿಂದ ಎಲ್ಲರಿಗೂ ವೃತ್ತಿಪರ ಶಿಕ್ಷಣ ಸಿಗುವಂತಾಗಬೇಕು. ಕಸುಬುಗಳ ಆಧಾರದಲ್ಲಿ ಹಾಗೂ ಸಮಾಜದಲ್ಲಿ ವೃತ್ತಿಪರ ಕೌಶಲ್ಯಕ್ಕೆ ಹೆಚ್ಚು ಒತ್ತು ನೀಡಿ ಬೆಳೆಸಿದವರು ಕೆಂಪೇಗೌಡರು. ಹೀಗಾಗಿ ಅವರ ಹೆಸರಿನಲ್ಲಿಯೇ ವಿಶ್ವವಿದ್ಯಾಲಯ ಸ್ಥಾಪಿಸಲಾಗುವುದು ಎಂದು ತಿಳಿಸಿದರು.

ರೈತ ಬಂಧು: ರೈತರಿಗಾಗಿಯೂ ಕಾರ್ಯಕ್ರಮ ರೂಪಿಸಿದ್ದು, ಈ ವರ್ಷ ಭತ್ತದ ಬೆಳೆ ಕಡಿಮೆ ಉತ್ಪಾದನೆ ಆಗಿದೆ. ರೈತರಿಗೆ ಬಿತ್ತನೆಗೆ ಸರ್ಕಾರದಿಂದಲೇ ಸಹಾಯ ಆಗಬೇಕು. ರೈತ ಚೈತನ್ಯ ಕಾರ್ಯಕ್ರಮದಲ್ಲಿ ಅವರಿಗೆ ಅನುಕೂಲ ಆಗುವಂತೆ ಮಾಡಲಾಗಿದೆ. ರೈತ ಬಂಧು ಕಾರ್ಯಕ್ರಮ ತೆಲಂಗಾಣದಲ್ಲಿ ಇದೆ. ಅದೇ ರೀತಿ ನಮ್ಮ ರಾಜ್ಯದಲ್ಲೂ ಜೆಡಿಎಸ್ ಅಧಿಕಾರಕ್ಕೆ ಬಂದರೆ ಮಾಡುತ್ತೇನೆ ಎಂದು ಹೇಳಿದರು.

ಎಲ್ಲರಿಗೂ ಸಮಾನ ಶಿಕ್ಷಣ: ಕಾಂಗ್ರೆಸ್‌ನವರಿಂದ ಜನರ ಯಾವ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಆಗುವುದಿಲ್ಲ. ಇಂದು ಗವಿಗಂಗಾಧರೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಲಾಗಿದೆ. ಪವಿತ್ರ ದಿನ ಅಂತ ಇಂದು 'ಪಂಚರತ್ನ ರಥಯಾತ್ರೆ'ಗೆ ಚಾಲನೆ ಕೊಡಲಾಗಿದೆ. ಪಂಚರತ್ನ ಕಾರ್ಯಕ್ರಮ ಮಹತ್ವದ ಕಾರ್ಯಕ್ರಮ ಎಂದರು.

ಬಡವ, ಶ್ರೀಮಂತ ಅಂತ ತಾರತಮ್ಯ ಎನ್ನದೆ ಎಲ್ಲರಿಗೂ ಅತ್ಯಾಧುನಿಕ ಶಿಕ್ಷಣ ದೊರೆಯಬೇಕು. ಗ್ರಾಮ ಪಂಚಾಯತಿ, ಪ್ರತಿ ವಾರ್ಡ್‌ನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳಂತೆ ಸರ್ಕಾರ ಗುಣಮಟ್ಟದ ಶಿಕ್ಷಣ ಕೊಡಬೇಕು. ಉಚಿತ ಶಿಕ್ಷಣ ನೀಡುವ ಕಾರ್ಯಕ್ರಮ ಇದಾಗಿದೆ. ಕೊರೊನಾ ಸಮಯದಲ್ಲಿ ಶಾಲೆ ನಡೆಯದೇ ಇದ್ದರೂ ಖಾಸಗಿ ಶಿಕ್ಷಣ ಸಂಸ್ಥೆಯವರು ಫೀಸ್ ಕಟ್ಟಲೇಬೇಕು ಅಂತ ಒತ್ತಡ ಹಾಕಿದ್ದರು. ಇದನ್ನು ಗಮನದಲ್ಲಿಟ್ಟು ಕೊಂಡು ಈ ರೀತಿ ಕಾರ್ಯಕ್ರಮ ರೂಪಿಸಲಾಗಿದೆ. ಅತ್ಯುತ್ತಮ ಶಿಕ್ಷಣ ನೀಡಲು ಈ ಯೋಜನೆ ರೂಪಿಸಲಾಗಿದೆ. ಮಕ್ಕಳಿಗೆ ಇಂಗ್ಲಿಷ್ ಕೂಡ ಅನಿವಾರ್ಯ ಎಂದು ಹೇಳಿದರು.

6000 ಗ್ರಾ.ಪಂ. ವ್ಯಾಪ್ತಿಯಲ್ಲಿ ವ್ಯವಸ್ಥಿತ ಆಸ್ಪತ್ರೆ: ಆರೋಗ್ಯದ ವಿಚಾರವಾಗಿ ಎಲ್ಲರಿಗೂ ಉಚಿತ ಚಿಕಿತ್ಸೆ ಸಿಗಬೇಕು. ಕ್ಯಾನ್ಸರ್, ಡಯಾಲಿಸಿಸ್‌ಗೆ ಲಕ್ಷಾಂತರ ಹಣ ಕಟ್ಟಬೇಕು. ಕೊರೊನಾ ಸಮಯದಲ್ಲಿ ಎಷ್ಟು ಸಾವು ನೋವು ಆಗಿರೋದನ್ನು ನೋಡಿದ್ದೇವೆ. 6000 ಗ್ರಾಮ ಪಂಚಾಯತಿಯಲ್ಲಿ ದೊಡ್ಡ ಆಸ್ಪತ್ರೆ ಕಟ್ಟಬೇಕು. ಪ್ರತಿ ಆಸ್ಪತ್ರೆಯಲ್ಲಿ ವೈದ್ಯರು, ಲ್ಯಾಬ್ ಹೀಗೆ ಎಲ್ಲವೂ ಇರಬೇಕು. ಖಾಸಗಿ ಆಸ್ಪತ್ರೆಯಲ್ಲಿ ಹೊರಗಡೆ ಹೋಗಿ ಎಕ್ಸರೇ ತೆಗೆಸಿ ಅಂತಾರೆ. ಇದು ಬಡವರಿಗೆ ಸಾಧ್ಯವಿಲ್ಲ. ಆರೋಗ್ಯದ ವಿಮೆ ಸರ್ಕಾರವೇ ಮಾಡಬೇಕು. ಗ್ರಾಮ ಮಟ್ಟದಲ್ಲಿ ಹೆರಿಗೆಗೆ ತಕ್ಷಣಕ್ಕೆ ಬೇಕಾದ ಸೌಲಭ್ಯ ದೊರೆಯಬೇಕು ಎಂದು ಭವಿಷ್ಯದ ಯೋಜನೆಗಳ ಕುರಿತು ತಿಳಿಸಿದರು.

ಬಹುತೇಕ ಕೋಲಾರದಿಂದ ಸ್ಪರ್ಧೆ

ವಿಧಾನಸಭಾ ಚುನಾವಣೆ ಯಲ್ಲಿ ಕಾಂಗ್ರೆಸ್ ಪಕ್ಷ ಗೆದ್ದು ಅಧಿಕಾರ ಹಿಡಿದರೆ ಸಿದ್ದ ರಾಮಯ್ಯ ಮುಖ್ಯಮಂತ್ರಿಯಾಗುವುದು ಖಚಿತ ಎಂಬ ಮಾತುಗಳು ದಟ್ಟವಾಗತೊಡಗಿದವು.

ಇಂತಹ ಮಾತುಗಳ ಬೆನ್ನಲ್ಲೇ ಸಿದ್ದರಾಮಯ್ಯ ಅವರನ್ನು ಚುನಾವಣಾ ಅಖಾಡದಲ್ಲಿ ಸೋಲಿ ಸಲು ವಿರೋಧಿಗಳು ಒಗ್ಗೂಡುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರತೊಡಗಿದವು. ಈ ಹಿನ್ನೆಲೆಯಲ್ಲಿ ಯಾವ ಕ್ಷೇತ್ರದಿಂದ ಸ್ಪರ್ಧಿಸಿದರೆ ತಾವು ಸುರಕ್ಷಿತ ಎಂಬ ಯೋಚನೆ ಸಿದ್ದರಾಮಯ್ಯ ಅವರಲ್ಲೇ ಮೊಳೆತಿತ್ತು. ಉನ್ನತ ಮೂಲಗಳ ಪ್ರಕಾರ, ನವೆಂಬರ್ ಎರಡನೇ ವಾರ ಸಿದ್ದರಾಮಯ್ಯ ಅವರು ಕೋಲಾರ ಜಿಲ್ಲೆಯ ವೇಮಗಲ್‌ನಿಂದ ತಮ್ಮ ಚುನಾವಣಾ ಪ್ರಚಾರ ಆರಂಭಿಸಲಿದ್ದಾರೆ. ಕೋಲಾರ ಜಿಲ್ಲೆ ವೇಮಗಲ್‌ನ ಸೀತಾ ಬೆಟ್ಟದಲ್ಲಿರುವ ಕಾಲ ಭೈರವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ನಂತರ ಸಿದ್ದು ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ.

ಕಬ್ಬಿಗೆ ವೈಜ್ಞಾನಿಕ ದರ ನಿಗದಿಗೆ ಆಗ್ರಹಿಸಿ ಕಬ್ಬು ಬೆಳೆಗಾರರಿಂದ

ಮೈಸೂರು–ನಂಜನಗೂಡು ಹೆದ್ದಾರಿಯಲ್ಲಿ ಪ್ರತಿಭಟನೆ

● ವಾಹನ ಸಂಚಾರಕ್ಕೆ ತಡೆ ● ರಸ್ತೆಯಲ್ಲಿ ಉರುಳುಸೇವೆ ● ಬೆಳಗ್ಗೆ 11ರಿಂದ ಮಧ್ಯಾಹ್ನ 2ಗಂಟೆಯವರೆಗೆ ಪರ್ಯಾಯ ಮಾರ್ಗದಲ್ಲಿ ಸಂಚರಿಸಿದ ವಾಹನಗಳು

ಮೈಸೂರು,ಅ.27(ಎಂಟಿವೈ)– ಕಬ್ಬಿಗೆ ವೈಜ್ಞಾನಿಕ ದರ ನಿಗದಿ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ, ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಗುರುವಾರ ಮೈಸೂರು–ನಂಜನಗೂಡು ಮುಖ್ಯ ರಸ್ತೆಯಲ್ಲಿ ವಾಹನ ತಡೆದು, ಉರುಳು ಸೇವೆ ಮಾಡುವ ಮೂಲಕ ಪ್ರತಿಭಟಿಸಿದರು.

ಎಪಿಎಂಸಿ ಯಾರ್ಡ್ ಬಳಿ ಇಂದು ಬೆಳಗ್ಗೆ ಕಬ್ಬು ಬೆಳೆಗಾರರ ಸಂಘ ಹಾಗೂ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ರಸ್ತೆ ತಡೆ ನಡೆಸಿ, ಉರುಳು ಸೇವೆ ಮೂಲಕ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಕೂಡಲೇ ಕಬ್ಬಿಗೆ ವೈಜ್ಞಾನಿಕ ದರ ನಿಗದಿ ಮಾಡುವಂತೆ ಆಗ್ರಹಿಸಿದರು. ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೂ ರಸ್ತೆ ತಡೆ ನಡೆಸಿ ಸರ್ಕಾರದ ವಿರುದ್ಧ ಕಿಡಿಕಾರಿದರು.

ಪ್ರತಿಭಟನೆಯಿಂದಾಗಿ ಮೈಸೂರು–ನಂಜನಗೂಡು ಮಾರ್ಗವಾಗಿ ಸಂಚರಿಸುವ ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗ ಸೂಚಿಸಲಾಗಿತ್ತು. ನಂಜನಗೂಡು ಹದಿನಾರು, ಆಯರಹಳ್ಳಿ ಹಾಗೂ ಹುಲ್ಲಹಳ್ಳಿ ಮಾರ್ಗದಲ್ಲಿ ಸಂಚರಿಸಲು ವ್ಯವಸ್ಥೆ ಮಾಡಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಈ ವೇಳೆ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ರೈತರು, ಕಬ್ಬು ಬೆಳೆಗಾರರು ಸಂಕಷ್ಟಕ್ಕೀಡಾಗಿದ್ದರೂ, ಸರ್ಕಾರಗಳು ರೈತರ ಹಿತ ಕಾಯುವ ಯಾವುದೇ ಯೋಜನೆ ರೂಪಿಸಿಲ್ಲ. ರೈತರ ಬೆಂಬಲದಿಂದ ಚುನಾವಣೆಯಲ್ಲಿ ಗೆದ್ದ ಬಳಿಕ ಜನಪ್ರತಿನಿಧಿಗಳು, ಸಚಿವರು ಸಕ್ಕರೆ ಕಾರ್ಖಾನೆಯ ಮಾಲೀಕರು, ಕೈಗಾರಿಕೋದ್ಯಮಿಗಳು, ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಭೂ ಮಾಫಿಯಾ, ಮದ್ಯ ಮಾರಾಟಗಾರರ ಪರವಾಗಿ ಮಾತನಾಡುತ್ತಾರೆ. ರೈತರ ಪರವಾಗಿ ಯಾರೂ ಮಾತನಾಡುತ್ತಿಲ್ಲ. ರೈತರು ನಾಲ್ಕು ತಿಂಗಳಿಂದಲೂ ಹೋರಾಟ ನಡೆಸುತ್ತಿದ್ದರೂ ಸರ್ಕಾರ ಪ್ರತಿಕ್ರಿಯಿಸದೇ ಇರುವುದು ಬೆಕ್ಕಿಗೆ ಚೆಲ್ಲಾಟ ಇಲಿಗೆ ಸಂಕಟ ಎನ್ನುವಂತಾಗಿದೆ ಎಂದು ಕಿಡಿಕಾರಿದರು.



ರಾಜ್ಯದಲ್ಲಿರುವ 30 ಲಕ್ಷ ಕಬ್ಬು ಬೆಳೆಗಾರರ ಹಿತ ಕಾಯಲು ಸರ್ಕಾರ ಮುಂದೆ ಬರುತ್ತಿಲ್ಲ. ಮುಂಬರುವ ಚುನಾವಣೆಯಲ್ಲಿ ರಾಜ್ಯದ 38 ಸಕ್ಕರೆ ಕಾರ್ಖಾನೆಯ ಮಾಲೀಕತ್ವ ಹೊಂದಿರುವ ಶಾಸಕರು, ಸಂಸದರಿಗೆ ರೈತರು ಮತ ಹಾಕದೇ, ಅವರನ್ನು ಸೋಲಿಸಲು ಪಣ ತೊಡಬೇಕು. ರಾಜ್ಯ ವಿವಿಧ ಹೆದ್ದಾರಿಗಳಲ್ಲಿ ರಸ್ತೆ ತಡೆ ಚಳುವಳಿ ನಡೆಸಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದೇವೆ. ಇನ್ನಾದರೂ ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಅ.31ರಂದು ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಿ, ನ್ಯಾಯಕ್ಕಾಗಿ ಅನಿರ್ದಿಷ್ಟಾವಧಿ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಪಂಜಾಬ್‌ನಲ್ಲಿ ಒಂದು ಟನ್ ಕಬ್ಬಿಗೆ 3,800 ರೂ., ಉತ್ತರ ಪ್ರದೇಶದಲ್ಲಿ 3500 ರೂ., ಗುಜರಾತ್‌ನಲ್ಲಿ 4400 ರೂ. ದರ ನಿಗದಿ ಮಾಡಲಾಗಿದೆ. ಆದರೆ, ಕರ್ನಾಟಕದಲ್ಲಿ ಮಾತ್ರ ಕಬ್ಬಿಗೆ ಸೂಕ್ತ ಬೆಲೆ ನಿಗದಿ ಮಾಡುವಲ್ಲಿ ಸರ್ಕಾರ ವಿಫಲವಾಗಿದೆ. ಎಫ್‌ಆರ್‌ಪಿ ಬೆಲೆಯನ್ನು ಕನಿಷ್ಠ ಇಳುವರಿ ಕೊಡುವ ಒಂದು ಟನ್ ಕಬ್ಬಿಗೆ 3500 ರೂ. ದರ ನಿಗದಿ ಮಾಡಬೇಕು. ಕಬ್ಬಿನ ಕಟಾವು, ಸಾಗಾಣಿಕೆ ವೆಚ್ಚದಲ್ಲಿ ಕಾರ್ಖಾನೆಯವರಿಂದ ರೈತರ ಸುಲಿಗೆಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಕಬ್ಬು ಕಟಾವು ವಿಳಂಬವಾಗುತ್ತಿದೆ. 16–18 ತಿಂಗಳ ನಂತರ ಕಟಾವು ಮಾಡಲಾಗುತ್ತಿದೆ. ವಿಳಂಬವಾಗಿ ಕಟಾವು ಮಾಡಿದ ಕಬ್ಬಿಗೆ ಈ ಅವಧಿಗೆ ಬಡ್ಡಿ ಸೇರಿಸಿ ಹೆಚ್ಚುವರಿ ದರ ನೀಡಬೇಕು. ಕಬ್ಬು ಕಟಾವು ಸಾಗಾಣಿಕೆ ವೆಚ್ಚವನ್ನು ಸರ್ಕಾರ ನಿಗದಿ ಮಾಡಿರುವ ಮಾರ್ಗಸೂಚಿಯಂತೆ ಕಡಿತಗೊಳಿಸಬೇಕು. ಕೃಷಿ ಲಾಭದಾಯಕ ಆಗುವವರೆಗೂ ರೈತರ ಎಲ್ಲಾ ಸಾಲಗಳನ್ನು ಮನ್ನಾ ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ರೈತರು ಹಾಗೂ ಕೃಷಿ ಅವಲಂಬಿತ ಗೃಹ ಬಳಕೆದಾರರಿಗೆ ಉಚಿತ ವಿದ್ಯುತ್ ಸರಬರಾಜ ಮಾಡಬೇಕು ಎಂದು ಒತ್ತಾಯಿಸಿದರು.

ಬ್ಯಾಂಕುಗಳು ರೈತರಿಗೆ ಸಾಲ ನೀಡುವಾಗ ಸಿಬಿಲ್ ಸ್ಕೋರ್ ಪದ್ಧತಿಯನ್ನು ಕೈಬಿಡಬೇಕು. ಸರ್ಕಾರ ನೀಡುವ ಪರಿಹಾರ, ಪ್ರೋತ್ಸಾಹ ಧನ, ವಿಧವಾ ವೇತನ, ವೃದ್ಧಾಪ್ಯ ವೇತನದ ಹಣವನ್ನು ಸಾಲದ ಖಾತೆಗಳಿಗೆ ಜಮಾ ಮಾಡಬಾರದು. ಬಗರ್ ಹುಕುಂ ಮತ್ತು ಹಿಂದಿನಿಂದಲೂ ಕೃಷಿ ಮಾಡುತ್ತಿರುವ ರೈತರಿಗೆ ಸಾಗುವಳಿ, ಅರಣ್ಯ ಭೂಮಿಯನ್ನು ವ್ಯವಸಾಯ ಮಾಡುತ್ತಿರುವವರಿಗೆ ಸಾಗುವಳಿ ಪಟ್ಟಾವನ್ನು ನೀಡ ಬೇಕು. ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಿ ಕಾಡು ಪ್ರಾಣಿಗಳಿಂದ ಬೆಳೆಗಳ ಹಾನಿಯಾಗುತ್ತಿದ್ದು ವೈಜ್ಞಾನಿಕ ನಷ್ಟವನ್ನು ತುಂಬಿಕೊಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಕುರುಬೂರು ಸಿದ್ದೇಶ್, ವೆಂಕಟೇಶ್, ಹಾಡ್ಯರವಿ, ಕಿರಗಸೂರು ಶಂಕರ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಪ್ರವೇಶ ಶುಲ್ಕ ಹೆಚ್ಚಳ ವಿರೋಧಿಸಿ ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರ ಪ್ರತಿಭಟನೆ



ಮೈಸೂರು,ಅ.27(ಎಂಟಿವೈ)– ಪ್ರವೇಶ ಶುಲ್ಕ ಹೆಚ್ಚಳ ವಿರೋಧಿಸಿ ಹಾಗೂ ಇದರಿಂದ ಉಂಟಾಗಿರುವ ಗೊಂದಲ ನಿವಾರಿಸಲು ಸ್ಪಷ್ಟ ಆದೇಶ ನೀಡುವಂತೆ ಆಗ್ರಹಿಸಿ, ಮಹಾರಾಣಿ ಕಾಲೇಜಿನ ವಿದ್ಯಾರ್ಥಿ ನಿಯರು ಪ್ರತಿಭಟನೆ ನಡೆಸಿದರು.

ಮೈಸೂರಿನ ವಿನೋಬ ರಸ್ತೆ(ಹುಣಸೂರು ರಸ್ತೆ)ಯಲ್ಲಿರುವ ಕಾಲೇಜು ಶಿಕ್ಷಣ ಇಲಾಖೆಯ ಕಚೇರಿ ಮುಂದೆ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್(ಎಐಡಿಎಸ್‌ಓ) ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ನೂರಾರು ವಿದ್ಯಾರ್ಥಿನಿಯರು, ಕೂಡಲೇ ಕಾಲೇಜು ಪ್ರವೇಶ ಶುಲ್ಕ ಹೆಚ್ಚಳದ ಆದೇಶ ಹಿಂಪಡೆಯುವಂತೆ ಆಗ್ರಹಿಸಿದರು.

ಈಗಾಗಲೇ ಕಾಲೇಜುಗಳ ಪ್ರವೇಶಾತಿ ಪ್ರಾರಂಭವಾಗಿದೆ. ಎಸ್ಸಿ–ಎಸ್ಟಿ ವಿದ್ಯಾರ್ಥಿಗಳಿಗೆ ಶುಲ್ಕ ರಹಿತ ಪ್ರವೇಶಾತಿ ನೀಡಿ, ಬಳಿಕ ವಿದ್ಯಾರ್ಥಿ ವೇತನದಲ್ಲಿ ಶುಲ್ಕದ ಮೊತ್ತವನ್ನು ಪಾವತಿಸಿಕೊಳ್ಳಬೇಕು ಎಂಬ ನಿಯಮವಿದೆ. ಆದರೆ, ಕಾಲೇಜುಗಳಲ್ಲಿ ಏಕಾಏಕಿ ಶುಲ್ಕ ಪಾವತಿಸುವಂತೆ ಆದೇಶ ಹೊರಡಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಾರಾಣಿ ಕಾಲೇಜಿನಲ್ಲಿ ಒಬ್ಬ ವಿದ್ಯಾರ್ಥಿಗೆ 16 ಸಾವಿರ ರೂ, ಮಹಾರಾಜ ಕಾಲೇಜಿನಲ್ಲಿ 30 ಸಾವಿರ ರೂ., ಯುವರಾಜ ಕಾಲೇಜಿನಲ್ಲಿ 30–60 ಸಾವಿರ ರೂ. ಶುಲ್ಕ ಕಟ್ಟಬೇಕೆಂದು ಆದೇಶ ಹೊರಡಿಸಿದ್ದಾರೆ. ಏಕಾಏಕಿ ಶುಲ್ಕ ಕಟ್ಟಲು ಆದೇಶಿಸಿರುವುದು ಸರಿಯಲ್ಲ. ವಿದ್ಯಾರ್ಥಿವೇತನ ಬಂದ ಬಳಿಕ ಶುಲ್ಕ ಪಾವತಿ ಮಾಡಲಾಗುತ್ತದೆ. ಅಲ್ಲಿಯವರೆಗೆ ಕಾಲಾವಕಾಶ ನೀಡಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಸರಿಯಾಗಿ ವಿದ್ಯಾರ್ಥಿ ವೇತನ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಏಕಾಏಕಿ ಸಾವಿರಾರು ರೂ. ಪ್ರವೇಶ ಶುಲ್ಕ ಕಟ್ಟಿ ಎಂದು ಒತ್ತಡ ಹೇರುತ್ತಿರುವುದು ವಿದ್ಯಾರ್ಥಿ ವಿರೋಧಿ ನಿಲುವು. ಸರ್ಕಾರಿ ಶಾಲಾ ಕಾಲೇಜಿನಲ್ಲಿ ಓದುತ್ತಿರುವ ಬಹುತೇಕ ವಿದ್ಯಾರ್ಥಿಗಳು ಬಡವರು. ಆದ್ದರಿಂದ ಈ ಕ್ರಮವನ್ನು ಕೈಬಿಡಬೇಕು. ಸರ್ಕಾರ ಹಾಗೂ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಈ ಕೂಡಲೇ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು. ಅಲ್ಲದೇ, ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಗೊಂದಲ ನಿವಾರಿಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಸಂಘಟನೆಯ ಪದಾಧಿಕಾರಿಗಳಾದ ಸುಭಾಷ್, ಚಂದ್ರಕಲಾ, ನಿತಿನ್, ಸ್ವಾತಿ, ಚಂದ್ರಿಕಾ, ಚಂದನ, ಹೇಮಾ, ಸಂಗೀತಾ, ಕಾವ್ಯ, ಅಂಜಲಿ, ಐಶ್ವರ್ಯ, ನಿರ್ಮಲ, ವೀರೇಶ್, ಅಭಿಷೇಕ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಲ್ಯಾಬ್ ಕುಸಿತ

ಆತ್ಮಸ್ಥೈರ್ಯ ತುಂಬಿದ ಪ್ರಿನ್ಸಿಪಾಲ್



ಮೈಸೂರು,ಅ.27(ಎಂಟಿವೈ)– ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಕಟ್ಟಡ ಕುಸಿದ ಹಿನ್ನೆಲೆಯಲ್ಲಿ ಗುರುವಾರ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿನಿಯರ ಸಭೆ ನಡೆಸಿ, ಆತಂಕ ಪಡದೆ ತರಗತಿಗೆ ಹಾಜರಾಗುವಂತೆ ಆತ್ಮಸ್ಥೈರ್ಯ ತುಂಬಿದರು.

ಮಹಾರಾಣಿ ವಿಜ್ಞಾನ ಕಾಲೇಜಿನ ಆವರಣದಲ್ಲಿ ಗುರುವಾರ ಬೆಳಗ್ಗೆ ಸಭೆ ನಡೆಸಿದ ಪ್ರಾಂಶುಪಾಲ ಡಾ.ಡಿ.ರವಿ, ವಿದ್ಯಾರ್ಥಿನಿಯರಿಂದ ಅಹವಾಲು ಆಲಿಸಿದರು. ಈ ವೇಳೆ ಹಲವು ವಿದ್ಯಾರ್ಥಿನಿಯರು ಕಾಲೇಜಿನ ಕಟ್ಟಡದ ಭದ್ರತೆಯ ಬಗ್ಗೆ ಆತಂಕ ವ್ಯಕ್ತಪಡಿಸಿದರಲ್ಲದೆ, ಪೋಷಕರು ಆತಂಕ ವ್ಯಕ್ತಪಡಿಸಿರುವುದನ್ನು ಗಮನಕ್ಕೆ ತಂದರು.

ಈ ವೇಳೆ ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ವಿದ್ಯಾರ್ಥಿನಿಯರು ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿಯ ಹಿತಕಾಯುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ನಿರಂತರ ಮಳೆಯಿಂದಾಗಿ ರಸಾಯನಶಾಸ್ತ್ರ ಪ್ರಯೋಗಾಲಯವಿದ್ದ ಕಟ್ಟಡ ಶಿಥಿಲಗೊಂಡು ಕುಸಿದಿದೆ. ಇದರಿಂದ ಕಾಲೇಜಿನ ಪೂರ್ಣ ಕಟ್ಟಡ ಶಿಥಿಲಗೊಂಡಿದೆ ಎಂದು ಭಾವಿಸಬಾರದು. ಈಗಾಗಲೇ ಕಾಲೇಜಿನ ಪಕ್ಕ ನೂತನವಾಗಿ ನಿರ್ಮಿಸಿರುವ ಹೊಸ ಕಟ್ಟಡದಲ್ಲಿ ರಸಾಯನಶಾಸ್ತ್ರದ ವಿದ್ಯಾರ್ಥಿಗಳಿಗೆ ತರಗತಿ ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ಇತರೆ ವಿಭಾಗದ ವಿದ್ಯಾರ್ಥಿಗಳು ನಿರ್ಭಿತಿಯಿಂದ ತರಗತಿಗೆ ಹಾಜರಾಗಬೇಕು. ಈಗಾಗಲೇ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ತಂಡ ಕಾಲೇಜಿನ ಪಾರಂಪರಿಕ ಕಟ್ಟಡವನ್ನು ಪರಿಶೀಲನೆ ನಡೆಸಿದ್ದಾರೆ. ಕೆಲವೇ ದಿನಗಳಲ್ಲಿ ವರದಿ ಸಲ್ಲಿಸಲಿದ್ದಾರೆ. ವಿದ್ಯಾರ್ಥಿನಿಯರು ಹಾಗೂ ಪೋಷಕರು ಗಾಳಿಸುದ್ದಿ ನಂಬಬಾರದು. ಕುತೂಹಲಕ್ಕಾಗಿ ಕುಸಿದು ಬಿದ್ದಿರುವ ಕಟ್ಟಡದ ಬಳಿ ಹೋಗಬಾರದು ಎಂದು ಸಲಹೆ ನೀಡಿದರು. ಸಭೆಯಲ್ಲಿ ಕಾಲೇಜಿನ ಪ್ರಾಧ್ಯಾಪಕರು, ಕಛೇರಿ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಅರಣ್ಯ ಆದಿವಾಸಿಗಳಿಗೆ ಶೇ.4ರಷ್ಟು ಒಳಮೀಸಲಾತಿ ಕಲ್ಪಿಸಲು ಒತ್ತಾಯ



ಮೈಸೂರು,ಅ.27(ಪಿಎಂ)– ಪರಿಶಿಷ್ಟ ಪಂಗಡಕ್ಕೆ ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿರುವ ಮೀಸಲಾತಿಯಲ್ಲಿ ಅರಣ್ಯ ಆದಿವಾಸಿಗಳಿಗೆ ಶೇ.4ರಷ್ಟು ಕಾಯ್ದಿರಿಸಿ, ಒಳಮೀಸಲಾತಿ ನೀಡಬೇಕೆಂದು ಬುಡಕಟ್ಟು ಆದಿವಾಸಿ ಸುರಕ್ಷಾ ವೇದಿಕೆ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಡಾ.ಗಣೇಶ, ಪರಿಶಿಷ್ಟ ಪಂಗಡಕ್ಕೆ ಹೆಚ್ಚಳ ಮಾಡಿರುವ ಶೇ.7ರಷ್ಟು ಮೀಸಲಾತಿಯಲ್ಲಿ ಅರಣ್ಯ ವಾಸದ ಹಿನ್ನೆಲೆವುಳ್ಳ ಆದಿವಾಸಿ ಸಮುದಾಯಗಳನ್ನು ವಿಶೇಷ ದುರ್ಬಲ ಗುಂಪು ಎಂದು ಘೋಷಿಸಿ, ಶೇ.4ರಷ್ಟು ಒಳಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.


ಪರಿಶಿಷ್ಟ ಪಂಗಡ ಪಟ್ಟಿಯಲ್ಲಿರುವ ಜೇನು ಕುರುಬ ಹಾಗೂ ಕೊರಗ ಪಂಗಡಗಳನ್ನು ವಿಶೇಷ ದುರ್ಬಲ ಗುಂಪು ಎಂದು ಘೋಷಿಸಲಾಗಿದೆ. ಅದೇ ರೀತಿಯಲ್ಲಿ ಕಾಡುಕುರುಬ (ಬೆಟ್ಟಕುರುಬ), ಸೋಲಿಗ, ಮಲೆಕುಡಿಯ, ಹಸಲರು, ಇರುಳಿಗ, ಎರವ, ಪಣಿಯನ್, ಹಕ್ಕಿಪಿಕ್ಕಿ, ಸಿದ್ದಿ ಮತ್ತು ಗೌಡಲು ಸಮುದಾಯಗಳನ್ನು ವಿಶೇಷ ದುರ್ಬಲ ಗುಂಪು ಎಂದು ಘೋಷಣೆ ಮಾಡಬೇಕು. ಈ ಎಲ್ಲಾ ಆದಿವಾಸಿ ಸಮುದಾಯಗಳಿಗೆ ಶೇ.4ರಷ್ಟು ಒಳಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು. ವೇದಿಕೆ ಮುಖಂಡ ಶಿವರಾಜು ಗೋಷ್ಠಿಯಲ್ಲಿದ್ದರು.

ಉಚಿತ ಮೆದುಳು, ಬೆನ್ನುಮೂಳೆ ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಅ. 27– ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಅವರ ಸ್ಮರಣೆ ಅಂಗವಾಗಿ ಅ. 31 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ಉಚಿತ ಮೆದುಳು, ಬೆನ್ನುಮೂಳೆ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 95133 10100, 95133 10103 ಸಂಪರ್ಕಿಸಬಹುದು.

ಇಂದು ತೆರೆಗೆ ಬರುತ್ತಿದೆ ಅಪ್ಪು ಸಾಕ್ಷಿಯ 'ಗಂಧದ ಗುಡಿ'

● ನಿಮ್ಮನ್ನ ನಂಬಿ ಬಂದಿದ್ದೀನಿ, ಹೆಂಡ್ತಿ-ಮಕ್ಕಳು ಮನೇಲಿದ್ದಾರೆ...! ● ನಿರ್ದೇಶಕ ಅಮೋಘವರ್ಷರಿಗೆ ಪುನೀತ್ ಭಯದಿಂದ ಹೇಳೋ ಮಾತು



ಪುನೀತ್ ರಾಜ್‌ಕುಮಾರ್ ಅವರ ಪ್ರಥಮ ಪುಣ್ಯಸ್ಮರಣೆಯ ದಿನಕ್ಕೂ ಮುನ್ನಾ ದಿನ ಅಂದರೆ ನಾಳೆ (ಅ.28) ರಾಜ್ಯಾದ್ಯಂತ 225 ಚಿತ್ರಮಂದಿರಗಳಲ್ಲಿ ಅವರ ಕನಸಿನ ಕೂಸಾದ 'ಗಂಧದಗುಡಿ' ಚಿತ್ರ ಬಿಡುಗಡೆಯಾಗುತ್ತಿದೆ. ಇದುವೇ ಅವರ ಕೊನೆಯ ಚಿತ್ರವಾಗಿದ್ದು, ಮೈಸೂರಿನ ಎಲ್ಲಾ ಮಾಲ್‌ಗಳಲ್ಲಿರುವ ಮಲ್ಟಿಪ್ಲೆಕ್ಸ್‌ಗಳು, ಸಂಗಂ ಹಾಗೂ ಪದ್ಮಾ ಚಿತ್ರಮಂದಿರದಲ್ಲಿ ತೆರೆಕಾಣಲಿದೆ. ರಾಜ್ಯಾದ್ಯಂತ ಅಪ್ಪು ಅಭಿಮಾನಿಗಳು ಈ ಚಿತ್ರ ವೀಕ್ಷಿಸಲು ತುದಿಗಾಲಿನಲ್ಲಿ ನಿಂತಿದ್ದು, ಅಲ್ಲಲ್ಲಿ ಫ್ಲೆಕ್ಸ್ ಮತ್ತು ಕಟೌಟ್‌ಗಳನ್ನು ಅಳವಡಿಸಿ, ಸಂಭ್ರಮಿಸುತ್ತಿದ್ದಾರೆ.

ಮೈಸೂರು, ಅ.27– ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಕೊನೆಯ ಚಿತ್ರವಾದ 'ಗಂಧದ ಗುಡಿ' ನಾಳೆ (ಅ.28) ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್ ಕುಮಾರ್ ನಿರ್ಮಾಣದಲ್ಲಿ ಸುಮಾರು ಒಂದೂವರೆ ಗಂಟೆಯ ಸಾಕ್ಷ್ಯಚಿತ್ರ ಇದಾಗಿದ್ದು, ಚಿತ್ರದುದ್ದಕ್ಕೂ ವನ್ಯಜೀವಿ, ಅರಣ್ಯ ಸಂಪತ್ತು ಹಾಗೂ ಪರಿಸರ ಜಾಗೃತಿ ಮೂಡಿಸುವ ಸಂದೇಶಗಳನ್ನು ಸಾರಲಾಗಿದೆ. ಪುನೀತ್ ರಾಜ್‌ಕುಮಾರ್ ಸಹಜಸ್ಥಿತಿಯಲ್ಲಿ ನಟಿಸಿದ್ದು, ನಾಡಿನ ಜನರೊಟ್ಟಿಗೆ ಸಂಭಾಷಿಸುವ ರೀತಿಯಲ್ಲಿ ದೃಶ್ಯ ಸಾಗಿದೆ.

'ಗಂಧದಗುಡಿ'ಯ ಸುಗಂಧದ ಪರಿಮಳ ಭೂಲೋಕವನ್ನೇ ಆವರಿಸಿದೆ. 'ಗಂಧದ ಗುಡಿ'ಯ ರಾಜಕುಮಾರ ಅಂದರೆ ಅದು ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್. ಒಂದು ವರ್ಷಗಳ ಕಾಲ ಕಾಡುಮೇಡು ಅಲೆದು ನಮ್ಮ ನಾಡಿನ ಶ್ರೀಮಂತಿಕೆಯನ್ನು 'ಗಂಧದಗುಡಿ' ಸಿನಿಮಾ ಮೂಲಕ ಪ್ರಪಂಚಕ್ಕೆ ಸಾರಿ ಸಾರಿ ಹೇಳಿದ್ದಾರೆ.

ಪ್ರತಿಯೊಬ್ಬ ಅಪ್ಪು ಅಭಿಮಾನಿಯೂ ಮಿಸ್ ಮಾಡದೇ ನೋಡಲೇಬೇಕಾದ ಸಿನಿಮಾ ಅಂದರೆ ಅದು 'ಗಂಧದಗುಡಿ'. ಸುಮಾರು ಒಂದೂವರೆ ಗಂಟೆಗಳ ಕಾಲ ಇರೋ ಡಾಕ್ಯುಮೆಂಟರಿ. ಇಲ್ಲಿ ಪುನೀತ್ ಪವರ್ ಸ್ಟಾರ್ ಆಗಿಲ್ಲ, ಬದಲಾಗಿ ನಮ್ಮ ನಾಡಿನ ಪ್ರಾಣಿಸಂಕುಲ,ಜಲಚರ,ಬೆಟ್ಟ ಗುಡ್ಡ,ನದಿ,ಸಮುದ್ರಗಳ ಸೌಂದರ್ಯವನ್ನು ಪುಟ್ಟಮಗುವಿನಂತೆ ವೀಕ್ಷಿಸಿ, ಆ ಖುಷಿಯ ಕ್ಷಣಗಳನ್ನು ನಮ್ಮೊಂದಿಗೆ ಶೇರ್ ಮಾಡುತ್ತಿದ್ದಾರೇನೋ ಅಂತ ಅನಿಸೋದು ಪಕ್ಕಾ.

'ಗಂಧದಗುಡಿ' ಸಿನಿಮಾ ಪ್ರಾರಂಭದಲ್ಲಿ 'ಬೆಟ್ಟದಹೂವು' ಸಿನಿಮಾದ ಒಂದು ಸೀನ್ ಮೂಲಕ ಶುರುವಾಗುತ್ತದೆ ನಂತರ ಅಶ್ವಿನಿ ಪುನೀತ್ ಅಪ್ಪು ಬಗ್ಗೆ ಒಂದಷ್ಟು ವಿಚಾರಗಳನ್ನು ತಮ್ಮ ಧ್ವನಿಯ ಮೂಲಕ ನಿರೂಪಣೆ ಮಾಡುತ್ತಾರೆ. ಆ ಕ್ಷಣ ಯಾಕೋ ಎಲ್ಲರನ್ನೂ ಕಾಡಿ ಕಣ್ಣಂಚಲ್ಲಿ ನೀರು ಬರಿಸುತ್ತೆ ನಂತರ ಡೈರೆಕ್ಟರ್ ಅಮೋಘ ವರ್ಷ ಮತ್ತು ಪುನೀತ್ ಜರ್ನಿ ಶುರುವಾಗುತ್ತದೆ. ಆ ಜರ್ನಿಯನ್ನು ನೋಡುತ್ತಿದ್ದರೆ ಛೇ..! ಅಪ್ಪು ಇರಬೇಕಿತ್ತು ಎಂದು ಪ್ರತಿಯೊಬ್ಬರೂ ದೇವರಿಗೆ ಹಿಡಿಹಿಡಿ ಶಾಪ ಹಾಕೋದು ಕೂಡ ಅಷ್ಟೇ ಸತ್ಯ.

ಅಣ್ಣಾವ್ರು ಹುಟ್ಟಿ ಬೆಳೆದ ಗಾಜಾನೂರಿನ ಮನೆಗೆ ಅಪ್ಪು ಡೈರೆಕ್ಟರ್ ಅಮೋಘವರ್ಷ ಅವರೊಂದಿಗೆ ಭೇಟಿ ನೀಡಿ, ಅಣ್ಣಾವ್ರ ಬಗ್ಗೆ ಹೇಳೋ ಮಾತು ಕೇಳ್ಬೇಕು ಅಂದರೆ ಗಂಧದಗುಡಿ ಸಿನಿಮಾ ನೋಡಲು ರೆಡಿಯಾಗಿ. ಇಲ್ಲಿ ಒಂದು ಮಾತನ್ನು ಅಪ್ಪು ಹೇಳುತ್ತಾರೆ. ಅದು ಏನಂದ್ರೆ ನಂಗೆ ಎರಡು ಕನಸಿದೆ. ಅದು ಹುಲಿ ಮತ್ತು ಆನೆಯನ್ನು ನೋಡೋದು ಬೇಗ ತೋರಿಸಿ ಅಂತ ಕೇಳಿಕೊಳ್ಳುತ್ತಾರೆ. ಅಂತೆಯೇ ಆನೆಯನ್ನು ನೋಡಿ 'ಭಕ್ತ ಪ್ರಹ್ಲಾದ' ಸಿನಿಮಾದ ಒಂದು ಸ್ಟೋರಿಯನ್ನು ಹೇಳಿ ನಿಮ್ಮನ್ನು ನಗಿಸುತ್ತಾರೆ. ಹೀಗೆ ಸಾಗೋ ಜರ್ನಿಯಲ್ಲಿ ಮುಂದೆ ಒಂದು ಅದ್ಭುತ ವಿಚಾರ ನಿಮ್ಮನ್ನು ಕಾಡುತ್ತೆ. ಅದೇನು ಅಂತ ನಾವು –ನೀವು ಸಿನಿಮಾನಾ ಥಿಯೇಟರ್‌ನಲ್ಲಿ ನೋಡಿಯೇ ತಿಳಿಯಬೇಕು. ಇಲ್ಲಿ ಪುನೀತ್ ಪುನೀತಾಗೇ ಕಾಣಸಿಗುತ್ತಾರೆ. ಬಣ್ಣ ಹಚ್ಚಿಲ್ಲ. ಸಾಮಾನ್ಯರಲ್ಲಿ ಸಾಮಾನ್ಯರಂತೆ ಎಲ್ಲರೊಂದಿಗೆ ಬೇರೆಯೋ ರೀತಿಯೇ ಒಂದು ರೀತಿ ಅದ್ಭುತವೆನಿಸುತ್ತದೆ. ಹಾವು ಅಂದ್ರೆ ಪುನೀತ್‌ಗೆ ತುಂಬಾ ಭಯ. ಹಾವಿನ ಶಬ್ದಕ್ಕೆ ಅಮೋಘ ವರ್ಷ ಅವರಿಗೆ ಅಪ್ಪು ಹೇಳೋ ಮಾತು ಏನಂದ್ರೆ 'ಹೆಂಡ್ತಿ ಮಕ್ಕಳನ್ನು ಬಿಟ್ಟು ನಿಮ್ಮನ್ನು ನಂಬಿ ಬಂದಿದ್ದೀನಿ' ಅಂತ.

ಗಾಳಿ,ಮಳೆ ಯಾವುದನ್ನೂ ಲೆಕ್ಕಿಸದೆ ಇಲ್ಲಿ ಓಡಾಡಿದ್ದಾರೆ ಅಪ್ಪು.ಕಾಡಲ್ಲೇ ವಾಕ್, ಟಾಕ್ ಮತ್ತು ಊಟ ಒಂಥರಾ ಮಜಾ ವಾಗಿದೆ ಅಂತ ಇಲ್ಲಿ ಪುನೀತ್ ಹೇಳೋ ಮಾತು ಕೇಳೋದೇ ಥ್ರಿಲ್ ಬಿಡಿ.



ಭಾರತ–ಪಾಕ್ ಕ್ರಿಕೆಟ್ ಪಂದ್ಯದ ವೇಳೆ ರಾರಾಜಿಸಿದ ಘೋಸ್ಟ್

ಸಂದೇಶ್ ನಾಗರಾಜ್ (ಎಂಎಲ್‌ಸಿ) ಅರ್ಪಿಸುವ, ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಸಂದೇಶ್ ಎನ್. ನಿರ್ಮಿಸುತ್ತಿರುವ, ಶ್ರೀನಿ ನಿರ್ದೇಶನದ, ಹ್ಯಾಟ್ರಿಕ್ ಹೀರೋ ಶಿವರಾಜಕುಮಾರ್ ನಾಯಕರಾಗಿ ನಟಿಸುತ್ತಿರುವ ಚಿತ್ರ "ಘೋಸ್ಟ್".

ಇತ್ತೀಚೆಗೆ ಆಸ್ಟ್ರೇಲಿಯಾದಲ್ಲಿ ನಡೆದ ಟಿ-20 ವಿಶ್ವಕಪ್ ಪಂದ್ಯಾವಳಿಯ ಭಾರತ - ಪಾಕಿಸ್ತಾನ ಕ್ರಿಕೆಟ್ ಪಂದ್ಯದಲ್ಲಿ '1ಘೋಸ್ಟ್' ಚಿತ್ರದ ಪೋಸ್ಟರ್ ರಾರಾಜಿಸಿದೆ. ಅಭಿಮಾನಿಗಳು ಈ ಚಿತ್ರದ ಪೋಸ್ಟರ್ ಹಿಡಿದು ಚಿತ್ರಕ್ಕೆ ಹಾಗೂ ಚಿತ್ರ ತಂಡಕ್ಕೆ ಶುಭ ಕೋರಿದರು.

ವಿಭಿನ್ನ ಕಥಾಹಂದರ ಹೊಂದಿರುವ, ಅದ್ದೂರಿ ತಾರಾಗಣದೊಂದಿಗೆ, ಅಪಾರ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಬಿರುಸಿನ ಚಿತ್ರೀಕರಣ ನಡೆಯುತ್ತಿದೆ.



ದೀಪಗಳ ನಡುವೆ ಕೆಜಿಎಫ್ ಸುಂದರಿ ಅರ್ಚನಾ!

ಬದುಕಿನ ಕತ್ತಲೆಯನ್ನು ಕಳೆದು, ಬೆಳಕಿನ ಭರವಸೆ ನೀಡುವ ದೀಪಗಳ ಹಬ್ಬ ದೀಪಾವಳಿಯನ್ನು ಎಲ್ಲೆಡೆ ಸಂಭ್ರಮ ಸಡಗರದಿಂದ ಆಚರಿಸಿದ್ದಾರೆ. ಚಂದನವನದಲ್ಲೂ ದೀಪಾವಳಿಯ ಸಂಭ್ರಮ ಜೋರಾಗಿಯೇ ನಡೆದಿದೆ. ಕೆಜಿಎಫ್‌ನಲ್ಲಿ ರಾಕಿಭಾಯ್ ತಾಯಿಯಾಗಿ ನಟಿಸಿದ್ದ ನಟಿ ಅರ್ಚನಾ ಜೋಯಿಸ್ ದೀಪಾವಳಿ ಸಂಭ್ರಮದಲ್ಲಿ ಫೋಟೋಶೂಟ್ ಮಾಡಿಸೋ ಮೂಲಕ ಗಮನ ಸೆಳೆಯುತ್ತಿದ್ದಾರೆ. ಅಲ್ಲದೆ ಆ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಸೆಲೆಬ್ರೆಟಿ ಫೋಟೋಗ್ರಾಫರ್ ನಾಗರಾಜ್ ಸೋಮಯಾಜಿ ಫೋಟೋಗಳನ್ನು ಸೆರೆಹಿಡಿದಿದ್ದಾರೆ. ಫೋಟೋಶೂಟ್ ಬಗ್ಗೆ ಪ್ರತಿಕ್ರಿಯಿಸಿರುವ ನಟಿ ಅರ್ಚನಾ ಜೋಯಿಸ್, ದೀಪಾವಳಿ ಹಬ್ಬದ ಈ ಪ್ರಯುಕ್ತ ಫೋಟೋಶೂಟ್ ಮಾಡಲಾಗಿದೆ. ದೀಪಾವಳಿ ಅಂದ್ರೆ ಬೆಳಕು. ಅದನ್ನೇ ಥೀಮ್ ಆಗಿಸಿಕೊಂಡು ನಾಗರಾಜ್ ಸೋಮಯಾಜಿ ಅವರು ಈ ಫೋಟೋಗಳನ್ನು ತೆಗೆದಿದ್ದಾರೆ, ಅಲ್ಲದೆ ದೀಪಾವಳಿ ಹಬ್ಬದ ಬಗ್ಗೆಯೂ ಮಾತನಾಡಿ, ಈಗ ಪಟಾಕಿ ಹೊಡೆಯೋ ಅಭ್ಯಾಸವೇ ಹೊರಟುಹೋಗಿದೆ. ದೀಪಗಳ ಮೂಲಕವೇ ದೀಪಾವಳಿ ಸೆಲೆಬ್ರೇಟ್ ಮಾಡುತ್ತಿದ್ದೇವೆ. ನನಗೆ ಈ ಬಾರಿ ದೀಪಾವಳಿ ತುಂಬಾನೇ ಸ್ಪೆಷಲ್. ನಾನು ನಾಯಕಿಯಾಗಿ ಅಭಿನಯಿಸಿದ 'ಹೊಂದಿಸಿ ಬರೆಯಿರಿ' ಚಿತ್ರವು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಸಿನಿಮಾದ ಪ್ರಚಾರ ಕೂಡ ಜೋರಾಗಿಯೇ ನಡೆಯುತ್ತಿದೆ ಎಂದರು. ಕೆಜಿಎಫ್ ನಂತರ ಸ್ಯಾಂಡಲ್‌ವುಡ್ ಅಂಗಳದಲ್ಲಿ ಅರ್ಚನಾ ಜೋಯಿಸ್ ಸಖತ್ ಬ್ಯುಸಿಯಾಗಿದ್ದಾರೆ. ಇವರು ನಟಿಸಿರುವ 'ಹೊಂದಿಸಿ ಬರೆಯಿರಿ' ನವೆಂಬರ್ 18ರಂದು ಬಿಡುಗಡೆಯಾಗುತ್ತಿದ್ದು, ಕ್ಷೇತ್ರಪಾಲ ಎನ್ನುವ ಮತ್ತೊಂದು ಚಿತ್ರವೂ ಬಿಡುಗಡೆಯ ಸನಿಹದಲ್ಲಿದೆ.



ಸೋನುಗೌಡ ಈಗ 'ಸಿಎಂ ವಸುಂಧರಾದೇವಿ'

ಹಿಂದೆ ಚಾಣಾಕ್ಷ ಚಿತ್ರವನ್ನು ನಿರ್ದೇಶಿಸಿದ್ದ ಮಹೇಶ್ ಚಿನ್ಮಯ್ ಈಗ 'ಸಿಎಂ ವಸುಂಧರಾದೇವಿ' ಎಂಬ ಚಿತ್ರವನ್ನು ತೆರೆಗೆ ತರುತ್ತಿದ್ದಾರೆ. ಪೊಲಿಟಿಕಲ್ ಥ್ರಿಲ್ಲರ್ ಹಾಗೂ ಸಾಮಾಜಿಕ ಕಥಾಹಂದರ ಹೊಂದಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಧರ್ಮ ಕೀರ್ತಿರಾಜ್ ಹಾಗೂ ಸೋನುಗೌಡ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರವನ್ನು ಅಶೋಕ್ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ಧರ್ಮ ಕೀರ್ತಿರಾಜ್ ಒಬ್ಬ ಇನ್‌ವೆಸ್ಟಿಗೇಷನ್ ಅಧಿಕಾರಿಯಾಗಿದ್ದು, ಸೋನುಗೌಡ ಸಿಎಂ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಮುಖ್ಯಮಂತ್ರಿಯ ಮಗಳೊಬ್ಬಳು ತಾನು ಸಿಎಂ ಆಗ ಬೇಕೆಂಬ ಆಸೆಯಿಂದ ಗೆದ್ದು ಆಡಳಿತ ಚುಕ್ಕಾಣಿ ಹಿಡಿಯುತ್ತಾಳೆ. ನಂತರ ಆಕೆಯ ಕೊಲೆಯಾಗುತ್ತದೆ. ಯಾರು, ಏಕೆ ಕೊಲೆ ಮಾಡಿದವರು ಎಂಬುದನ್ನು ಕಂಡುಹಿಡಿಯಲು ಬರುವ ತನಿಖಾಧಿಕಾರಿಯಾಗಿ ಧರ್ಮ ಕಾಣಿಸಿಕೊಂಡಿದ್ದಾರೆ. ಗೋವಿಂದೇಗೌಡ, ರೂಪೇಶ್, ಪೂಜಾ, ಸೆವೆನ್‌ರಾಜ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ ನಾಯಕ ನಟ ಧರ್ಮ ಮಾತನಾಡುತ್ತ ನಿರ್ಮಾಪಕ ಅಶೋಕ್ ಕವೇಟಿ ಅವರು ಸಿನಿಮಾ ಮೇಲೆ ತುಂಬಾ ಪ್ರೀತಿ ಇಟ್ಟುಕೊಂಡಿದ್ದಾರೆ. ಚಿತ್ರದ ಪ್ರತಿ ಟೆಕ್ನೀಷಿಯನ್, ಆರ್ಟಿಸ್ಟ್‌ಗೂ ಚೆನ್ನಾಗಿ ನೋಡಿಕೊಂಡಿದ್ದಾರೆ. ಈ ಚಿತ್ರ ನನಗೆ ಬ್ರೇಕ್ ನೀಡುತ್ತೆ ಎನ್ನುವ ನಂಬಿಕೆಯಿದೆ. ಹಿಂದೆ ನಟಿಸಿರುವ ಚಿತ್ರಗಳಿಗಿಂತ ಈ ಪಾತ್ರ ವಿಭಿನ್ನವಾಗಿದೆ. ನನ್ನ ಹೇರ್‌ಸ್ಟೈಲ್ ಕೂಡ ಬದಲಾಗಿದೆ. ಚಿತ್ರದಲ್ಲಿ 2 ಫೈಟ್‌ಗಳನ್ನು ಅರ್ಜುನ ವಿಭಿನ್ನವಾಗಿ ಮಾಡಿಕೊಟ್ಟಿದ್ದಾರೆ. ನನ್ನ ಹಾಗೂ ನಾಯಕಿ ಸೋನಿಗೌಡರ ನಡುವೆ ಡೆಡ್ಲೀ ಕಾಂಬಿನೇಶನ್ ಇದೆ. ಈ ಚದುರಂಗದಾಟದಲ್ಲಿ ಗೆಲ್ಲುವವರು ಯಾರು ಎಂದು ಟೀಸರ್‌ನಲ್ಲಿರುವ ಮಾತು ಅರ್ಥಪೂರ್ಣವಾಗಿದೆ. ನಾನು ಇನ್‌ವೆಸ್ಟಿಗೇಶನ್ ಆಫೀಸರ್ ಆದರೂ ದುರಹಂಕಾರ ಯುವಕನಾಗಿರುತ್ತೇನೆ. ಯಾಕೆ ಹಾಗಿರುತ್ತೇನೆ ಎನ್ನುವುದು ಚಿತ್ರದ ಕೊನೆಯಲ್ಲಿ ಗೊತ್ತಾಗುತ್ತದೆ ಎಂದು ಹೇಳಿದರು.



'ಸಂಜು ಮತ್ತು ಗೀತಾ' ಪ್ರೇಮಕಥೆ

ದಶಕಗಳ ಹಿಂದೆ ದಿ.ಶಂಕರ್‌ನಾಗ್ ಅಭಿನಯಿಸಿದ್ದ "ಗೀತಾ" ಚಿತ್ರದಿಂದ ಸಂಜು, ಗೀತಾ ಎನ್ನುವ ಹೆಸರು ಜನಪ್ರಿಯವಾಯಿತು. ನಂತರ 'ಸಂಜು ವೆಡ್ಸ್ ಗೀತಾ' ಹೆಸರಿನಲ್ಲಿ ಒಂದು ಚಿತ್ರವೇ ನಿರ್ಮಾಣವಾಯಿತು, ಈಗ ಮತ್ತೆ 'ಸಂಜು ಮತ್ತು ಗೀತಾ' ಹೆಸರಿನಲ್ಲಿ ಚಲನ ಚಿತ್ರವೊಂದು ಸೆಟ್ಟೇರಿದೆ. ಆರ್.ಕೆ. ಅವರ ನಿರ್ದೇಶನದ ಈ ಚಿತ್ರದಲ್ಲಿ ನವಿರಾದ ಪ್ರೇಮಕಥೆಯೊಂದನ್ನು ಹೇಳಲಾಗುತ್ತಿದೆ. ಈ ಹಿಂದೆ ಇದೇ ನಿರ್ದೇಶಕರ ಜೊತೆ 'ಕಾಣೆಯಾಗಿದ್ದಾಳೆ' ಚಿತ್ರದಲ್ಲಿ ನಟಿಸಿದ್ದ ವಿನಯ್ ಕಾರ್ತಿಕ್ ಈ ಚಿತ್ರದಲ್ಲೂ ನಾಯಕನಾಗಿದ್ದು, ಕಿರು ತೆರೆನಟಿ ಸನ್ಮಿತ ನಾಯಕಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ನಟ ರಾಘವೇಂದ್ರ ರಾಜಕುಮಾರ್ ನಾಯಕಿಯ ತಂದೆಯಾಗಿಯೂ, ಹಿರಿಯ ನಟಿ ಭವ್ಯ ನಾಯಕನ ತಾಯಿಯಾಗಿಯೂ ಅಭಿನಯಿಸುತ್ತಿದ್ದಾರೆ. ತಾತನಾಗಿ ಹಿರಿಯ ಸಾಹಿತಿ ದೊಡ್ಡರಂಗೇಗೌಡರು, ಅಲ್ಲದೆ ನಟಿ ಸ್ವಾತಿ ಕೂಡ ಚಿತ್ರದಲ್ಲಿದ್ದಾರೆ. ಮುಹೂರ್ತದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ನಾಯಕ ವಿನಯ್ ಕಾರ್ತಿಕ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆ ನನಗೆ ತುಂಬಾ ವಿಶೇಷವಾಗಿದೆ ಎನಿಸಿತು. ಅಲ್ಲದೆ ರಾಘವೇಂದ್ರ ರಾಜ್‌ಕುಮಾರ್, ಭವ್ಯ ಅವರಂತಹ ಹಿರಿಯ ನಟರೊಡನೆ ಅಭಿನಯಿಸುತ್ತಿರುವುದು ಕೂಡ ಖುಷಿಯಾಗಿದೆ ಎಂದು ಹೇಳಿದರು. ನಾಯಕಿಯ ಪಾತ್ರದ ಬಗ್ಗೆ ಸನ್ಮಿತ ಚಿಕ್ಕದಾಗಿ ಹೇಳಿಕೊಂಡರು. ಇನ್ನು ಮಹಾಭಾರತದ ರಾಗಿಣಿ ಪಾತ್ರಧಾರಿ ರಾಘವೇಂದ್ರ ಈ ಚಿತ್ರದಲ್ಲಿ ಹೆಣ್ಣಾಗಿಯೇ ಕಾಣಿಸಿಕೊಳ್ಳುತ್ತಿದ್ದಾರೆ. ನಿರ್ಮಾಪಕ ಸಂಜಯ್ ಮಾಗನೂರು ಹಾಗೂ ಸಂಗೀತ ನಿರ್ದೇಶಕ ಕೌಶಿಕ್ ಚಿತ್ರದ ಬಗ್ಗೆ ಮಾಹಿತಿ ನೀಡಿದರು. ಛಾಯಾಗ್ರಾಹಕ ನಾಗರಾಜ್, ಸಂಕಲನಕಾರ ಶಿವರಾಜು ಮೇಹು ಕೂಡ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಡಾರ್ಲಿಂಗ್ ಕೃಷ್ಣ ಈಗ 'ಕೌಸಲ್ಯಾ ಸುಪ್ರಜಾ ರಾಮ...'

'ಲವ್ 360' ಖ್ಯಾತಿಯ ನಿರ್ದೇಶಕ ಶಶಾಂಕ್ ಹಾಗೂ ಲವ್ ಮಾಕ್ಟೇಲ್‌ನ ಡಾರ್ಲಿಂಗ್ ಕೃಷ್ಣ ಕಾಂಬಿನೇಶನ್‌ನ ಹೊಸ ಚಿತ್ರಕ್ಕೆ "ಕೌಸಲ್ಯಾ ಸುಪ್ರಜಾ ರಾಮ..." ಶೀರ್ಷಿಕೆ ಇಡಲಾಗಿದೆ. ಇತ್ತೀಚೆಗೆ ಈ ಶೀರ್ಷಿಕೆ ಅನಾವರಣ ಸಮಾರಂಭ ನಡೆಯಿತು. ಹಿಂದೆ ದಿನಬೆಳಗಾದರೆ ರೇಡಿಯೋದಲ್ಲಿ ಈ ಸುಪ್ರಭಾತ ಗೀತೆ ಕೇಳಿಬರುತ್ತಿತ್ತು. ಇದೇ ಈಗ ಚಿತ್ರಕ್ಕೆ ಶೀರ್ಷಿಕೆಯಾಗಿದೆ. ಇದೊಂದು ತಾಯಿ ಮಗನ ನಡುವಿನ ಭಾವನಾತ್ಮಕ ಸನ್ನಿವೇಶಗಳನ್ನೊಳಗೊಂಡ, ಉತ್ತಮ ಮನ ರಂಜನೆಯ ಚಿತ್ರ. ನಾಯಕನಾಗಿ ಡಾರ್ಲಿಂಗ್ ಕೃಷ್ಣ, ಆತನ ತಾಯಿ, ತಂದೆ ಪಾತ್ರದಲ್ಲಿ ಸುಧಾ ಬೆಳವಾಡಿ, ರಂಗಾಯಣ ರಘು ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಅದರಲ್ಲಿ ಒಬ್ಬರು ಹೊಸಬರು. ಸದ್ಯದಲ್ಲೇ ನಾಯಕಿಯರ ಪರಿಚಯ ಮಾಡಿಸಲಾಗುತ್ತದೆ ಎಂದು ನಿರ್ದೇಶಕ ಶಶಾಂಕ್ ತಿಳಿಸಿದರು. ಈಗಾಗಲೇ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಯುತ್ತಿದೆ. ಐದು ಹಾಡುಗಳಿಗೆ ಅರ್ಜುನ್ ಜನ್ಯ ಸಂಗೀತ ನೀಡುತ್ತಿದ್ದಾರೆ. ಸುಜ್ಞಾನ್‌ರ ಛಾಯಾಗ್ರಹಣ ಚಿತ್ರಕ್ಕಿದೆ, ಶಶಾಂಕ್ ಸಿನಿಮಾಸ್ ಹಾಗೂ ಬಿ.ಸಿ.ಪಾಟೀಲ್ ಅವರ ಕೌರವ ಪ್ರೊಡಕ್ಷನ್ ಹೌಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಸಿನಿಪದಬಂಧ–447

ಉಮ್ಮತ್ತೂರು ಇಂದುಶೇಖರ್
ಮೊ.9880820462

1			■	■	2			3		4
	■	■	5	■		■	■		■	
	■	6				■	7			
	■	■	■	■		■	■	■	■	
8		9			■	10		11		
■	■		■	■	■	■	■		■	■
12					■	13				14
	■	■	■	■	15	■	■	■	■	
16		17		■	18		19		■	
	■		■	■		■		■	■	
20						■	■	21		

ಹೆಸರು ____________
ವಿಳಾಸ ____________
____
ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ವರಾಹ ರೂಪದಿ ದೈವದ ನೆಲೆಯೀ ಈ""ಅಡವಿ" 3
2.ಹಾಡುವ ಮುರಳಿಯು ಕುಣಿಯುವ ಗೆಜ್ಜೆಯು ಎದೆಯಲಿ ಹೊಮ್ಮಿದ ಒಂದೇ ರಾಗ 6
6.ಕುಮಾರ್ ಬಂಗಾರಪ್ಪನ ಕುದುರೆ ಬಲಿ ಆಚರಣೆ 4
7.ಮದುವೆ ಮಾಡು ಎನ್ನುವ ಮುನ್ನ ಎರಡು ಬಾರಿ ಬಂದ ಹೆಂಡತಿಯ ಅಪ್ಪ 4
8.ಪಂಚ ಭೂತಗಳಿಂದ ನಿರ್ಮಿಸಿದ ಶಿಖರ 5
10.ಕೃಷ್ಣ ಭಕ್ತೆ ಅಂಗ್ಲದ ಮಲ್ಲಿಗೆ ಮುಡಿದಿದ್ದಾಳೆ. 5
12." _ _ _ _ _ ನೀ ದಾನಿಯಾದೆ ಇನ್ನೊಂದು ಜೀವಕೆ ಆಧಾರವಾದೆ ..." 5
13.ಶಂಕರ್ ನಾಗ್ ಜಯಮಾಲಾಗೆ ಇಟ್ಟ ನೆತ್ತರಿನ ಬೊಟ್ಟು 5
16.ಟೈಗರ್ ಪ್ರಭಾಕರ್ ಸೆರೆಯಿಂದ ಬಿಡುಗಡೆಯಾಗಲು ಕೆ.ವಿ.ರಾಜು ನಿರ್ದೇಶಕ 4
18.ಕಿಚ್ಚ ಸುದೀಪನ ದೈವ ಸನ್ನಿಧಿ ಹೊರ ರಾಜ್ಯದಲ್ಲಿದೆ. 4
20. ಪಾಕ ಪ್ರವೀಣನ ಜೊತೆ ವಿದರ್ಭ ಸಾಮ್ರಾಜ್ಯದ ರಾಜಕುಮಾರಿ 6
21ಪ್ರಜ್ವಲ್ ದೇವರಾಜ್ "ಸೇವಕ" 3

ವಿಜೇತರು: ಜೀವನ್ ಜಿ., ಕುಂಬಾರಕೊಪ್ಪಲು, ಮೈಸೂರು

ಸಿನಿ ಪದಬಂಧ 030ರ ಸರಿ ಉತ್ತರ

ಭು	ವ	ನೇ	ಶ್ವ	ರಿ	■	ಸಾ	ಕಿ	ದಾ	ಗಿ	ಣಿ
■	ನ	■	■	■	ಗ	■	■	■	ರಿ	■
■	ದೇ	■	■	ವಿ	ಜ	ಯ್	■	■	ಬಾ	■
■	ವಿ	ನೋ	ದ	■	■	■	ಅ	ಬ	ಲೆ	■
ಪೂ	■	■	ಶಾ	■	ಹಂ	■	ನಂ	■	■	ಕ
ಜಾ	ಣ	■	ವ	ಸಂ	ತ	ಗೀ	ತ	■	ಗು	ರಿ
ರಿ	■	■	ತಾ	■	ಕ	■	ಪ್ರೇ	■	■	ಯ
■	ಅ	ಸು	ರ	■	■	■	ಮ	ಯೂ	ರ	■
■	ಡ್ಡ	■	■	ಅ	ದೃ	ಷ್ಟ	■	■	ವಿ	■
■	ದಾ	■	■	■	ಶ್ಯ	■	■	■	ಮಾ	■
ಚೂ	ರಿ	ಚಿ	ಕ್ಕ	ಣ್ಣ	■	ಗಾ	ಜಿ	ನ	ಮ	ನೆ

ಮೇಲಿನಿಂದ ಕೆಳಕ್ಕೆ

1.ಶಿವರಾಜ್ ಕುಮಾರ್ ಗೆ ಎತ್ತರದಿ ಕಾಣಿಸಿ ಕೊಂಡ ಪರ್ವತ 5
2.ಗಜದ ನಡುವೆ ಕೃಷ್ಣನ ಪ್ರೇಯಸಿ ಬಂದರೆ ಚಿತ್ರವೊಂದು ಪ್ರತ್ಯಕ್ಷ ! 4
3.ನಾಗ ಕಾಳನೊಂದಿಗೆ ಬಂದವನು 3
4.ಹೊಯ್ಸಳರ ದೊರೆಯಲ್ಲ...ಚಿತ್ರರಂಗಕ್ಕೆ ಒಬ್ಬನೇ ಸಿಂಹ 5
5.ಶಿವಣ್ಣ – ಸುಚಿತ್ರಾ ಕೃಷ್ಣಮೂರ್ತಿ ಅಭಿನಯದ ಚಿತ್ರ 2
9.ಆಂಗ್ಲದಲ್ಲಿ ಹೋಗು ಎನ್ನಲು ಉಪೇಂದ್ರನಿಗೆ ಸಿಕ್ಕ ಶಿವ ಸಮರ್ಪಿತ ಸ್ಥಳ 3
11.ಜಾತಿಯ ನಡುವೆ ಬಂದಾಗ ಎಚ್ಚರವಿರಲಿ 3
12.ಶಶಿಕುಮಾರ್ – ಜಯಪ್ರದಾ ಅಭಿನಯದ ಚಿತ್ರ 5
14.ಹಂಗು, ಅತಿಥಿ ಮತ್ತು ಮುನಿತಾಯಿ ಮಿಲನಗೊಂಡಿದೆ 5
15.ಸದ್ದಿಲ್ಲದೆ ನಡೆಸಿದ ಆಂದೋಲನ 4
17.ಮುರಾರಿಯೊಂದಿಗೆ ಬಂದವನು 3
19.ಸುನಿಲ್ ಕುಮಾರ್ ದೇಸಾಯಿ ಉಣ ಬಡಿಸಿದ ಸಂಗೀತದ ಹಬ್ಬ 2

ಅವಕಾಶ ಸಿಕ್ಕರೆ ವಿಶ್ವಕರ್ಮ ಸಮಾಜಕ್ಕೆ ಶಕ್ತಿ ತುಂಬುವ ಕೆಲಸ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ



> ಸಮಾಜಕ್ಕೆ ವಿಶ್ವಕರ್ಮ ಸಮಾಜದ ಕೊಡುಗೆ ಅಪಾರ. ದುಡಿಮೆಯಲ್ಲಿ ಅಪಾರ ನಂಬಿಕೆ ಇಟ್ಟಿರುವ ವಿಶ್ವಕರ್ಮ ಸಮಾಜದವರನ್ನು ನಾಡಿನ ಅನೇಕ ರಾಜರು ಪೋಷಿಸಿದ್ದಾರೆ. ವಿಶ್ವಕರ್ಮ ಸಮುದಾಯದವರಿಲ್ಲದಿದ್ದರೇ ನಾಡು ಬರಡಾಗುತ್ತಿತ್ತು. ವಿಶ್ವಕರ್ಮರನ್ನು ಶರಣರನ್ನಾಗಿ ಪರಿವರ್ತಿಸಿದವರು ಬಸವಣ್ಣನವರು. ವಿಶ್ವಕರ್ಮ ಜನಾಂಗದವರು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಮುಂದಾಗಬೇಕು.
> – ಜಿ.ಟಿ.ದೇವೇಗೌಡ, ಶಾಸಕ.

ಹೆಚ್.ಡಿ.ಕೋಟೆ, ಅ.27– ಮುಂದೆ ಅವಕಾಶ ಸಿಕ್ಕರೆ ವಿಶ್ವಕರ್ಮ ಸಮಾಜಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ವಿಶ್ವಕರ್ಮ ಸಮಾಜದಿಂದ ನಡೆದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮುದಾಯಕ್ಕೆ ವಿಶೇಷ ನೈಪುಣ್ಯತೆ ಇದ್ದು, ಸಮುದಾಯದವರು ಕಾಯಕದಲ್ಲಿ ತೊಡಗಿದ್ದರಿಂದ ಶಿಕ್ಷಣ ಪಡೆದವರ ಸಂಖ್ಯೆ ಕಡಿಮೆಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾಗಿದ್ದು, ಈ ವೇಳೆ ಕೆಲವರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ಸಿಕ್ಕಿದೆ. ಇನ್ನೂ ಕೆಲವರಿಗೆ ಸಿಕ್ಕಿಲ್ಲ ಎಂದ ಅವರು, ವಿಶ್ವಕರ್ಮ ಸಮಾಜದವರು ಮಾಡುವ ಕಾಯಕದಲ್ಲಿ ವಿಶೇಷ ಜ್ಞಾನ ಸಂಪಾದಿಸಿದ್ದಾರೆ ಎಂದರು.

ನಿಮ್ಮಲ್ಲಿ ಬುದ್ಧಿವಂತರಿದ್ದಾರೆ. ಆದರೆ ಶಿಕ್ಷಣದಿಂದ ವಂಚಿತರಾಗಿದ್ದೀರಾ. ನಿಮ್ಮ ಮಕ್ಕಳು ಕೂಡ ವೈದ್ಯರು, ಶಿಕ್ಷಕರಾಗಬೇಕು. ವಿದ್ಯೆ ಯಾರಪ್ಪನ ಮನೆಯ ಸ್ವತ್ತಲ್ಲ. ನಮ್ಮ ಅಪ್ಪ ಅಮ್ಮ ವಿದ್ಯಾವಂತರಲ್ಲ. ನನಗೆ ಶಿಕ್ಷಣ ಸಿಕ್ತು ಹೀಗಾಗಿ ನಾನು ಲಾಯರ್ ಆದೆ. ಮುಖ್ಯಮಂತ್ರಿಯಾದೆ. ಸಂವಿಧಾನ ಇರದಿದ್ದರೇ ಮೋದಿ ಪ್ರಧಾನಿಯಾಗಲು ಸಾಧ್ಯವಿರಲಿಲ್ಲ. ಜಾತಿಯಿಂದ ಯಾರು ದೊಡ್ಡವರಾಗಲು ಸಾಧ್ಯವಿಲ್ಲ. ನಾನು ಸಿಎಂ ಆಗಿದ್ದಾಗ ಎಲ್ಲರಿಗೂ ಅವಕಾಶ ಮಾಡಿಕೊಟ್ಟೆ ರಾಜಕೀಯ ಅಧಿಕಾರ ಬಹಳ ಪ್ರಬಲ ಅಸ್ತ್ರ. ಹಿಂದುಳಿದ ಜಾತಿ ಒಗ್ಗಟಾಗಬೇಕು ಎಂದು ಹೇಳುವವರು ಜಾತಿವಾದಿಗಳು ಎಂದರು.

ಮುಂದೆ ನಮಗೆ ಅವಕಾಶ ಸಿಕ್ಕರೆ ವಿಶ್ವಕರ್ಮ ಸಮಾಜಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ. ವಿಶ್ವಕರ್ಮ ಸಮುದಾಯ ಭವನ ಪೂರ್ಣಗೊಳ್ಳಲು ಅಗತ್ಯವಿರುವ ಅನುದಾನ ಕೊಡುತ್ತೇವೆ. ಇಂದಿನ ಸಮಾವೇಶದಲ್ಲಿ ವಿಶ್ವಕರ್ಮ ಸಮಾಜದ ನಾಯಕರು ಇಟ್ಟಿರುವ ಎಲ್ಲಾ ಬೇಡಿಕೆಗಳು ಸಾಧ್ಯವಾಗುವುದರಿಂದ ಎಲ್ಲವನ್ನೂ ಮಾಡಿಕೊಡಲು ನಾನು ಬದ್ಧ ಎಂದರು.

ವಿಶ್ವಕರ್ಮ ಸಮುದಾಯದ ರಾಜ್ಯಾಧ್ಯಕ್ಷ ಕೆ.ಪಿ.ನಂಜುಂಡಿ ಮಾತನಾಡಿ, ಪಂಚ ಕಸಬು ಮಾಡುವ ಏಕೈಕ ಸಮಾಜ ವಿಶ್ವಕರ್ಮ. ನಾನು ಕಳೆದ 24 ವರ್ಷದಿಂದ ಸಮುದಾಯದ ಸಂಘಟನೆಯಲ್ಲಿ ತೊಡಗಿದ್ದೇನೆ. ಪ್ರಜಾಪ್ರಭುತ್ವದಲ್ಲಿ ನಮ್ಮ ಧ್ವನಿ ಗಟ್ಟಿಯಾಗಬೇಕು. ವಿಶ್ವಕರ್ಮ ಸಮುದಾಯದಲ್ಲಿ 41 ಪಂಗಡಗಳಿವೆ. ನಮ್ಮದು ಬುಡಕಟ್ಟು ಸಂಸ್ಕೃತಿಯಾಗಿದ್ದು, ಇದರ ಕುಲಶಾಸ್ತ್ರ ಅಧ್ಯಯನ ಆಗುತ್ತಿದೆ. ಹಾಗಾಗಿ ನಮ್ಮ ವಿಶ್ವಕರ್ಮ ಸಮಾಜವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು. ಅದಕ್ಕಾಗಿ ಸಂಘಟಿತರಾಗಿ ಹೋರಾಡೋಣ ಎಂದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ಹಿಂದುಳಿದ ಸಮುದಾಯಗಳು ಪ್ರಗತಿ ಹೊಂದಬೇಕಾದರೆ ಹಿಂದುಳಿದ ವರ್ಗದ ನಾಯಕ ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕು. ಹಿಂದೆ ಕೂಡ ವಿಶ್ವಕರ್ಮ ಜಯಂತಿ ಹಾಗೂ ಅಭಿವೃದ್ಧಿ ನಿಗಮ ಆಗಿದ್ದು ಕೂಡ ಸಿದ್ದರಾಮಯ್ಯ ಅವರ ಕಾಲದಲ್ಲೇ ಎಂದು ನೆನಪಿಸಿದರು.

ವಿಶ್ವಕರ್ಮ ಸಮುದಾಯ ಭವನ ನಿರ್ಮಾಣಕ್ಕೆ ನಗರೋತ್ಥಾನ ಯೋಜನೆ ಅಡಿ 14 ಲಕ್ಷ ರೂ. ನೀಡಲಾಗಿದೆ ಹಾಗೂ ಸಮುದಾಯ ವಾಸ ಮಾಡುವ ಗ್ರಾಮಗಳಿಗೆ 29 ಲಕ್ಷ ಹಾಗೂ 2.5 ಕೋಟಿ ಅನುದಾನದಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಪಡಿಸಲಾಗಿದೆ. ಮುಂದೆ ಕೂಡ ಸಮುದಾಯದ ಜೊತೆ ಸದಾ ಇರುತ್ತೇನೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಬೆಳ್ಳಿರಥದಲ್ಲಿ ವಿಶ್ವಕರ್ಮರ ಭಾವಚಿತ್ರ ಹಾಗೂ ಶ್ರೀಅನಂತ ವಿಭೂಷಿತ ಶಿವ ಸುಜ್ಞಾನ ತೀರ್ಥ ಸ್ವಾಮೀಜಿ ಅವರನ್ನು ಪಟ್ಟಣದ ಆದಿಚುಂಚನಗಿರಿ ಸಮುದಾಯ ಭವನದಿಂದ ಅಂಬೇಡ್ಕರ್ ಭವನದವರೆಗೂ ವಿವಿಧ ಕಲಾ ಪ್ರಕಾರಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ಇದೇ ವೇಳೆ ಕಾರ್ಯಕ್ರಮಕ್ಕೆ ಆಗಮಿಸಿದ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಬಾದಾಮಿ ಹಾರ, ಪೇಟ ಹಾಕಿ ಸ್ವಾಗತಿಸಿದರೇ, ತಾಲೂಕಿನ ಕಂಚಮಳ್ಳಿ ಗೇಟ್ ಬಳಿ ಶಾಸಕ ಜಿ.ಟಿ.ದೇವೇಗೌಡ, ಅವರ ಪುತ್ರ, ಜಿ.ಡಿ.ಹರೀಶ್‌ಗೌಡರಿಗೆ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಮತ್ತು ಜೆಡಿಎಸ್ ಕಾರ್ಯಕರ್ತರು ಸ್ವಾಗತ ಕೋರಿದರು. ಅಲ್ಲದೇ ಹ್ಯಾಂಡ್‌ಪೋಸ್ಟ್ ಸರ್ಕಲ್ ಬಳಿ ಜೆಸಿಬಿ ಮೂಲಕ ಬೃಹತ್ ಸೇಬಿನ ಹಾರ ಹಾಕಿ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡ, ಎಂಎಲ್‌ಸಿ ಡಾ.ತಿಮ್ಮಯ್ಯ, ಮಾಜಿ ಎಂಎಲ್‌ಸಿ ರಘು ಆಚಾರ್, ಪುರಸಭಾಧ್ಯಕ್ಷೆ ಅನಿತಾ, ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ರಾಜು ವಿಶ್ವಕರ್ಮ, ಜಯಂತೋತ್ಸವ ಸಮಿತಿ ಅಧ್ಯಕ್ಷ ವೆಂಕಟೇಶ್, ಮಹಾಸಭಾದ ಯುವ ಘಟಕದ ಅಧ್ಯಕ್ಷ ನಾಗೇಶ್, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಮುಖಂಡರುಗಳಾದ ಸತೀಶ್‌ಗೌಡ, ಸೋಮೇಶ್, ಚಿಕ್ಕವೀರ ನಾಯ್ಕ, ಶಿವಪ್ಪ ಕೋಟೆ, ಹೋಂಡಾ ನಯಾಜ್, ಸೀತಾರಾಮ್, ಎಂ.ಸಿ.ದೊಡ್ಡನಾಯಕ, ಗಣೇಶ ಆಚಾರ್, ಸಿದ್ದಪ್ಪಾಜಿ, ಮೂರ್ತಚಾರ್, ವೆಂಕಟೇಶ್, ದಾಸಚಾರಿ, ರಮೇಶ್, ಸೋಮಚಾರ್, ಡಾ.ಕೃಷ್ಣಸ್ವಾಮಿ, ನಂದಕುಮಾರ್, ರಾಜು ಎಲ್‌ಐಸಿ, ಲಿಂಗಾಚಾರ್, ನಾಗರಾಜಪ್ಪ, ಪುಟ್ಟಚಾರಿ, ಗೋಪಾಲಚಾರ್, ರಾಜಚಾರಿ ಇದ್ದರು.




ಹೆಚ್.ಡಿ.ಕೋಟೆಯಲ್ಲಿ ಗುರುವಾರ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಬಾದಾಮಿ ಹಾರ, ಪೇಟ ಹಾಕಿ ಸ್ವಾಗತಿಸಿದರೇ, ಹ್ಯಾಂಡ್‌ಪೋಸ್ಟ್ ಸರ್ಕಲ್ ಬಳಿ ಶಾಸಕ ಜಿ.ಟಿ.ದೇವೇಗೌಡ, ಅವರ ಪುತ್ರ ಜಿ.ಡಿ.ಹರೀಶ್‌ಗೌಡರಿಗೆ ಜೆಡಿಎಸ್ ಕಾರ್ಯಕರ್ತರು ಜೆಸಿಬಿ ಮೂಲಕ ಬೃಹತ್ ಸೇಬಿನ ಹಾರ ಹಾಕಿ ಸ್ವಾಗತ ಕೋರಿದರು. ಅಲ್ಲದೇ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಿದರು.

ಶ್ರೀಕಂಠೇಶ್ವರನಿಗೆ ನೂತನ ಡಿಸಿ ವಿಶೇಷ ಪೂಜೆ



ನಂಜನಗೂಡು, ಅ.27– ನಗರದ ಶ್ರೀಕಂಠೇಶ್ವರ ದೇವಾಲಯಕ್ಕೆ ನೂತನ ಜಿಲ್ಲಾಧಿಕಾರಿ ಡಾ.ಆರ್.ಕೆ. ರಾಜೇಂದ್ರ ಅವರು ಕುಟುಂಬ ಸಮೇತರಾಗಿ ಭೇಟಿ ನೀಡಿ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ದೇವಾಲಯದ ವತಿಯಿಂದ ಅವರನ್ನು ಪೂರ್ಣಕುಂಭ ನಾದಸ್ವರಗಳೊಂದಿಗೆ ಸ್ವಾಗತಿಸಲಾಯಿತು. ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ ಸ್ವಲ್ಪ ಕಾಲ ಧ್ಯಾನಸಕ್ತರಾದ ಅವರು, ನಂತರ ಪಾರ್ವತಿ ದೇವಿ ದರ್ಶನ ಪಡೆದು ಅರ್ಚನೆ ಸಲ್ಲಿಸಿದರು. ದೇವಾಲಯದಿಂದ ಅವರಿಗೆ ಶೇಷ ವಸ್ತ್ರ ನೀಡಿ ಗೌರವಿಸಲಾಯಿತು. ಈ ವೇಳೆ ತಹಸೀಲ್ದಾರ್ ಎಂ.ಶಿವಮೂರ್ತಿ, ದೇವಾಲಯದ ಇಓ ಎಂ.ಜಗದೀಶ್, ಕಂದಾಯಾಧಿಕಾರಿ ಪ್ರಕಾಶ್, ದೇವಾಲಯದ ಪ್ರಧಾನ ಅರ್ಚಕ ನಾಗೇಂದ್ರ ದೀಕ್ಷಿತ್ ಇದ್ದರು.



ಕಂಪಲಾಪುರದ ಹೊರವಲಯದಲ್ಲಿರುವ ಬಸಲಾಪುರ ಗೇಟ್ ವಾಸಿಗಳಿಗೆ ನಿರಂತರ ವಿದ್ಯುತ್ ಸಂಪರ್ಕಕ್ಕೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಸೆಸ್ಕ್ ಎಇಇ ಸುನಿಲ್ ಯಾದವ್, ಜೆಇ ಚಂದ್ರಶೇಖರ್, ನಾಗೇಗೌಡ, ಕೆ.ಕುಮಾರ್, ಜಯಣ್ಣ, ಕೆ.ಎಂ.ಲಕ್ಷ್ಮಣ್, ಅಣ್ಣಯ್ಯಶೆಟ್ಟಿ ಪಿಡಿಓ ಪರಮೇಶ್ ಮತ್ತಿತರರು ಇದ್ದರು.

ನ.1ರಂದು ಕನ್ನಡ ರಾಜ್ಯೋತ್ಸವ


ಮೈಸೂರು, ಅ.27– ಜಿಲ್ಲಾಡಳಿತ ವತಿಯಿಂದ ಕನ್ನಡ ರಾಜ್ಯೋತ್ಸವ ಅಂಗವಾಗಿ ನವೆಂಬರ್ 01 ರಂದು ಬೆಳಗ್ಗೆ 8.30 ಗಂಟೆಗೆ ಮೈಸೂರು ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಕರ್ ಅವರು ಧ್ವಜಾರೋಹಣ ನೆರವೇರಿಸಿ ಭುವನೇಶ್ವರಿ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಕನ್ನಡ ರಾಜ್ಯೋತ್ಸವ ಸಂದೇಶವನ್ನು ನೀಡುವರು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅಧಿಕಾರ ಸ್ವೀಕಾರ ಹಿನ್ನೆಲೆ

ತಿ.ನರಸೀಪುರದಲ್ಲಿ ಕಾಂಗ್ರೆಸ್ ಸಂಭ್ರಮಾಚರಣೆ

ಖರ್ಗೆ ರಾಜಕೀಯ ಅನುಭವ ನಮಗೆಲ್ಲರಿಗೂ ದಾರಿದೀಪ: ಸುನೀಲ್ ಬೋಸ್

ತಿ.ನರಸೀಪುರ ಅ.27– ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವ ಮೂಲಕ ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಯ್ಕೆ ಮಾಡಿರುವ ಕಾಂಗ್ರೆಸ್ ಪಕ್ಷ ದೇಶದಲ್ಲಿ ಪ್ರಜಾಪ್ರಭುತ್ವಕ್ಕೆ ಬಲ ತುಂಬಿದೆ ಎಂದು ಯುವ ಮುಖಂಡ ಸುನೀಲ್ ಬೋಸ್ ತಿಳಿಸಿದರು.



ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅಧಿಕಾರ ಸ್ವೀಕರಿಸುತ್ತಿದ್ದಂತೆ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರು ಹಾಗೂ ಮುಖಂಡರೊಂದಿಗೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಮಾತನಾಡಿದ ಅವರು, ಸಂವಿಧಾನದ ಆಶಯಗಳಿಗೆ ತಕ್ಕಂತೆ ಆರೇಳು ದಶಕಗಳ ಕಾಲ ದೇಶವನ್ನು ಆಳ್ವಿಕೆ ನಡೆಸಿದ ಕಾಂಗ್ರೆಸ್ ಪಕ್ಷ ಬಲಿಷ್ಠ ಭಾರತವನ್ನು ನಿರ್ಮಾಣ ಮಾಡಿದೆ. ದಲಿತ ಸಮುದಾಯದ ನಾಯಕರಿಗೆ ಉನ್ನತ ಹುದ್ದೆ ನೀಡಿದ ಕೀರ್ತಿಗೆ ಪಕ್ಷ ಭಾಜನವಾಗಿದೆ ಎಂದರು.

ಸಾಮಾನ್ಯ ಕಾರ್ಯಕರ್ತರಾಗಿ ಪಕ್ಷದಲ್ಲಿ ನಿಷ್ಠೆಯಿಂದ ದುಡಿದ ಮಲ್ಲಿಕಾರ್ಜುನ ಖರ್ಗೆ ಅವರು ಶಾಸಕ, ಸಂಸದ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸಚಿವರಾಗಿ, ಶಿಸ್ತಿನ ಸಿಪಾಯಿಯಂತೆ ದುಡಿದಿದ್ದಾರೆ. ಅಂತಹ ಸಾಮಾನ್ಯ ನಾಯಕರು ಈಗ ರಾಷ್ಟ್ರೀಯ ಅಧ್ಯಕ್ಷ ಹುದ್ದೆಯನ್ನು ಸಮರ್ಥವಾಗಿ ನಿರ್ವಹಿಸುವ ಹೊಣೆ ಹೊತ್ತುಕೊಂಡಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ. ಅವರ ರಾಜಕೀಯ ಅನುಭವ ನಮಗೆಲ್ಲರಿಗೂ ದಾರಿದೀಪ ಎಂದು ಸಂತಸ ವ್ಯಕ್ತಪಡಿಸಿದರು.

ದೀಪಾವಳಿ ಹಬ್ಬದ ಸಂಭ್ರಮದ ನಡುವೆಯೂ ಸುನೀಲ್ ಬೋಸ್ ನೇತೃತ್ವದಲ್ಲಿ ಜಮಾವಣೆಗೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟಾಕಿ ಸಿಡಿಸಿ, ಸಿಹಿಯನ್ನು ವಿತರಿಸಿ ಸಂಭ್ರಮಾಚರಣೆ ಮಾಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಬಿ.ಚನ್ನಕೇಶವ, ಎಪಿಎಂಸಿ ಮಾಜಿ ನಿರ್ದೇಶಕ ಬಸವಣ್ಣ, ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ, ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜು, ಕಾರ್ಯಾಧ್ಯಕ್ಷ ಮಾದೇಶ, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ್, ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ಗಣೇಶ, ರಾಮಲಿಂಗಯ್ಯ, ಶಿವಸ್ವಾಮಿ, ರಂಗಸ್ವಾಮಿ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಉಪಾಧ್ಯಕ್ಷ ಬಿ.ಎಂ.ಲಿಂಗರಾಜು, ಗ್ರಾಪಂ ಅಧ್ಯಕ್ಷ ಡಿ.ಜಯರಾಮು, ಲಕ್ಷ್ಮಣ, ಮಾಜಿ ಅಧ್ಯಕ್ಷ ನಾಗಣ್ಣ, ಆರ್.ಸೋಮಣ್ಣ, ಗುರುಮೂರ್ತಿ, ಸದಸ್ಯ ಮಾದೇಶ, ಮೈಮುಲ್ ಮಾಜಿ ನಿರ್ದೇಶಕ ಕೆ.ಬಿ.ಪ್ರಭಾಕರ, ಕಾಡ ಮಾಜಿ ನಿರ್ದೇಶಕ ನವೀನ, ಮುಖಂಡರಾದ ಡಾ.ಕೆ.ಎನ್. ಬಸವರಾಜು, ಶಿವಮೂರ್ತಿ, ಮಲ್ಲೇಶ, ಸಿದ್ದಶೆಟ್ಟಿ, ಮಹದೇವಸ್ವಾಮಿ, ಅನುಪ್‌ಗೌಡ, ಗುರುಮಲ್ಲ ಇನ್ನಿತರರಿದ್ದರು.

> ಎಐಸಿಸಿ ಹುದ್ದೆಗೆ ಮಲ್ಲಿಕಾರ್ಜುನ ಖರ್ಗೆ ಆಯ್ಕೆ ಯುವ ನಾಯಕ ರಾಹುಲ್ ಗಾಂಧಿ ಭಾರತ್ ಜೋಡೋ ಯಶಸ್ವಿ ಯಾತ್ರೆ, ರಾಜ್ಯದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರ ನೇತೃತ್ವದಲ್ಲಿ ಪಕ್ಷ ಬಲಗೊಳ್ಳುತ್ತಿರುವುದರಿಂದ ಕೇಂದ್ರ ಹಾಗೂ ರಾಜ್ಯದಲ್ಲಿ ಕಾಂಗ್ರೆಸ್ ಜನಾಶೀರ್ವಾದ ಪಡೆಯುವ ಮೂಲಕ ಮತ್ತೆ ಗತವೈಭವಕ್ಕೆ ಮರಳಲಿದೆ.
> – ಸುನೀಲ್ ಬೋಸ್ ಯುವ ಮುಖಂಡ.

ಹುಣಸೂರು ನಗರಸಭೆ ಸಾಮಾನ್ಯ ಸಭೆ

ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಸದಸ್ಯರು

ಸಭೆಯಲ್ಲಿ ಹಲವು ಸಮಸ್ಯೆಗಳ ಪ್ರಸ್ತಾಪ: ಸೂಕ್ತ ಕ್ರಮಕ್ಕೆ ಒತ್ತಾಯ

ಹುಣಸೂರು, ಅ.27– ಇಲ್ಲಿನ ನಗರಸಭಾಧ್ಯಕ್ಷೆ ಗೀತಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅಕ್ರಮ ಖಾತೆ, ಅರ್ಹರಿಗೆ ಮೂಲ ಸೌಕರ್ಯ ಕಲ್ಪಿಸದಿರುವುದು ಸೇರಿದಂತೆ ಇನ್ನಿತರ ಸಮಸ್ಯೆಗಳ ಕುರಿತು ಸದಸ್ಯರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.



ಇಲ್ಲಿನ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಿದ ವೇಳೆ ನಗರದ ಸುತ್ತಮುತ್ತಲಿನ ಗ್ರಾಪಂಗಳ ಆಸ್ತಿ ದಾಖಲೆ ವರ್ಗಾವಣೆ ಮಾಡುವ ಸಂದರ್ಭ ಅಕ್ರಮ ಖಾತೆಗಳನ್ನು ಮಾಡಲಾಗಿದೆ ಎಂದು ಆರೋಪಿಸಿದ ಸದಸ್ಯ ಮಂಜು, ಮುಂದಿನ ದಿನಗಳಲ್ಲಿ ಗ್ರಾಪಂ, ನಗರಸಭೆ ಅಧಿಕಾರಿಗಳು ಜಂಟಿ ಸರ್ವೇ ನಡೆಸಿ ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಗ್ರಾಪಂನಿಂದ ನಗರಸಭೆಗೆ ಹಸ್ತಾಂತರವಾದ ನಗರದ ಚಿಕ್ಕಹುಣಸೂರು ಬಡಾವಣೆ ಬಹುತೇಕ ಮನೆಗಳಿಗೆ ಖಾತೆ ಇಲ್ಲ. ಆಸ್ತಿ ಸರ್ವೇ ಮಾಡಿಲ್ಲ ಇದರಿಂದ ಇಲ್ಲಿನ ನಿವಾಸಿಗಳು ಸರ್ಕಾರದ ಸವಲತ್ತುಗಳಿಂದ ವಂಚಿತರಾಗುತ್ತಿದ್ದಾರೆ. ಈಗಲಾದರೂ ನಗರಸಭೆ ಆಯುಕ್ತರು, ಆರ್‌ಐ ಹಾಗೂ ಗ್ರಾಪಂ ಅಧಿಕಾರಿಗಳು ಜಂಟಿ ಸರ್ವೇ ನಡೆಸಿ, ಅರ್ಹ ಫಲಾನುಭವಿಗಳ ದಾಖಲಾತಿ ಸರಿಪಡಿಸಬೇಕು. ಅಲ್ಲದೇ ಮಿಡಲ್ ಎಂಟ್ರಿ ಮೂಲಕ ಆಗಿರುವ ಅಕ್ರಮ ಖಾತೆ ವಜಾ ಮಾಡಬೇಕೆಂದು ಒತ್ತಾಯಿಸಿದರು.

ನಗರಸಭೆ ವ್ಯಾಪ್ತಿಯ ಬೀದಿ ದೀಪ ನಿರ್ವಹಣೆ ಮಾಡುತ್ತಿದ್ದ ಗಂಜಾಂ ಶಿವು ಅವರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಅವರನ್ನು ಬ್ಲಾಕ್ ಲೀಸ್ಟ್‌ಗೆ ಸೇರಿಸುವಂತೆ ಹಲವು ಸಭೆಯಲ್ಲಿ ನಿರ್ಣಯ ಕೈಗೊಂಡರೂ, 2022– 23ನೇ ಸಾಲಿನ ಬೀದಿ ದೀಪ ನಿರ್ವಹಣೆಯನ್ನು ಅಧಿಕಾರಿಗಳು ಅವರಿಗೆ ನೀಡಿದ್ದಾರೆ. ಹೀಗಾಗಿ ಅದನ್ನು ವಜಾ ಮಾಡಿ ಹೊಸಬರಿಗೆ ನೀಡಬೇಕು ಎಂದು ಸದಸ್ಯರು ಒತ್ತಾಯಿಸಿದರು.

ನಗರಸಭೆ ವ್ಯಾಪ್ತಿಯ ವಾಣಿಜ್ಯ ಮಳಿಗೆಗಳು ಹರಾಜಾಗಿ ಅನೇಕ ತಿಂಗಳಾದರೂ ಈವರೆಗೂ ಬಾಡಿಗೆ ವಸೂಲಾಗಿಲ್ಲ. ಕರಾರು ಪತ್ರಗಳಾಗಿಲ್ಲ. ಇದರಿಂದ ನಗರಸಭೆಗೆ ಲಕ್ಷಾಂತರ ರೂ. ನಷ್ಟವಾಗುತ್ತಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಬಹುತೇಕ ಸದಸ್ಯರು ಒತ್ತಾಯಿಸಿದರು.

> **ಅಧಿಕಾರಿಗಳಿಂದಲೇ ಬಾಕಿ ಬಾಡಿಗೆ ವಸೂಲಿ ಮಾಡಿ**
> ನಗರಸಭೆ ಅಧೀನದಲ್ಲಿರುವ ಆಕಾಶ್ ಜನತಾ ಚಿತ್ರಮಂದಿರದ ಬಾಡಿಗೆ 1.34 ಕೋಟಿ ಬಾಕಿ ಇದ್ದು, ಅಧಿಕಾರಿಗಳು ಬಾಡಿಗೆ ವಸೂಲಿಗೆ ಮುಂದಾಗಿಲ್ಲ. ಚಿತ್ರಮಂದಿರ ಗುತ್ತಿಗೆ ಪಡೆದಿರುವ ಗುತ್ತಿಗೆದಾರ ನಗರದ ಲೀಲಾ ಚಿತ್ರಮಂದಿರ ನಡೆಸುತ್ತಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಬಾಡಿಗೆ ವಸೂಲಿ ಮಾಡದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಅವರಿಂದಲೇ ಬಾಕಿ ಬಾಡಿಗೆ ವಸೂಲಿ ಮಾಡಿ ಎಂದು ಸದಸ್ಯರಾದ ರಮೇಶ್, ಶರವಣ, ಮಾಲೀಕ್ ಪಾಷ, ಸ್ವಾಮಿಗೌಡ, ಕೃಷ್ಣರಾಜಗುಪ್ತ ತಿಳಿಸಿದರು.

ನಗರ ವ್ಯಾಪ್ತಿಯಲ್ಲಿ ವಸತಿ ಉದ್ದೇಶಕ್ಕೆ ಅನುಮತಿ ಪಡೆದು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿ ನಗರಸಭೆ ಆದಾಯಕ್ಕೆ ನಷ್ಟ ಉಂಟು ಮಾಡುತ್ತಿರುವ ಬಗ್ಗೆ ಸದಸ್ಯರು ಅಧಿಕಾರಿಗಳ ಗಮನಕ್ಕೆ ತಂದು ಇಂತಹ ವಾಣಿಜ್ಯ ಕೇಂದ್ರಗಳನ್ನು ಪತ್ತೆ ಮಾಡಿ ದಾಖಲೆ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ವೇಳೆ ಸಭೆಯಲ್ಲಿ ಮೈಮುಲ್ ಕೇಂದ್ರಗಳಿಂದ ಬಾಡಿಗೆ ವಸೂಲಿಯಾಗದಿರುವುದು, ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಹದಗೆಟ್ಟಿರುವ ರಸ್ತೆ ದುರಸ್ತಿ ಸೇರಿದಂತೆ ರಾಷ್ಟ್ರೀಯ ಹೆದ್ದಾರಿ ಪಕ್ಕ ಪರವಾನಗಿ ಪಡೆಯದೇ ಕಟ್ಟಡ ನಿರ್ಮಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸದಸ್ಯರು ಒತ್ತಾಯಿಸಿದರು.

ಹುಡಾಗೆ ಸ್ವಾಮಿಗೌಡ ನೇಮಕ: ಹುಣಸೂರು ನಗರ ಯೋಜನಾ ಪ್ರಾಧಿಕಾರದಲ್ಲಿ ನಗರಸಭೆಯಿಂದ ಪ್ರತಿನಿಧಿಸುತ್ತಿದ್ದ ಸದಸ್ಯ ಹೆಚ್.ಪಿ.ಸತೀಶ್ ಅವರನ್ನು ಬದಲಾಯಿಸಿ 5ನೇ ವಾರ್ಡ್ ಸದಸ್ಯ ಸ್ವಾಮಿಗೌಡ ಅವರನ್ನು ನೂತನ ಸದಸ್ಯರನ್ನಾಗಿ ಅಧ್ಯಕ್ಷೆ ಗೀತಾ ಘೋಷಿಸಿದರು.

ಸಭೆಯಲ್ಲಿ ಪ್ರಭಾರ ಪೌರಾಯುಕ್ತೆ ರೂಪ, ಉಪಾಧ್ಯಕ್ಷೆ ಆಶಾ, ಆರೋಗ್ಯ ನಿರೀಕ್ಷಕರಾದ ಸತೀಶ್, ಲೀಲಾ, ಕಂದಾಯ ಅಧಿಕಾರಿ ಪಂಪಾಶ್ರೀ, ಕಂದಾಯ ನಿರೀಕ್ಷಕ ಸಿದ್ದರಾಜು, ಅಭಿಯಂತರಾದ ಲೋಕೇಶ್, ಶರ್ಮಿಳಾ, ಮುಖ್ಯಲೆಕ್ಕಾಧಿಕಾರಿ ಪುಟ್ಟರಾಜು ಇತರರಿದ್ದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಬೆ.10.30ಕ್ಕೆ, ಮ.1.25ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ.
ಸ್ಕ್ರೀನ್ 2	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.25ಕ್ಕೆ, ಹೆಡ್ ಬುಷ್(ಕ): 10.40ಕ್ಕೆ, ಮ.1.25ಕ್ಕೆ, ಕಾಂತಾರ (ಕ): ಸಂ.4.10ಕ್ಕೆ, 9.50ಕ್ಕೆ, ರಾಮ್ ಸೇತು (ಹಿಂ): ರಾ.7ಕ್ಕೆ.
ಸ್ಕ್ರೀನ್ 3	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.35ಕ್ಕೆ, ಮ.1.20ಕ್ಕೆ, ಮ.3.25ಕ್ಕೆ, ಸಂ.5.30ಕ್ಕೆ, ರಾ.7.35ಕ್ಕೆ, ಬ್ಲ್ಯಾಕ್ ಆಡಮ್ (ಇಂ): ಬೆ.10.45ಕ್ಕೆ, ಕಾಂತಾರ (ಕ): ರಾ.9.55ಕ್ಕೆ.
ಸ್ಕ್ರೀನ್ 4	ಗಂಧದಗುಡಿ (ಕ): ಬೆ.6.20ಕ್ಕೆ, ಬೆ.8.20ಕ್ಕೆ, ಬೆ.10.15ಕ್ಕೆ, ಮ.12.15ಕ್ಕೆ, ಮ.2.15ಕ್ಕೆ, ಸಂ.4.15ಕ್ಕೆ, ಸಂ.6.15ಕ್ಕೆ, ರಾ.8.15ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ರಾಮ್‌ಸೇತು (ಹಿಂ): ಬೆ.9.20ಕ್ಕೆ, ಕಾಂತಾರ (ಕ): ಮ.12.15ಕ್ಕೆ, ಮ.3.20ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 2	ಗಂಧದಗುಡಿ (ಕ): ಬೆ.9ಕ್ಕೆ, ಬೆ.11.05ಕ್ಕೆ, ಮ.1.10ಕ್ಕೆ, ಮ.3.20ಕ್ಕೆ, ರಾ.8.20ಕ್ಕೆ, ರಾ.10.30ಕ್ಕೆ, ಹೆಡ್ ಬುಷ್ (ಕ): ಸಂ.5.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, ಥ್ಯಾಂಕ್ ಗಾಡ್ (ಹಿಂ): ಮ.1.10ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.45ಕ್ಕೆ, ಹೆಡ್ ಬುಷ್ (ಕ): ಮ.1.45ಕ್ಕೆ, ರಾಮ್ ಸೇತು (ಹಿಂ): ಸಂ.4.35ಕ್ಕೆ, ರಾ.10.10ಕ್ಕೆ, ಥ್ಯಾಂಕ್ ಗಾಡ್ (ಹಿಂ): ರಾ.7.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೂ ನಾಟಕ ಮಂಡಳಿ(ಕ): ಬೆ.10.20ಕ್ಕೆ, ಸರ್ದಾರ್ (ತ): ಮ.12.40ಕ್ಕೆ, ಪ್ರಿನ್ಸ್ (ತ): ಮ.3.50ಕ್ಕೆ, ಸಂ. 6.40ಕ್ಕೆ ಮಾನ್ಸ್ಟರ್ (ಮ): ರಾ.9.30ಕ್ಕೆ
ಸ್ಕ್ರೀನ್ 2	ಕಾಂತಾರ (ಕ): ಬೆ.10.15ಕ್ಕೆ, ಸಂ. 4ಕ್ಕೆ, ಹೆಡ್ ಬುಷ್ (ಕ): ಮ.1.10ಕ್ಕೆ, ಸಂ.7ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಹೆಡ್ ಬುಷ್ (ಕ): ಬೆ.10ಕ್ಕೆ, ಮ.3.55ಕ್ಕೆ, ಕಾಂತಾರ (ಕ): ಮ.1ಕ್ಕೆ, ಸ.6.40ಕ್ಕೆ, 9.45ಕ್ಕೆ
ಸ್ಕ್ರೀನ್ 4	ಕಥಾನಾಯಕ (ಕ): ಬೆ.10.15ಕ್ಕೆ, ಪ್ರಿನ್ಸ್ (ತ): ಮ.1ಕ್ಕೆ, ಸರ್ದಾರ್ (ತ): ಮ. 3.55ಕ್ಕೆ, ಮಾನ್ಸ್ಟರ್ (ಮ): ಸಂ.7.05ಕ್ಕೆ, ಸರ್ದಾರ್ (ತ): ರಾ. 9.45ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಗಂಧದಗುಡಿ (ಕ)	6 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಥ್ಯಾಂಕ್ ಗಾಡ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಸರ್ದಾರ್ (ತ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	5 ಪ್ರದರ್ಶನಗಳು
ಲಿಡೋ	
ಹೆಡ್ ಅಂಡ್ ಬುಷ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾಮ್ ಸೇತು (ಹಿಂ)	4 ಪ್ರದರ್ಶನಗಳು
ಪ್ರಭಾ	
ತೋತಾಪುರಿ (ಕ)	4 ಪ್ರದರ್ಶನಗಳು

ಸಂಕಷ್ಟಗಳ ನಿವಾರಣೆಗೆ ಆಧ್ಯಾತ್ಮಿಕ ಚಿಂತನೆ ಅಗತ್ಯ

ನಿವೃತ್ತ ಲೀಡ್ ಬ್ಯಾಂಕ್ ಪ್ರಬಂಧಕ ಪ್ರದ್ಯುಮ್ನ



ಪಿರಿಯಾಪಟ್ಟಣ, ಅ.27– ಆಧ್ಯಾತ್ಮಿಕ ಚಿಂತನೆಯಲ್ಲಿ ತೊಡಗಿದಾಗ ಮಾತ್ರ ನಾವು ಸಂಕಷ್ಟಗಳಿಂದ ದೂರಾಗಬಹುದು ಎಂದು ನಿವೃತ್ತ ಲೀಡ್ ಬ್ಯಾಂಕ್ ಪ್ರಬಂಧಕ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರ ಕೆ.ಪಿ.ಪ್ರದ್ಯುಮ್ನ ಅಭಿಪ್ರಾಯಪಟ್ಟರು.

ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಶ್ರೀಸತ್ಯನಾರಾಯಣ ಪೂಜಾ ಸಮಿತಿ ಹಾಗೂ ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟ ಹಿಟ್ನೆ ಹೆಬ್ಬಾಗಿಲು ವಲಯ ಇವರ ಜಂಟಿ ಆಶ್ರಯದಲ್ಲಿ ನಡೆದ ಸಾಮೂಹಿಕ ಶ್ರೀಸತ್ಯನಾರಾಯಣ ಪೂಜೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ನಾವು ಕೇವಲ ಹಣಕಾಸಿನ ವಿಚಾರಕ್ಕೆ ಹೆಚ್ಚು ಒತ್ತು ನೀಡುತ್ತಾ ಧಾರ್ಮಿಕ ಚಿಂತನೆಗಳಿಂದ ದೂರವಾಗುತ್ತಿದ್ದೇವೆ. ಆದ್ದರಿಂದ ನಮಗೆ ಶ್ರೇಯಸ್ಸು, ಆರೋಗ್ಯಪೂರ್ಣ ಸಂಸ್ಕಾರ ಬೆಳೆಯದೆ ಹೊಸ ಬದುಕು ದೂರವಾಗುತ್ತಿದೆ ಎಂದರು.

ನಾವು ಎಷ್ಟೇ ಸಂಕಷ್ಟದಿಂದ ಜೀವನ ನಡೆಸುತ್ತಿದ್ದರೂ, ಧರ್ಮನಿಷ್ಠರಾಗಿ ಕಾರ್ಯ ಪ್ರವೃತ್ತರಾದಾಗ ಮಾತ್ರ ನಾವು ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ. ನಾವು ಯಾವಾಗಲೂ ಏನನ್ನು ಆಲೋಚಿಸುತ್ತಿರುತ್ತೇವೆಯೋ ಹಾಗೆ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಅದೇ ರೀತಿ ನಾವು ಮಾಡುವ ಆಲೋಚನೆಗಳಿಂದ ನಮ್ಮ ಕರ್ಮ ಪ್ರೇರೇಪಿತವಾಗಿರುತ್ತದೆ. ನಾವು ಮಾಡುವ ಕರ್ಮಗಳಿಂದ ಸಂಸ್ಕಾರ ಉಂಟಾಗುತ್ತದೆ. ಅದರಿಂದ ಚಾರಿತ್ರ್ಯವೂ ರೂಪುಗೊಳ್ಳುತ್ತದೆ. ಅದನ್ನೇ ನಾವು ವ್ಯಕ್ತಿತ್ವವೆಂದು ಕರೆಯುತ್ತೇವೆ. ನಮ್ಮ ಯಶಸ್ಸು, ಕೀರ್ತಿ–ಅಪಕೀರ್ತಿಗಳು ನಮ್ಮ ವ್ಯಕ್ತಿತ್ವದ ಮೇಲೆ ನಿರ್ಧಾರವಾಗಿರುತ್ತವೆ. ಆದ್ದರಿಂದ ಆಲೋಚನೆ, ಚಿಂತನೆಗಳಿಗೆ ತಕ್ಕಂತೆ ನಾವು ಕೆಲಸ–ಕಾರ್ಯಗಳನ್ನು ನಿರ್ವಹಿಸಬೇಕು ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಾದೇಶಿಕ ನಿರ್ದೇಶಕ ವಸಂತ ಸಾಲಿಯಾನ ಮಾತನಾಡಿದರು. ಮಾಧವ ಶರ್ಮಾ ಸತ್ಯನಾರಾಯಣ ಪೂಜೆ ನೆರವೇರಿಸಿದರು. ಸಮಾರಂಭದಲ್ಲಿ ಪೂಜಾ ಸಮಿತಿ ಅಧ್ಯಕ್ಷ ಯಾದವ ಚಾರ್, ಧರ್ಮಸ್ಥಳ ಯೋಜನೆ ಪ್ರಾದೇಶಿಕ ನಿರ್ದೇಶಕಿ ಲೀಲಾವತಿ, ಸಂಘ ಪರಿವಾರದ ಮುಖಂಡರಾದ ಷಣ್ಮುಖರಾವ್, ದರ್ಶನ್ ಅಭಿಮಾನಿಗಳ ಸಂಘದ ತಾಲೂಕು ಅಧ್ಯಕ್ಷ ಮಂಜು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಸುರೇಶ್ ಶೆಟ್ಟಿ, ರಾಮನಾಥತುಂಗ ಗ್ರಾಪಂ ಅಧ್ಯಕ್ಷೆ ಮಾಳಮ್ಮ, ಹಿಟ್ನೆಹೆಬ್ಬಾಗಿಲು ಗ್ರಾಪಂ ಅಧ್ಯಕ್ಷೆ ಛಾಯಾಮಣಿ, ಸಂಸ್ಥೆ ಮೇಲ್ವಿಚಾರಕಿ ಗೀತಾ, ಸುಂದರಮ್ಮ ಸೇರಿದಂತೆ ಇತರರಿದ್ದರು.

7ನೇ ವರ್ಷದ ಸವಿನೆನಪು



ನೀವು ಮರೆಯಾಗಿ 7 ವರ್ಷಗಳು ಕಳೆದರು ನಿಮ್ಮ ನೆನಪು ಸದಾ ಮನಸ್ಸಿನಲ್ಲಿದೆ.
ಮಗ ಬಿ.ನಾಗೇಂದ್ರ ಕುಮಾರ್, ಸೊಸೆ ಶಿಲ್ಪ, ಮೊಮ್ಮಗಳು ಎನ್.ಹರ್ಷಿತಾ, ಅಳಿಯ ಮಹಾದೇವು, ಮೊಮ್ಮಗ ಎಂ.ವಿಹಾನ್ ಗೌಡ
ತಮ್ಮ ನಂಜುಂಡಯ್ಯ ಅವರ ಮಗ ಎನ್.ಮಂಜುನಾಥ್

ಶ್ರೀಮತಿ ಗೌರಮ್ಮ

ಮೊದಲನೇ ವರ್ಷದ ಪುಣ್ಯಸ್ಮರಣೆ



ಸಿ ಶಿವಕುಮಾರ್

ನಿಮ್ಮ ಪವಿತ್ರವಾದ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ನಿಮ್ಮ ಮಾರ್ಗ ದರ್ಶನದಲ್ಲೇ ನಡೆಯುತ್ತಿರುವ ನಿಮ್ಮ ಕುಟುಂಬವರ್ಗದವರು

1st Year Remembrance
of our beloved Papa in Heaven



"Those we love don't go away, they walk beside us every day unseen unheard, but always near, still loved, still missed and very dear" words are not enough to tell you how much we miss you papa... we always feel so lucky to have been your child. we miss the way you made each of us feel special and loved. You'll always be in our hearts because in their you are still alive.

Sunanda Raj
Demise date 28.10.2021

Your grieving daughters
Ramya and Vinutha.

ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀ ಜೀವನ್.ಎಂ.ಕೆ.
ಮತ್ತು
ಶ್ರೀಮತಿ ಐಶ್ವರ್ಯ.ಎಲ್



ಶುಭಕೋರುವವರು:
ಶ್ರೀಮತಿ ರೇಣುಕಾ ಮತ್ತು
ಶ್ರೀ ಎಂ.ಎನ್.ಸತೀಶ್
ಧನಲಕ್ಷ್ಮಿ ಬ್ರೀಡರ್ಸ್,
ಚನ್ನರಾಯಪಟ್ಟಣ,
ಹಾಸನ ಜಿಲ್ಲೆ

GOVERNMENT OF INDIA
MINISTRY OF ENVIRONMENT, FOREST AND CLIMATE CHANGE REGIONAL MUSEUM OF NATURAL HISTORY
(A Regional Centre of National Museum of Natural History)
T. NARASIPURA ROAD, SIDDHARTHNAGAR
MYSORE-570011, Telephone: 0821-2447046/2446453
Email: rmnh.mys-mefcc@gov.in

AUCTION NOTICE

Regional Museum of Natural History, Siddarthanagara, Mysore is having unused e-waste is to be sold/auctioned through public auction on **29.10.2022 at 03:00pm** at museum premises. Interested bidders are requested to attend the auction. For terms and conditions please download document from link: https://drive.google.com/file/d/1Pp01Qdff6GvMuZAnHfufnAhqPlmwf7Tz/view?usp=sharing

Scientist - C & Head of Office

ಒಂದನೇ ವರ್ಷದ ಸವಿನೆನಪು

ದಿ|| ಸಿದ್ದೇಗೌಡ
(ನಿವೃತ್ತ ಕೆ.ಆರ್.ಆಸ್ಪತ್ರೆ ಉದ್ಯೋಗಿ)



ದುಃಖತಪ್ತರು: ಮೃತರ ಪತ್ನಿ ಮಂಚಮ್ಮ, ಗಂಡು ಮಕ್ಕಳು, ಹೆಣ್ಣುಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬಸ್ಥರು, ಕುಂಬಾರಕೊಪ್ಪಲು, ಮೈಸೂರು.
ಪ್ರಕಟಣೆ: ಎಸ್.ರವಿ, ವಿಶ್ವಾಸ್ ಶಾಮಿಯಾನ, ಸೂರ್ಯಬೇಕರಿ, ಮೈಸೂರು. ಮೊ: 9945281878

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್ ಐಟಂಗಳಲ್ಲಿ ನಮೂದಿಸಿರುವ ಸ್ವತ್ತುಗಳನ್ನು, ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ವಿ.ವಿ.ಮೊಹಲ್ಲ, ಕಾಳಿದಾಸ ರಸ್ತೆ, 13ನೇ ಅಡ್ಡ ರಸ್ತೆ, ಮನೆ ನಂಬರ್ 1 ಬಿ "ರುಬಾಲ ನಿವಾಸಿಗಳಾದ, ಪಿ.ಧರ್ಮರಾಜ ಚೆಟ್ಟಿ ಬಿನ್ ಲೇಟ್ ಸಿ.ಪೆರುಮಲ್ ಚೆಟ್ಟಿ ಮತ್ತು ಇವರ ಇತರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ-1

ಮೈಸೂರು, ದೇವರಾಜ ಮೊಹಲ್ಲ, 'ಎ' ಶಿವರಾಂಪೇಟೆ ರಸ್ತೆ, ವಿನೋಬ ರಸ್ತೆಯಲ್ಲಿರುವ ವಾಣಿಜ್ಯ ಉಪಯೋಗದ ಸ್ವತ್ತಿನ ಸಂಖ್ಯೆ 1647 D-55, 1647/A D-55/A, 1647/1 D-55/1, 1647/2 D-55/2, 1647/3 D-55/3, 1647/11 D-55/11, 1647/12 D-55/12, 1647/13 D-55/13, 1647/14 D-55/14, 1647/16 D-55/16, 1647/17 D-55/17, 1647/18 D-55/18 & 1647/19 D-55/19 ಪೂರ್ವದಿಂದ ಪಶ್ಚಿಮಕ್ಕೆ ದಕ್ಷಿಣದ ಕಡೆ 64 ಅಡಿ, ಉತ್ತರದ ಕಡೆ 74 1/2 ಅಡಿ ಮತ್ತು ಉತ್ತರ ದಕ್ಷಿಣ ಪೂರ್ವದ ಕಡೆ 23.9 ಅಡಿ, 9 ಅಡಿ, 30 ಅಡಿ, ಪಶ್ಚಿಮದ ಕಡೆ 55.7 ಅಡಿ ಒಟ್ಟು ವಿಸ್ತೀರ್ಣ 3720 ಚದರ ಅಡಿ ಖಾಲಿ ವಾಣಿಜ್ಯ ಸ್ವತ್ತು ಮತ್ತು ಇದಕ್ಕೆ ಚಕ್ಕುಬಂದಿ:-

ಪೂರ್ವಕ್ಕೆ:- ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಆರ್.ವಿ.ರಾಮಚಂದ್ರ ರಾವ್ ಆರ್.ವಿ. ಲಕ್ಷಣ ರಾವ್ ರವರ ಸ್ವತ್ತು ಮತ್ತು ಗಲ್ಲಿ, ಉತ್ತರಕ್ಕೆ : ಪ್ರವೀನ್ ಡಿ.ಚೆಟ್ಟಿ ರವರ ಸ್ವತ್ತು, ದಕ್ಷಿಣಕ್ಕೆ: ಶಿವರಾಂಪೇಟೆ ಮುಖ್ಯ ರಸ್ತೆ.

ಐಟಂ-2

ಮೈಸೂರು, ದೇವರಾಜ ಮೊಹಲ್ಲ, 'ಎ' ಶಿವರಾಂಪೇಟೆ ರಸ್ತೆ, ವಿನೋಬ ರಸ್ತೆಯಲ್ಲಿರುವ ವಾಣಿಜ್ಯ ಉಪಯೋಗದ ಸ್ವತ್ತಿನ ಸಂಖ್ಯೆ 1647/15, ಹೊಸ ಸಂಖ್ಯೆ D-55/15, ಪೂರ್ವದಿಂದ ಪಶ್ಚಿಮ 65.00+41.06/2 ಅಡಿ ಮತ್ತು ಉತ್ತರ ದಕ್ಷಿಣ 50.00+08.00/2, ಒಟ್ಟು ವಿಸ್ತೀರ್ಣ 1544 ಚದರ ಅಡಿ ಖಾಲಿ ವಾಣಿಜ್ಯ ನಿವೇಶನ ಮತ್ತು ಇದಕ್ಕೆ ಚೆಕ್ಕುಬಂದಿ. ಪೂರ್ವಕ್ಕೆ: ರಾಮ್‌ದಾಸ್ ಭಟ್ ರವರ ಸ್ವತ್ತು, ಪಶ್ಚಿಮಕ್ಕೆ: ಗಲ್ಲಿ, ಉತ್ತರಕ್ಕೆ : ಸಿ.ಪಿ.ನಂಜುಂಡ ಚೆಟ್ಟಿ ರವರ ಸ್ವತ್ತು, ದಕ್ಷಿಣಕ್ಕೆ: ಪಿ.ಧರ್ಮರಾಜ ಚೆಟ್ಟಿ ರವರ ಸ್ವತ್ತು.

Sd/- M.N.Praksah Kalappa
KAR-1996-2000
Advocate & Legal Consultant, #67/7A, P.R.I. Complex No.2 & 3, 1st Floor, New Sayyaji Rao Road, Fort Mohalla, Mysuru-570004
Mob: 9343112535

ಮೈಸೂರು : 27/10/2022

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ. ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಹಳ್ಳಿ ಗ್ರಾಮದ ನಿವಾಸಿಯಾದ ಹೇಮಾವತಿ ಕೋಂ. ಲೇಟ್. ದೇವರಾಜು ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದಾರು ಯಾವುದೇ ರೀತಿಯ ಹಕ್ಕು ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಶ್ಯಾದನಹಳ್ಳಿ ಗ್ರಾಮದ ಸರ್ವೆ ನಂಬರ್.5/5ರಲ್ಲಿನ ಮೂರು ಎಕರೆ ಒಂದು ಗುಂಟೆ (3.01.00.00) ವಿಸ್ತೀರ್ಣದ ಖುಷ್ಕಿ ಕೃಷಿ ಜಮೀನಿಗೆ ಚೆಕ್ಕುಬಂದಿ:

ಪೂರ್ವಕ್ಕೆ: ವರುಣ ಕಾಲುವೆ, ಪಶ್ಚಿಮಕ್ಕೆ: ಕಲ್ಲು ಮಂಟ ಮತ್ತು ಹಳ್ಳ, ಉತ್ತರಕ್ಕೆ: ವೀಣಾ ಪ್ರಸಾದ್ ರವರ ಜಮೀನು. ದಕ್ಷಿಣಕ್ಕೆ: ಸರ್ವೆ ನಂಬರ್:7/2

Sd/- M.N. Prakash Kalappa
KAR-1996-2000, Advocate & Legal Consultant, # 67/7A, P.R.I. complex, No.2&3, 1st foor, New Sayyaji Rao Road, Fort Mohalla, Mysuru-570004

ಸ್ಥಳ: ಮೈಸೂರು, ದಿನಾಂಕ: 27.10.2022

Mysore Vellala Association (Regd)
#76, M.V.A, Building, Manasara Road, Indiranagar, Mysuru-570 010, Ph: 0821-2433961

ಅಜೀವ ಸದಸ್ಯರಿಗೆ ಗುರುತಿನ ಚೀಟಿ ವಿತರಣೆ

ನಮ್ಮ ಈ ಮೇಲ್ಕಂಡ ಸಂಘಕ್ಕೆ ಅಜೀವ ಸದಸ್ಯರಾಗಿರುವವರು ಇರುವುದು ಸರಿಯಷ್ಟೆ, ನಮ್ಮ ಸಂಘದ ವತಿಯಿಂದ ಅಜೀವ ಸದಸ್ಯರಿಗೆ ನಮ್ಮ ಸಂಘದ ಗುರುತಿನ ಚೀಟಿ ಕೊಡಲು ಸಂಘವು ತೀರ್ಮಾನಿಸಿರುವುದರಿಂದ ನಮ್ಮ ಸಂಘದ ಅಜೀವ ಸದಸ್ಯರು ದಿನಾಂಕ: 14.11.2022ರ ಒಳಗೆ ಸಂಘಕ್ಕೆ ಬಂದು ಎರಡು ಸ್ಟ್ಯಾಂಪ್ ಸೈಜ್ ಫೋಟೋಗಳೊಂದಿಗೆ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಹಾಗೂ ಸಂಜೆ 6.00 ಗಂಟೆಯಿಂದ 7.00 ಗಂಟೆಯವರೆಗೆ ಬಂದು ಪಡೆಯಬೇಕೆಂದು ನಮ್ಮ ಸಂಘದ ಅಜೀವ ಸದಸ್ಯರಿಗೆ ಈ ಮೂಲಕ ಸೂಚಿಸಲಾಗಿದೆ, ಹಾಗೂ ನಮ್ಮ ಸಂಘದ ಚುನಾವಣೆಗಾಗಿ ಈ ಗುರುತಿನ ಚೀಟಿಯನ್ನು ಅಜೀವ ಸದಸ್ಯರಿಗೆ ವಿತರಿಸಲಾಗುವುದು. **ಸಹಿ/- ಕಾರ್ಯದರ್ಶಿ**

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ, ಮೈಸೂರು ಜಿಲ್ಲೆ.
PATTANA PANCHYATHI, RAMMANAHALLI, MYSURU DISTRICT - 570019
Emai: itstaff_ulb_rammanahalli@yahoo.com www.rammanahalli.mrc.gov.in

ಸಂ:ಪಪಂರ:ಕಂ.ಶಾ:ಪಿ.ಆರ್-01/2022-23 ದಿ: 25/10/2022

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಶ್ರೀ ಎಂ. ಲಕ್ಷ್ಮಿ ಚಂದ್ ಜೈನ್ ಬಿನ್ ಮಾಂಗೀಲಾಲ್ ಜೈನ್. ರವರ ಖಾತೆ ಸಂಖ್ಯೆ: 427/398 ನಿವೇಶನ ಸಂಖ್ಯೆ 3 ಮತ್ತು 4 ರ ಆಸ್ತಿಯು ಸದರಿಯವರ ಹೆಸರಿನಲ್ಲಿದ್ದು, ಸದರಿ ಖಾತೆ ಸಂಖ್ಯೆ: 427/398 ರ ಆಸ್ತಿಯ ಅಳತೆ 60*249 ಅಡಿಗಳುಳ್ಳ ಖಾಲಿ ನಿವೇಶನದ ಆಸ್ತಿಗೆ ಚೆಕ್ಕುಬಂದಿ. ಪೂರ್ವ: ಎಂ.ಲಕ್ಷ್ಮಿ ಚಂದ್ ಜೈನ್ ಬಿನ್ ಮಾಂಗೀಲಾಲ್ ಜೈನ್ ರವರಿಗೆ ಸೇರಿದ ಸ್ವತ್ತು, ಪಶ್ಚಿಮ: ಎಂ ಎಸ್ ಬಸವಣ್ಣ ರವರಿಗೆ ಸೇರಿದ ಸ್ವತ್ತು, ಉತ್ತರಕ್ಕೆ: ಸರ್ವೆ ನಂ. 24/1 ಮತ್ತು 24/2 ಕುರುಬರಹಳ್ಳಿ ಪಾಪಣ್ಣ ರವರಿಗೆ ಸೇರಿದ ಸ್ವತ್ತು, ದಕ್ಷಿಣ: ಮೈಸೂರು - ಬನ್ನೂರು ಮುಖ್ಯರಸ್ತೆಯ ಆಸ್ತಿಯನ್ನು ಶ್ರೀ ಮೋಹನ್ ಕುಮಾರ್ ಜೆ ಬಿನ್ ಲೇ ಜವರಪ್ಪ ರವರ ಹೆಸರಿಗೆ, ಖಾತೆ ಸಂಖ್ಯೆ: 427/398/3 ಸ್ವತ್ತಿನ ಅಳತೆ 24*243 ಅಡಿಗಳುಳ್ಳ ಖಾಲಿ ನಿವೇಶನದ ಆಸ್ತಿಗೆ ಚೆಕ್ಕುಬಂದಿ. ಪೂರ್ವ: ಕೆ. ಶ್ರೀಧರ ರವರಿಗೆ ಮಾರಾಟ ಮಾಡಲಾಗುತ್ತಿರುವ ಸ್ವತ್ತು, ಪಶ್ಚಿಮ: ಸುಧಾರವರಿಗೆ ಮಾರಾಟ ಮಾಡಲಾಗುತ್ತಿರುವ ಸ್ವತ್ತು, ಉತ್ತರ: ಸರ್ವೆ ನಂ. 24/1 ಮತ್ತು 24/2 ಕುರುಬರಹಳ್ಳಿ ಪಾಪಣ್ಣ ರವರಿಗೆ ಸೇರಿದ ಸ್ವತ್ತು, ದಕ್ಷಿಣ: ಮೈಸೂರು - ಬನ್ನೂರು ಮುಖ್ಯ ರಸ್ತೆಯ ಆಸ್ತಿಯನ್ನು ಶ್ರೀ ಬಸವರಾಜು. ಎಂ ಬಿನ್ ಲೇ ಮಾಲಯ್ಯರವರ ಹೆಸರಿಗೆ ಮತ್ತು ಖಾತೆ ಸಂಖ್ಯೆ: 427/398/4 ರ ಸ್ವತ್ತಿನ ಅಳತೆ 47*234 ಅಡಿಗಳುಳ್ಳ ಖಾಲಿ ನಿವೇಶನದ ಆಸ್ತಿಗೆ ಚೆಕ್ಕುಬಂದಿ. ಪೂರ್ವ: ವೆಲ್ ಕ್ಲೋಸ್ ಆಯಿಲ್ ಮಿಲ್ ರವರಿಗೆ ಸೇರಿದ ಸ್ವತ್ತು, ಪಶ್ಚಿಮ : ಬಸವರಾಜು ಎಂ ರವರಿಗೆ ಮಾರಾಟ ಮಾಡಲಾಗುತ್ತಿರುವ ಸ್ವತ್ತು, ಉತ್ತರ: ಸರ್ವೆ ನಂ.24/1 ಮತ್ತು 24/2 ಕುರುಬರಹಳ್ಳಿ ಪಾಪಣ್ಣ ರವರಿಗೆ ಸೇರಿದ ಸ್ವತ್ತು, ದಕ್ಷಿಣ: ಮೈಸೂರು - ಬನ್ನೂರು ಮುಖ್ಯ ರಸ್ತೆಯ ಆಸ್ತಿಯನ್ನು ಶ್ರೀ ಕೆ. ಶ್ರೀಧರ ಬಿನ್ ಲೇ ಕೃಷ್ಣಪ್ಪ ರವರ ಹೆಸರಿಗೆ ಖಾತೆ ಮಾಡಿಕೊಡಲು ಈ ಕಛೇರಿಗೆ ಮನವಿ ಸಲ್ಲಿಸುವುದರಿಂದ ಸದರಿ ಆಸ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ ಲಿಖಿತ ಸಮರ್ಥ ದಾಖಲಾತಿಗಳನ್ನು 07 ದಿನಗಳೊಳಗೆ ಈ ಕಛೇರಿಗೆ ಹಾಜರು ಪಡಿಸುವಂತೆ ತಿಳಿಸಲಾಗಿದೆ.

ಸಹಿ/- ಮುಖ್ಯಾಧಿಕಾರಿ
ಪಟ್ಟಣಪಂಚಾಯಿತಿ, ರಮ್ಮನಹಳ್ಳಿ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ವಿಶೇಷ ತಹಶೀಲ್ದಾರ್‌ರವರ ಕಛೇರಿ, (ಕೆ.ಎಸ್.ಎಫ್.ಸಿ) ಸರ್ಕಲ್-2, ಸಾಹುಕಾರ್ ಚನ್ನಯ್ಯ ರಸ್ತೆ, ಶ್ರೀಕೃಷ್ಣಧಾಮ ಎದುರು, ಸರಸ್ವತಿಪುರಂ, ಮೈಸೂರು-570 009. ದೂ:0821-2344524

ನಂ.ಕರಾಹಸಂ/ಮೈ/ವಿತ/ಎ-524/2022-23/1066 ದಿನಾಂಕ: 19-10-2022

ಬಹಿರಂಗ ಹರಾಜು ಪ್ರಕಟಣೆ

ಈ ಕೆಳಗೆ ಕಾಣಿಸಿದ ಕಲಂ (1) ರ ಘಟಕಗಳ ಬಾಬ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ತೆಗೆದುಕೊಂಡ ಸಾಲದ ಬಾಕಿ ಹಣವನ್ನು ಸಂಸ್ಥೆಗೆ ಮರು ಪಾವತಿ ಮಾಡದೇ ಇದ್ದುದರಿಂದ, (1) **ಡಾ. ಮಹೇಶ್ ಚಂದ್ ಬಿನ್ ಮಂಚೇಗೌಡ ಹಾಗೂ** (2) **ಶ್ರೀಮತಿ ಚೇತನಾಸಿಂಗ್ ಬಿನ್ ಸಿ.ಎನ್.ಸಿಂಗ್ ರವರು ಸಾಲಗಾರರಾಗಿರುವ ಮತ್ತು ಡಾ. ಮಹೇಶ್ ಚಂದ್ ಬಿನ್ ಮಂಚೇಗೌಡ** ಹಕ್ಕಿನಲ್ಲಿರುವ ಪ್ರಾಥಮಿಕ ಭದ್ರತೆಯ ಈ ಕೆಳಗೆ ಕಾಣಿಸಿರುವ ಕಲಂ (2) ರ ಸ್ಥಿರಾಸ್ತಿ ಜಮೀನನ್ನು "ಎಲ್ಲಿ ಹೇಗಿವೆಯೋ ಹಾಗೆಯೇ" ಭೂಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲು ಮಾಡಲು ಕೆಳಗೆ ಕಲಂ (3) ರಲ್ಲಿ ಕಾಣಿಸಿದ ಸ್ಥಳದಲ್ಲಿ ಮತ್ತು ದಿನಾಂಕದಂದು ಹರಾಜು ನಡೆಸಲಾಗುವುದು. ಸದರಿ ಎರಡು ಹರಾಜು ಪ್ರಕ್ರಿಯೆಯಲ್ಲಿ ಬಾಗವಹಿಸಲಿಚ್ಚಿಸುವವರು ಪ್ರತಿ ಹರಾಜಿಗೆ ತಲಾ **ರೂ.5.00,000/- (ಐದು ಲಕ್ಷ ರೂಪಾಯಿಗಳು ಮಾತ್ರ)** ದಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆಯ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮುಖೇನ ಠೇವಣಿ ಮೊಬಲಗನ್ನು ಪಾವತಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಜಮೀನು ಕೊಳ್ಳಲು ಹರಾಜಿನಲ್ಲಿ ಅಂತಿಮ ಬಿಡ್ಡುದಾರರು ಸ್ಥಳದಲ್ಲಿಯೇ ಬಿಡ್ ಮಾಡಿದ ಮೊತ್ತದ 1/4ನೇ ಭಾಗದ ಹಣವನ್ನು ಸ್ಥಳದಲ್ಲಿ ಪಾವತಿಸಿ ಉಳಿದ ಪೂರ್ತಿ ಹಣವನ್ನು ಹರಾಜು **ದಿನಾಂಕದಿಂದ 15 ದಿನಗಳೊಳಗಾಗಿ** ತಪ್ಪದೇ ಪಾವತಿ ಮಾಡತಕ್ಕದ್ದು.

ಘಟಕದ ಬಾಕಿದಾರರ ಹೆಸರು ಮತ್ತು ವಿಳಾಸ	ಸಾಲಗಾರರ ಸ್ಥಿರಾಸ್ತಿಯ ವಿವರ	ಬಹಿರಂಗ ಹರಾಜು ಬಗ್ಗೆ ನಿಗದಿಪಡಿಸಿದ ದಿನಾಂಕ & ಸ್ಥಳ
ಡಾ.ಮಹೇಶ್ ಚಂದ್ ಮತ್ತು ಶ್ರೀಮತಿ ಚೇತನಾಸಿಂಗ್, ಮಾಲೀಕರು, ಮೆ.ವೆಂಕಟೇಶ್ವರ ಸಿರಾಮಿಕ್ ಅಂಡ್ ಟೈಲ್ಸ್, ದಡದಹಳ್ಳಿ, ಜಯಪುರ ಹೋಬಳಿ, ಮೈಸೂರು ತಾ.	ಮೈಸೂರು ತಾಲ್ಲೂಕು ಜಯಪುರ ಹೋಬಳಿ ದಡದಹಳ್ಳಿ ಗ್ರಾಮದ ಸ.ನಂ.176/1 ಹೊಸ ನಂ.176/5 ರಲ್ಲಿ 1.10 ಗುಂಟೆ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಜಮೀನು.	ದಿನಾಂಕ: 16-11-2022 ಬುಧವಾರ ಬೆಳಿಗ್ಗೆ 11.00 ಗಂಟೆಗೆ ಆಸ್ತಿ ಇರುವ ಸ್ಥಳದಲ್ಲಿ
ಡಾ.ಮಹೇಶ್ ಚಂದ್, ಮಾಲೀಕರು, ಮೆ.ವೆಂಕಟೇಶ್ವರ ಬ್ರಿಕ್ಸ್ ವರ್ಕ್ಸ್, ದಡದಹಳ್ಳಿ, ಜಯಪುರ ಹೋಬಳಿ, ಮೈಸೂರು ತಾ.	ಮೈಸೂರು ತಾಲ್ಲೂಕು ಜಯಪುರ ಹೋಬಳಿ ದಡದಹಳ್ಳಿ ಗ್ರಾಮದ ಸ.ನಂ.180/4 ರಲ್ಲಿ 1.09 ಗುಂಟೆ ಸ.ನಂ.176/1 ಹೊಸ ನಂ.176/5 0.20 ಗುಂಟೆ ಒಟ್ಟು 1.29 ಗುಂಟೆ ಕೈಗಾರಿಕೆ ಉದ್ದೇಶಕ್ಕಾಗಿ ಭೂಪರಿವರ್ತಿತ ಜಮೀನು.	ದಿನಾಂಕ: 16-11-2022 ಬುಧವಾರ ಬೆಳಿಗ್ಗೆ 11.30 ಗಂಟೆಗೆ ಆಸ್ತಿ ಇರುವ ಸ್ಥಳದಲ್ಲಿ

ಹರಾಜು ಷರತ್ತುಗಳು: (1) ಹರಾಜಿನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರತಕ್ಕದ್ದು, ಹರಾಜಿಗೆ ಮುನ್ನ ಬಿಡ್ಡುದಾರಿಕೆ ಫಾರಂ ಪಡೆದು ಪೂರ್ಣ ರೂಪದಲ್ಲಿ ತುಂಬಿ ಠೇವಣಿ ಮೊತ್ತ ಪ್ರತಿ ಹರಾಜಿಗೆ **ರೂ.5,00,000/- (ಐದು ಲಕ್ಷ ರೂಪಾಯಿಗಳು ಮಾತ್ರ) ಗಳಂತೆ** ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆ, ಇವರ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಮುಖೇನ ನೀಡಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ಬಿಡ್ಡುದಾರರು ಖುದ್ದು ಹಾಜರಿರುವುದು, ಬಿಡ್ಡುದಾರರ ಪರವಾಗಿ ಇತರೆಯವರು ಹಾಜರಿಯಾಗುವಂತಿಲ್ಲ. (2) ಬಿಡ್ಡುದಾರರು ಅವರ ಮೂಲ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್‌ಗಳನ್ನು ಹರಾಜು ಸಂದರ್ಭದಲ್ಲಿ ತೋರಿಸಬೇಕು ಹಾಗೂ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು. ಬಿಡ್ಡುದಾರರು ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು. (3) ಬಹಿರಂಗ ಹರಾಜು ಮುಖೇನ ಮಾರಾಟಕ್ಕಿರುವ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗಿರುವ" ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (4) ಕೈಗಾರಿಕಾ ಉದ್ದೇಶಕ್ಕೆ ಭೂ ಪರಿವರ್ತನೆಯಾದ ಮೇಲ್ಕಂಡ ಸ್ಥಿರಾಸ್ತಿಯನ್ನು ಸಕ್ಷಮ ಪ್ರಾಧಿಕಾರದಲ್ಲಿ ಬಾಕಿ ಇರುವ ಎಲ್ಲಾ ತೆರಿಗೆಗಳನ್ನು ಪಾವತಿಸಿ ಖಾತೆ ಮಾಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಬಿಡ್‌ದಾರರದ್ದಾಗಿರುತ್ತದೆ. (5) ಹರಾಜಿನಲ್ಲಿ ವಿಜೇತರಾದ (ಅಂತಿಮ ಬಿಡ್ಡುದಾರರು) ಆಖೈರು ಬಿಡ್ಡು ಮೊಬಲಗಿನ 25% ರಷ್ಟನ್ನು ಸ್ಥಳದಲ್ಲೇ ಪಾವತಿಸಿ, ಉಳಿಕೆ ಮೊಬಲಗನ್ನು ಹರಾಜು ನಡೆಸಿದ ದಿನಾಂಕದಿಂದ **15 ದಿವಸಗಳೊಳಗಾಗಿ** ತಪ್ಪದೇ ಪಾವತಿ ಮಾಡತಕ್ಕದ್ದು. ತಪ್ಪಿದ್ದಲ್ಲಿ ಪಾವತಿಸಿರುವ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (6) ಹರಾಜಿನ ದಿನಾಂಕದಿಂದ **90 ದಿವಸಗಳೊಳಗಾಗಿ** ಆಕ್ಷೇಪಣೆ/ತಂಟೆ/ತಕರಾರು/ಭಿನ್ನಾಭಿಪ್ರಾಯ/ನ್ಯಾಯಾಲಯದ ಪ್ರಕರಣಗಳು ಉಂಟಾದಲ್ಲಿ ಸದರಿ ಹರಾಜನ್ನು ಅಂಗೀಕರಿಸುವ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುವರು. (7) ಸ್ಥಿರಾಸ್ತಿಯ ಭೂಕಂದಾಯ, ನೀರು, ವಿದ್ಯುತ್, ವಾಣಿಜ್ಯ ತೆರಿಗೆ, ಯಾವುದೇ ಬಾಕಿ ಅಥವಾ ಯಾವುದೇ ಇಲಾಖೆಯ ಬಾಕಿಯನ್ನು ಖರೀದಿದಾರರೇ ಭರಿಸಲು ಬಾಧ್ಯಸ್ಥರು. (8) ಕರ್ನಾಟಕ ಭೂಕಂದಾಯ ಕಾಯ್ದೆಯ ಅನ್ವಯ ಸದರಿ ಹರಾಜು ಸಂಬಂಧಪಟ್ಟ ಉಪವಿಭಾಗಾಧಿಕಾರಿ ಯವರಿಂದ ಸ್ಥಿರೀಕರಣದ ಆದೇಶಕ್ಕೆ ಒಳಪಟ್ಟಿದೆ. ನಂತರ ಸ್ಥಿರಾಸ್ತಿಯನ್ನು ಆಖೈರು ಬಿಡ್ಡುದಾರರಿಗೆ ನೋಂದಣಿ ಮಾಡಿಸಲು ಸೇಲ್ಸ್ ಸರ್ಟಿಫಿಕೇಟನ್ನು ಕೊಡಲಾಗುವುದು. ಇದಕ್ಕೆ ತಗಲುವ ನೋಂದಣಿ, ಸ್ಟಾಂಪ್ ಶುಲ್ಕ ಪ್ರಕ್ರಿಯೆ ಹಾಗೂ ಇತರೆ ಶುಲ್ಕಗಳನ್ನು ಆಖೈರು ಬಿಡ್ಡುದಾರರೇ ಭರಿಸತಕ್ಕದ್ದು. ಸಕ್ಷಮ ಪ್ರಾಧಿಕಾರ ಯಾವುದಾದರೂ ದಾಖಲಾತಿಗಳನ್ನು ಅಪೇಕ್ಷಿಸಿದಲ್ಲಿ ಬಿಡ್ಡುದಾರನು ಒದಗಿಸಲು ಬದ್ಧರಾಗಿರಬೇಕು. (9) ಹರಾಜಿನ ಬಗ್ಗೆ ಹೆಚ್ಚಿನ ವಿವರಗಳು, ಮಾಹಿತಿ ಮತ್ತು ಷರತ್ತುಗಳನ್ನು **ಈ ಕೆಳಗೆ ಸಹಿ ಮಾಡಿರುವವರಿಂದ ಅಥವಾ ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು 0821-2344524 ಅಥವಾ ವ್ಯವಸ್ಥಾಪಕರು (ವಸೂಲಿ) ಶಾಖೆರವರಿಂದ** ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ವಿಶೇಷ ತಹಶೀಲ್ದಾರ್
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು